ಫೆಬ್ರವರಿ 8, 2026
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2023
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಮರ್ಯಾದೆಗೇಡು ತ್ರಿಬಲ್ ಮರ್ಡರ್!

# ತಂಗಿ ಅಪ್ಪ ಅಮ್ಮನ ಕತ್ತರಿಸಿ ಕೊಂದು ಮನೆಯೊಳಗೇ ಗುಂಡಿ ತೋಡಿ ಹೂತ!



ಮಿಸ್ಸಿಂಗ್ ಡ್ರಾಮಾ ಆಡಿ ಸಿಕ್ಕಿಬಿದ್ದ ಹಂತಕ!

## ಮೈಸೂರಿನಲ್ಲಿ ಮತ್ತೆ ಪತ್ತೆ ಆಯ್ತು ಡ್ರಗ್ಸ್ ಲ್ಯಾಬ್!



## ಮಾವನಿಂದಲೇ ಗರ್ಭಿಣಿ ಸೊಸೆ ಹತ್ಯೆ!

## ಕೋಗಿಲು ಕ್ರಾಸ್ 'ವೋಟ್' ಪಾಲಿಟಿಕ್ಸ್!

## ವರನ ಕೊಲೆಗೆ ಯತ್ನಿಸಿ ಲವರ್ ಸಮೇತ ಸಿಕ್ಕಿಬಿದ್ದ ಸುಪ್ನಾತಿ!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

## ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



**ಲಯನ್ ಎಂ. ಮಲ್ಲಿಕಾರ್ಜುನಯ್ಯ**
ಸಂಸ್ಥಾಪಕ ಸಂಪಾದಕರು
ಜನನ : 29-03-1954    ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

## ಶ್ರೀ ಎಂ. ಮಲ್ಲಿಕಾರ್ಜುನಯ್ಯ ಸ್ಥಾಪಿತ 'ಕರ್ನಾಟಕ ಮಲ್ಲ' ದೈನಿಕ

# 35 ವರ್ಷಗಳ ಹೆಮ್ಮೆಯ ಪಯಣ.....

ಮುಂಬೈನಲ್ಲಿ ಪ್ರಕಟಗೊಂಡ ಮೊಟ್ಟಮೊದಲ ಕನ್ನಡ ದಿನಪತ್ರಿಕೆ 'ಕರ್ನಾಟಕ ಮಲ್ಲ'. 'ಪೊಲೀಸ್ ನ್ಯೂಸ್' ವಾರಪತ್ರಿಕೆ ಸ್ಥಾಪಿಸಿ, ಇದರಲ್ಲಿ ಅದ್ಭುತ ಯಶಸ್ಸುಗಳಿಸಿದ ಬೆನ್ನಲ್ಲೇ ನಮ್ಮ ಸಂಪಾದಕರಿಗೆ ಬಾಂಬೆಯಲ್ಲೊಂದು (ಆಗ ಮುಂಬೈ ಅನ್ನು ಬಾಂಬೆ ಅಂತಲೇ ಕರೆಯುತ್ತಿದ್ದುದು) ಕನ್ನಡ ಪತ್ರಿಕೆ ಮಾಡಬೇಕು ಎಂಬ ಮಹದಾಸೆಯಿಂದ ಬಾಂಬೆಯಲ್ಲಿರೋ ತಮ್ಮ ಮಿತ್ರರನ್ನು ಸಂಪರ್ಕಿಸಿ ಕಾರ್ಯತತ್ಪರರಾಗಿಯೇ ಬಿಟ್ಟರು. ಕಡೆಗೂ ಅವರ ಛಲವೇ ಗೆದ್ದು ಕರ್ನಾಟಕ ಮಲ್ಲ ಉದಯವಾಗಿತ್ತು. ಅದೀಗ ತನ್ನ 34 ವರ್ಷಗಳ ಸಾರ್ಥಕ ಸೇವೆಯನ್ನು ಪೂರ್ಣಗೊಳಿಸಿ 35ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವುದು ಮುಂಬೈ ಹಾಗೂ ಮಹಾರಾಷ್ಟ್ರದ ಸಮಸ್ತ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಸ್ಥಾಪಕ ಸಂಪಾದಕರಾದ ದಿವಂಗತ ಎಂ. ಮಲ್ಲಿಕಾರ್ಜುನಯ್ಯ ಅವರ ದೂರದೃಷ್ಟಿ, ಧೈರ್ಯ ಮತ್ತು ಕನ್ನಡ ಭಾಷೆಯ ಮೇಲಿನ ಅಪಾರ ಪ್ರೀತಿ ಈ ಪತ್ರಿಕೆಯ ಜನ್ಮಕ್ಕೆ ಕಾರಣವಾಯಿತು. ವಲಸೆ ಬದುಕಿನ ಒತ್ತಡ, ಭಾಷಾ ಅಸ್ಮಿತೆಯ ಆತಂಕ ಮತ್ತು ಸಂಸ್ಕೃತಿಯ ಉಳಿವಿನ ಸಂಕಟಗಳ ನಡುವೆ ಮುಂಬೈ ಕನ್ನಡಿಗರ ಬದುಕಿಗೆ ಧ್ವನಿಯಾಗಬೇಕೆಂಬ ಮಹತ್ತರ ಉದ್ದೇಶದೊಂದಿಗೆ 'ಕರ್ನಾಟಕ ಮಲ್ಲ' ತನ್ನ ಪಯಣವನ್ನು ಆರಂಭಿಸಿತು.



ಮುಂಬೈಯಂತಹ ಮಹಾನಗರದಲ್ಲಿ ಕನ್ನಡ ಭಾಷೆಯ ದಿನಪತ್ರಿಕೆಯನ್ನು ನಿರಂತರವಾಗಿ ನಡೆಸುವುದು ಸವಾಲಿನ ಕಾರ್ಯವಾಗಿದ್ದರೂ, ಓದುಗರ ವಿಶ್ವಾಸ, ಸಂಘ ಸಂಸ್ಥೆಗಳ ಬೆಂಬಲ ಮತ್ತು ಜಾಹೀರಾತುದಾರರ ಸಹಕಾರದಿಂದ 'ಕರ್ನಾಟಕ ಮಲ್ಲ' ತನ್ನ ಸ್ಥಾನವನ್ನು ಅಚಲವಾಗಿ ಕಾಪಾಡಿಕೊಂಡು ಬಂದಿದೆ. ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಬದುಕಿನ ಪ್ರತಿಯೊಂದು ಹಂತದಲ್ಲೂ ಈ ಪತ್ರಿಕೆ ಕನ್ನಡಿಗರ ಧ್ವನಿಯಾಗಿ ಕಾರ್ಯನಿರ್ವಹಿಸಿದೆ. ಮುಂಬೈ ಕನ್ನಡಿಗರ ಸಮಸ್ಯೆಗಳು, ಅವರ ಸಾಧನೆಗಳು, ಸಂಘಟನೆಗಳ ಚಟುವಟಿಕೆಗಳು, ಸಾಹಿತ್ಯ ಸಂಸ್ಕೃತಿಯ ಕಾರ್ಯಕ್ರಮಗಳು ಹಾಗೂ ಯುವ ಪ್ರತಿಭೆಗಳ ಬೆಳವಣಿಗೆಗೆ ಸದಾ ವೇದಿಕೆ ಒದಗಿಸಿರುವುದು 'ಕರ್ನಾಟಕ ಮಲ್ಲ'ದ ಹೆಗ್ಗಳಿಕೆಯಾಗಿದೆ.

ಕನ್ನಡ ಭಾಷೆ ಕೇವಲ ಸಂವಹನದ ಸಾಧನವಲ್ಲ, ಅದು ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ಆತ್ಮಗೌರವದ ಪ್ರತೀಕ ಎಂಬ ನಂಬಿಕೆಯನ್ನು 'ಕರ್ನಾಟಕ ಮಲ್ಲ' ಸದಾ ಪ್ರತಿಪಾದಿಸಿಕೊಂಡು ಬಂದಿದೆ. ವಲಸೆ ಬದುಕಿನ ನಡುವೆ ಭಾಷೆಯ ಬೇರುಗಳು ಸಡಿಲವಾಗಬಾರದೆಂಬ ಉದ್ದೇಶದಿಂದ ಕನ್ನಡದ ಅಕ್ಷರ, ಆಲೋಚನೆ ಮತ್ತು ವಿಚಾರಧಾರೆಗಳನ್ನು ನಿರಂತರವಾಗಿ ಓದುಗರ ಮನೆಬಾಗಿಲಿಗೆ ತಲುಪಿಸುವ ಕಾರ್ಯವನ್ನು ಪತ್ರಿಕೆ ಯಶಸ್ವಿಯಾಗಿ ನಿರ್ವಹಿಸಿದೆ. ಈ

☞ 3

# ಯುಜಿಸಿ ಮಾಡಿರುವ ಭಾರಿ ಎಡವಟ್ಟು.....!!



ಸಂಪಾದಕ
**ಎಂ. ರಾಹುಲ್**

..............................

ವಿದ್ಯಾರ್ಜನೆಗೆ ಬರುವ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳನ್ನು ಗೋಳು ಹೊಯ್ದು ಕೊಳ್ಳುವುದು, ಅವರನ್ನು ಅವಹೇಳನ ಮಾಡುವುದು ಮತ್ತು ಅವರ ಅವಕಾಶಗಳಿಗೆ ಅಡ್ಡಿಯುಂಟು ಮಾಡುವ ಹೀನ ಪ್ರವೃತ್ತಿಯು ಹಲವಾರು ಕ್ಯಾಂಪಸ್ ಗಳಲ್ಲಿ ಸಂಭವಿಸಿದೆ. ಈ ಅಮಾನವೀಯ ನಡವಳಿಕೆಗೆ ನೂರಾರು ವಿದ್ಯಾರ್ಥಿಗಳು ಮಾನಸಿಕ ಹಿಂಸೆ ಒಳಗಾಗಿದ್ದಾರೆ ಕೆಲವರು ತಮ್ಮ ಓದನ್ನು ಅರ್ಧಕ್ಕೆ ತೊರೆದು ಹೋಗಿದ್ದಾರೆ.

ಮುಂಬಯಿನ ಬಿವೈಎಲ್ ನಾಯರ್ ಆಸ್ಪತ್ರೆಯಲ್ಲಿ ಆದಿವಾಸಿ ಸಮುದಾಯಕ್ಕೆ ಸೇರಿದ್ದ ಡಾ॥ ಪಾಯಲ್ ತಡ್ವಿಯನ್ನು ಅವಳ ಮೂರು ಜನ ಸಹೋದ್ಯೋಗಿಗಳು ನಿರಂತರ ಜಾತಿ ತಾರತಮ್ಯ ಮತ್ತು ಬೆದರಿಸುತ್ತಿದ್ದರಿಂದ ಮೇ 2019 ರಲ್ಲಿ ಆಕೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಈ ಪ್ರಕರಣವು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿವಾದದ ವಿರುದ್ಧ ವ್ಯಾಪಕ ಪ್ರತಿಭಟನೆ ನಡೆಯಿತು ಮತ್ತು ಹೆಚ್ಚು ಕಠಿಣವಾದ ಭೇಡನೆಯ ವಿರೋಧಿ ನೀತಿಗೆ ಬೇಡಿಕೆ ಹೆಚ್ಚಾಗುತ್ತದೆ.

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ರೋಹಿತ್ ವೇಮುಲಾ ಮತ್ತು ಪಾಯಲ್ ತಡ್ವಿ ಇಬ್ಬರೂ ತಮ್ಮ ವಿಶ್ವವಿದ್ಯಾಲಯಗಳಲ್ಲಿ ಜಾತಿ ತಾರತಮ್ಯದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪದ ಹಿನ್ನಲೆಯಲ್ಲಿ, ಕ್ಯಾಂಪಸ್‌ಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಕಠಿಣ ವ್ಯವಸ್ಥೆ ರೂಪಿಸಲು ಕೋರಿ ರೋಹಿತ್ ವೇಮುಲಾ ಮತ್ತು ಪಾಯಲ್ ತಡ್ವಿ ಅವರ ತಾಯಂದಿರಾದ ರಾಧಿಕಾ ವೇಮುಲಾ ಮತ್ತು ಅಬೇದಾ ಸಲೀಂ ತಡ್ವಿ ಅವರು 2019ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸುತ್ತಾರೆ. ಇದಕ್ಕೆ ಸ್ಪಂದಿಸಿದ ಸುಪ್ರೀಂಕೋರ್ಟ್ ''ಯುಜಿಸಿ ಇಕ್ವಿಟಿ ರೆಗ್ಯುಲೇಶನ್ 2012'' ನಿಯಮಕ್ಕೆ ತಿದ್ದುಪಡಿ ತಂದು ಅದನ್ನು ಬಲಪಡಿಸಲು ಆದೇಶಿಸಿತು.

ನ್ಯಾಯಾಲಯದ ಆದೇಶದ ಪ್ರಕಾರ 2012 ನಿಯಾಮವಳಿಗೆ ಆಮೂಲಾಗ್ರ ಬದಲಾವಣೆಯನ್ನು ತಂದು ಅತ್ಯಂತ ಕಠಿಣ ಕಾಯಿದೆಯನ್ನು ಯುಜಿಸಿ (University Grant Commission) ರೂಪಿಸಿ ಜನವರಿ 12,2026 ರಂದು ಹೊಸ ರೆಗ್ಯುಲೇಷನ್ ಬಿಡುಗಡೆ ಮಾಡಿದರು. ಈ ಹೊಸ ನಿಯಮಾವಳಿಗಳ ಅನ್ವಯ ಯಾವುದೇ ವಿದ್ಯಾರ್ಥಿಯು ಜಾತಿ, ಧರ್ಮ, ಲಿಂಗ, ಜನ್ಮಸ್ಥಳ, ಅಂಗವೈಕಲ್ಯ ಅಥವಾ ಭಾಷೆಯ ಆಧಾರದ ಮೇಲೆ ಯಾವ ವಿದ್ಯಾರ್ಥಿಯ ವಿರುದ್ಧವು ತಾರತಮ್ಯ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಕಾಲೇಜುಗಳ ಆಡಳಿತ ಮಂಡಳಿಯು ಪ್ರವೇಶ ಪ್ರಕ್ರಿಯೆ, ಮೌಲ್ಯಮಾಪನ ಹಾಸ್ಟೆಲ್ ಹಂಚಿಕೆ ಮತ್ತು ಸ್ಕಾಲರ್‌ಶಿಪ್ ನೀಡುವಲ್ಲಿ ಯಾವುದೇ ತಾರತಮ್ಯ ಮಾಡುವಂತಿಲ್ಲ. ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯು ತನ್ನ ಆವರಣದಲ್ಲಿ 'ಸಮಾನ ಅವಕಾಶಗಳ ಕೇಂದ್ರ'ವನ್ನು ಸ್ಥಾಪಿಸುವುದು ಕಡ್ಡಾಯವು.




ಈ ಕೇಂದ್ರವು ಹಿಂದುಳಿದ ವರ್ಗಗಳ ಮತ್ತು ಅಂಗವಿಕಲ ವಿದ್ಯಾರ್ಥಿಗಳ ಹಿತರಕ್ಷಣೆ ಹಾಗೂ ಅವರಿಗೆ ಶೈಕ್ಷಣಿಕ ಮತ್ತು ಆರ್ಥಿಕ ಮಾರ್ಗದರ್ಶನ ನೀಡುವ ಜವಾಬ್ದಾರಿ ಹೊಂದಿರುತ್ತದೆ. ಇಕ್ವಿಟಿ ಕಮಿಟಿಯು ಸಂಸ್ಥೆಯ ಮುಖ್ಯಸ್ಥರ ನೇತೃತ್ವದಲ್ಲಿ ಅಧಿಕಾರಿಗಳ ನೇಮಕವಾಗಬೇಕು.ಇದರಲ್ಲಿ SC, ST, OBC, ಮಹಿಳೆಯರು ಮತ್ತು ಅಂಗವಿಕಲರಿಗೆ ಕಡ್ಡಾಯವಾಗಿ ಪ್ರಾತಿನಿಧ್ಯ ಇರಬೇಕು. 2012ರ ಸಮಿತಿಯ ರಚನೆ ಸಮಿತಿಯಲ್ಲಿ ಎಲ್ಲಾ ವರ್ಗಗಳ ಪ್ರಾತಿನಿಧ್ಯದ ಬಗ್ಗೆ ಕಟ್ಟುನಿಟ್ಟಿನ ನಿಯಮವಿರಲಿಲ್ಲ. ಈಗ ಸಮಿತಿಯಲ್ಲಿ SC, ST, OBC ಮತ್ತು ಮಹಿಳಾ ಪ್ರತಿನಿಧಿಗಳು ಇರುವುದು ಕಡ್ಡಾಯ.

ज्ञान-विज्ञान विमुक्तये
UGC
University Grants Commission

ಹೊಸ ನಿಯಮಗಳ ಪ್ರಕಾರ, ದೂರು ಸ್ವೀಕರಿಸಿದ 24 ಗಂಟೆಗಳ ಒಳಗಾಗಿ ಸಮಿತಿ ಸಭೆ ಸೇರಬೇಕು ಮತ್ತು ನಿಗದಿತ ಅವಧಿಯೊಳಗೆ (ಉದಾಹರಣೆಗೆ 15-60 ದಿನಗಳು) ಪರಿಹಾರ ನೀಡಬೇಕು. 2026 ರ ತಿದ್ದುಪಡಿಯಲ್ಲಿ ಕ್ಯಾಂಪಸ್‌ನ ಆಯಕಟ್ಟಿನ ಸ್ಥಳಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮತ್ತು ತಾರತಮ್ಯವನ್ನು ತಡೆಗಟ್ಟಲು 'ಇಕ್ವಿಟಿ ಸ್ಕ್ವಾಡ್'ಗಳು ಸತತವಾಗಿ ಕಾಲೇಜಿನ ಆವರಣದಲ್ಲಿ ನಿಗಾ ಇಡಬೇಕಾಗಿದೆ. ಈ ನಿಯಮಗಳನ್ನು ಪಾಲಿಸದ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ನೀಡುವ ಅನುದಾನವನ್ನು ಸ್ಥಗಿತಗೊಳಿಸಬಹುದು ಅಥವಾ ಅಂತಹ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಬಹುದು.

2012 ನಿಯಮಾವಳಿಯು ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿತ್ತು. ಬಹುತೇಕ ಸಂದರ್ಭದಲ್ಲಿ ಈ ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ತಾರತಮ್ಯಕ್ಕೆ ಗುರಿಯಾಗುವ ಸಾಧ್ಯತೆಯ ಕಾರಣ ಕಾಯಿದೆಯು ಅವರಿಗೆ ಹೆಚ್ಚಿನ ರಕ್ಷಣೆ ಒದಗಿಸಿತ್ತು. ಹೊಸ ನಿಯಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳೊಂದಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಮಾತ್ರ ಇದರಿಂದ ಹೊರಗಿಡಲಾಯಿತು.

2012ರ ನಿಯಮಾವಳಿಯನ್ವಯ ವೈಯಕ್ತಿಕ ವೈಷಮ್ಯಕ್ಕೆ ಸುಳ್ಳು ದೂರುಗಳು ನೀಡುವವರ ಆರೋಪ ಸಾಬೀತಾಗದಿದ್ದರೆ ಅಂತಹ ದೂರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿತ್ತು. ಆದರೆ ಹೊಸ ನಿಯಮದಡಿಯಲ್ಲಿ ಸುಳ್ಳು ದೂರುಗಳ ಮೇಲಿನ ದಂಡನೆಯನ್ನು ಸಡಿಲಿಸಲಾಗಿದೆ. ಇದರಿಂದ ವೈಯಕ್ತಿಕ ದ್ವೇಷಕ್ಕಾಗಿ ಅಥವಾ ವಿನಾಕಾರಣ ವಿದ್ಯಾರ್ಥಿಗಳು ಅಥವಾ ಅಧ್ಯಾಪಕರನ್ನು ಸಿಲುಕಿಸಲು ಈ ನಿಯಮಗಳು ದುರುಪಯೋಗವಾಗುವ ಆತಂಕ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಲ್ಲಿದೆ. ಸುಳ್ಳು ದೂರುಗಳಿಗೆ ನೀಡಿರುವ ರಿಯಾಯತಿಯು ವಿದ್ಯಾರ್ಥಿಗಳ ನಡುವೆ ವಿಷಬೀಜ ಬಿತ್ತಿ ಕಾಲೇಜಿನ ಸೌಹಾರ್ದಯುತ ವಾತಾವರಣವನ್ನು ಹಾಳುಗೆಡವುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಹೊಸ ನಿಯಮಾವಳಿಯನ್ನು ವಿರೋಧಿಸುತ್ತಿರುವವರು ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ ಮತ್ತು ಸಾಮಾನ್ಯ ವರ್ಗದವರು ಕಿರುಕುಳ, ತಾರತಮ್ಮ ಮಾಡುವವರು ಎಂಬ ಹಣೆಪಟ್ಟಿ ಹೊರುವಂತಾಗಿದೆ ಎಂದು ಅವರ ಆಕ್ರೋಶವಾಗಿದೆ.

ನಿಯಮ ರೂಪಿಸುವಾಗ ಸಾಮಾನ್ಯ ವರ್ಗದವರೂ ಕ್ಯಾಂಪಸ್‌ನಲ್ಲಿ ಕಿರುಕುಳ ಅಥವಾ ತಾರತಮ್ಯಕ್ಕೆ ಒಳಗಾಗುವ ಸಾಧ್ಯತೆ ಇರುವುದೂ ಎಂಬುದನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಗಿದೆ. ಅವರು ತಮಗೆ ರಕ್ಷಣೆ ಇಲ್ಲದಂತಾಗಿ ಭಯದ ವಾತಾವರಣ ಸೃಷ್ಟಿಯಾಗುತ್ತದೆ ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಹೊಸ ನಿಯಮದ ಅಗತ್ಯವನ್ನು ಸಮರ್ಥನೆ ಮಾಡುತ್ತಿರುವವರು ಕಳೆದ ಐದು ವರ್ಷದಲ್ಲಿ ತಾರತಮ್ಯದ ಅನುಭವಿಸಿರುವ ದೂರು 178 ರಿಂದ 378ಕ್ಕೆ ಹೆಚ್ಚಳವಾಗಿದೆ ಎಂದು ವಾದ ಮಾಡುತ್ತಾರೆ. ಕಲಿಕೆಗೆ ಮತ್ತು ಭವಿಷ್ಯ ರೂಪಿಸಿಕೊಳ್ಳಲು ಬರುವ ಒಬ್ಬ ವಿದ್ಯಾರ್ಥಿಯು ಶೋಷಣೆಗೆ ಗುರಿಯಾಗಬಾರದು ಎಂಬುದೇ ಸರ್ವೋಚ್ಛ ನ್ಯಾಯಲಯದ ಆಶಯವು ಇದಾಗಿತ್ತು.

-ಸಂ.

2 ☞

ಪಯಣದಲ್ಲಿ ಅನೇಕ ಸಂಕಷ್ಟಗಳು, ಸವಾಲುಗಳು ಎದುರಾದರೂ, ಪತ್ರಿಕೆಯ ಮೌಲ್ಯಗಳಿಗೆ ಧಕ್ಕೆ ಆಗದಂತೆ ನಿಷ್ಠೆಯಿಂದ ಕಾರ್ಯ ನಿರ್ವಹಿಸಿರುವುದು ಗಮನಾರ್ಹವಾಗಿದೆ.

ಮೂರುವರೆ ದಶಕಗಳ ಕಾಲ ಮುಂಬೈ ಕನ್ನಡಿಗರ ಮನೆಮಾತಾಗಿರುವ 'ಕರ್ನಾಟಕ ಮಲ್ಲ' ಇಂದು ಕೇವಲ ಪತ್ರಿಕೆಯಷ್ಟೇ ಅಲ್ಲ, ಅದು ಒಂದು ಭಾವನಾತ್ಮಕ ಬಂಧವಾಗಿದೆ. ಓದುಗರ ಪ್ರೀತಿ, ಅಭಿಮಾನ ಮತ್ತು ನಂಬಿಕೆಯೇ ಈ ಪತ್ರಿಕೆಯ ಅತಿದೊಡ್ಡ ಶಕ್ತಿ. ಪ್ರತಿದಿನ ಪತ್ರಿಕೆಯನ್ನು ಕೈಗೆತ್ತಿಕೊಂಡು ಓದುವ ಸಾವಿರಾರು ಕನ್ನಡಿಗರ ಮನಸ್ಸಿನಲ್ಲಿ 'ಕರ್ನಾಟಕ ಮಲ್ಲ' ಒಂದು ಅವಿಭಾಜ್ಯ ಅಂಗವಾಗಿ ಬೆರೆತಿದೆ. ಹೊಸ ತಲೆಮಾರಿಗೂ ಕನ್ನಡ ಓದುವ ಅಭಿರುಚಿಯನ್ನು ಬೆಳೆಸುವಲ್ಲಿ ಈ ಪತ್ರಿಕೆಯ ಪಾತ್ರ ಅಮೂಲ್ಯವಾಗಿದೆ.

35ನೇ ವರ್ಷಕ್ಕೆ ಪ್ರವೇಶಿಸುತ್ತಿರುವ ಈ ಶುಭ ಸಂದರ್ಭದಲ್ಲಿ, 'ಕರ್ನಾಟಕ ಮಲ್ಲ' ತನ್ನನ್ನು ಬೆಂಬಲಿಸಿದ ಎಲ್ಲ ಕನ್ನಡ ಬಂಧುಗಳಿಗೆ, ಸಂಘ ಸಂಸ್ಥೆಗಳಿಗೆ, ಉದ್ಯಮಿಗಳಿಗೆ, ಜಾಹೀರಾತುದಾರರಿಗೆ ಮತ್ತು ಪತ್ರಿಕೆಯ ಎಲ್ಲಾ ಹಿತೈಷಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಪತ್ರಿಕೆಯ ಈ ದೀರ್ಘ ಪಯಣದಲ್ಲಿ ತಮ್ಮ ಅಮೂಲ್ಯ ಲೇಖನಗಳು, ಸಲಹೆಗಳು ಮತ್ತು ಮಾರ್ಗದರ್ಶನದ ಮೂಲಕ ಸಹಕರಿಸಿದ ಬರಹಗಾರರು, ಸಂಪಾದಕೀಯ ಬಳಗ ಹಾಗೂ ಸಿಬ್ಬಂದಿಯ ಶ್ರಮವನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ಅತ್ಯಂತ ಅಗತ್ಯವಾಗಿದೆ.



ಮುಂದಿನ ದಿನಗಳಲ್ಲಿ ಬದಲಾಗುತ್ತಿರುವ ಮಾಧ್ಯಮ ಜಗತ್ತಿಗೆ ಹೊಂದಿಕೊಳ್ಳುತ್ತಾ, ತಂತ್ರಜ್ಞಾನ ಮತ್ತು ಕಾಲದ ಅವಶ್ಯಕತೆಗಳಿಗೆ ಅನುಗುಣವಾಗಿ ಪತ್ರಿಕೆಯ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸುವ ಸಂಕಲ್ಪದೊಂದಿಗೆ 'ಕರ್ನಾಟಕ ಮಲ್ಲ' ಮುಂದುವರಿಯಲಿದೆ. ಕನ್ನಡ ಭಾಷೆ, ಕನ್ನಡಿಗರ ಹಿತ ಮತ್ತು ಅವರ ಧ್ವನಿಯನ್ನು ನಿರಂತರವಾಗಿ ಪ್ರತಿನಿಧಿಸುವ ಜವಾಬ್ದಾರಿಯನ್ನು ಇನ್ನಷ್ಟು ದೃಢವಾಗಿ ಹೊತ್ತು ಸಾಗುವುದೇ ನಮ್ಮ ಗುರಿಯಾಗಿದೆ.

ಈ ಐತಿಹಾಸಿಕ ಸಂದರ್ಭದಲ್ಲಿ, 'ಕರ್ನಾಟಕ ಮಲ್ಲ' ತನ್ನ ಎಲ್ಲಾ ಅಭಿಮಾನಿಗಳಿಂದ ಜಾಹೀರಾತುಗಳು, ಶುಭಾಶಯ ಸಂದೇಶಗಳು ಹಾಗೂ ಬೆಂಬಲವನ್ನು ಪ್ರೀತಿಯಿಂದ ಸ್ವೀಕರಿಸುತ್ತಿದೆ. ಇದುವರೆಗೂ ನೀಡಿರುವ ಪ್ರೋತ್ಸಾಹ ಮತ್ತು ಸಹಕಾರವನ್ನು ಮುಂದುವರೆಸುವ ಮೂಲಕ, ಈ ಹೆಮ್ಮೆಯ ಕನ್ನಡ ಪತ್ರಿಕೆಯ ಪಯಣವನ್ನು ಇನ್ನೂ ದೀರ್ಘಕಾಲ ಸಾಗಿಸಲು ಎಲ್ಲರೂ ಕೈಜೋಡಿಸುವಂತೆ ವಿನಂತಿಸುತ್ತೇವೆ. ಕನ್ನಡದ ಅಕ್ಷರ ಉಳಿಯಲಿ, ಕನ್ನಡಿಗರ ಧ್ವನಿ ಸದಾ ಗಟ್ಟಿಯಾಗಿ ಮೊಳಗಲಿ ಇದೇ 'ಕರ್ನಾಟಕ ಮಲ್ಲ'ದ ಆಶಯ ಮತ್ತು ಸಂಕಲ್ಪ.

# ಕೋಗಿಲು ಕ್ರಾಸ್ ರಾಜಕೀಯ

## ಬಾಂಗ್ಲಾ ನಿವಾಸಿಗಳಿಗೆ ಮನೆ ನೀಡಲು ಏಕೆ ಇಷ್ಟು ಆತುರ?


**ರಾಜ್ಯಪಾಲರ ಭಾಷಣದ ಮೂಲಕ ಕಾಂಗ್ರೆಸ್ ಸರ್ಕಾರ ಕೇವಲ ಸುಳ್ಳುಗಳನ್ನೇ ಹೇಳಿಸಿದೆ. ಸಿಎಂ ಸಿದ್ದರಾಮಯ್ಯನವರು ಹುಲಿಯಾ ಬದಲು ಇಲಿಯಾ ಆಗಿದ್ದಾರೆ ಎಂದು ಬಿಜೆಪಿ ನಾಯಕ ಆರ್. ಅಶೋಕ್ ಟೀಕಿಸಿದ್ದಾರೆ. ಬಹಳ ಮುಖ್ಯವಾಗಿ, ಕೋಗಿಲು ಕ್ರಾಸ್ ಬಳಿ ಸರ್ಕಾರಿ ಒತ್ತುವರಿ ಜಾಗದಲ್ಲಿ ಬಾಂಗ್ಲಾ ವಲಸಿಗರಿಗೆ ವಸತಿ ಕಲ್ಪಿಸುತ್ತಿರುವ ಬಗ್ಗೆ ಬೆಳಕು ಚಲ್ಲಿದ್ದಾರೆ...!!**



✍ ಮಹದೇವ್ ಕೆಂಪಯ್ಯ

ಮೊನ್ನೆ ವಿಧಾನ ಸಭೆಯಲ್ಲಿ ನಡೆದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿ ಮಾತನಾಡಿದ ಬಿಜೆಪಿ ನಾಯಕ ಆರ್.ಅಶೋಕ್ ಕಾಂಗ್ರೆಸ್ ಸರ್ಕಾರದ ವಿರುದ್ಧ ಭಾರಿ ವಾಗ್ದಾಳಿ ನಡೆಸಿದ್ದಾರೆ! ಅವರು 'ವಿಬಿ ಜಿ ರಾಮ್ ಜಿ' ಕಾಯ್ದೆಗೆ ರಾಷ್ಟ್ರಪತಿ ಸಹಿ ಹಾಕಿ ಜಾರಿಯಾಗಿದೆ, ಮಹಾತ್ಮ ಗಾಂಜಿ ಹೆಸರನ್ನು ತೆಗೆದು ಹಾಕಿದ್ದೇಕೆ ಎಂದು ಕಾಂಗ್ರೆಸ್ ನಾಯಕರು ಪ್ರಶ್ನಿಸುತ್ತಿದ್ದಾರೆ. ರಾಮನ ಹೆಸರನ್ನು ಕಂಡರೆ ಕಾಂಗ್ರೆಸ್‌ಗೆ ಆಗಲ್ಲ. ಇದೇ ಕಾರಣಕ್ಕೆ ರಾಮನಗರ ಜಿಲ್ಲೆಯ ಹೆಸರನ್ನು ಬದಲಿಸಲಾಗಿದೆ. ರಾಮಲಿಂಗಾರೆಡ್ಡಿ ರಾಮನಗರ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಈಗ ಅಲ್ಲಿ ಜಿಲ್ಲೆಯೇ ಇಲ್ಲ. ಮಹಾತ್ಮ ಗಾಂಜಿಯವರು ರಘುಪತಿ ರಾಘವ ರಾಜಾರಾಮ್ ಎಂದು ಹೇಳಿದ್ದರು. ಕಾಂಗ್ರೆಸ್ ಸರ್ಕಾರ ಕೇಂದ್ರದ ವಿರುದ್ಧ 18 ನಿರ್ಣಯಗಳನ್ನು ತೆಗೆದುಕೊಂಡಿದೆ. ಹೀಗೆ ಎಲ್ಲಕ್ಕೂ ಕಾಲು ಕೆರೆದು ಕೊಂಡು ಜಗಳಕ್ಕೆ ಬರುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮಾಜಿ ಪ್ರಧಾನಿಗಳಾದ ಜವಹರಲಾಲ್ ನೆಹರು 17 ಬಾರಿ, ಇಂದಿರಾಗಾಂಧಿ 29 ಬಾರಿ, ರಾಜೀವ್‌ಗಾಂಧಿ 10 ಬಾರಿ ಸೇರಿದಂತೆ ಕಾಂಗ್ರೆಸ್ ಪಕ್ಷ 72 ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಮಾಜಿ ಅಟಲ್ ಬಿಹಾರಿ ವಾಜಪೇಯಿ 14 ಬಾರಿ ಹಾಗೂ ಪ್ರಧಾನಿ ನರೇಂದ್ರ ಮೋದಿ 8 ಬಾರಿ ತಿದ್ದುಪಡಿ ಮಾಡಿದ್ದಾರೆ. ಅತಿ ಹೆಚ್ಚು ಬಾರಿ ತಿದ್ದುಪಡಿ ಮಾಡಿದ ಕಾಂಗ್ರೆಸ್ ಬಿಜೆಪಿ ಮೇಲೆ ಆರೋಪ ಮಾಡುತ್ತಿದೆ. 'ಸಂವಿಧಾನವು ನಿರಂತರವಾಗಿರಬೇಕೆಂದರೆ ನಾವು ಅದನ್ನು ಬದಲಾಯಿಸುತ್ತಿರಬೇಕೆಂದು' ಜವಹರಲಾಲ್ ನೆಹರು ಹೇಳಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನದ ಬಗ್ಗೆ ಬೇಜಾರಾಗಿ ಅದನ್ನು ಸುಟ್ಟುಹಾಕುತ್ತೇನೆಂದು ಹೇಳಿದ್ದರು ಎಂದು ಹೊಸ ಬಾಂಬ್ ಸಿಡಿಸಿದ್ದಾರೆ!




### ಎಷ್ಟು ಯೋಜನೆಗಳಿಗೆ ಹೆಸರಿದೆ?

ಕಾಂಗ್ರೆಸ್ ಎಷ್ಟು ಯೋಜನೆಗಳಿಗೆ ಮಹಾತ್ಮ ಗಾಂಜಿಯ ಹೆಸರಿಟ್ಟಿದೆ? ಆದರೆ ಇಂದಿರಾಗಾಂಧಿ ಕುಟುಂಬದವರ ಹೆಸರುಗಳನ್ನು ಹೆಚ್ಚಾಗಿ ಇರಿಸಲಾಗಿದೆ. ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ, ರಾಜೀವ್ ಗಾಂಧಿ ಕುಡಿಯುವ ನೀರಿನ ಮಿಷನ್, ರಾಜೀವ್ ಗಾಂಧಿ ರಾಷ್ಟ್ರೀಯ ಶಿಶು ವಿಹಾರ, ಇಂದಿರಾ ಆವಾಸ್, ಜವಹರಲಾಲ್ ನೆಹರು ನಗರ ನವೀಕರಣ, ನೆಹರು ರೋಜ್‌ಗಾರ್, ಇಂದಿರಾಗಾಂಧಿ ಕಾಲುವೆ ಯೋಜನೆ, ರಾಜೀವ್ ಗಾಂಧಿ ಸಾಮಾಜಿಕ ಭದ್ರತೆ, ಇಂದಿರಾಗಾಂಧಿ ಪಥ ಯೋಜನೆ, ರಾಜೀವ್ ಗಾಂಧಿ ನಾಗರಹೊಳೆ ಅಭಯಾರಣ್ಯ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಜವಹರಲಾಲ್ ನೆಹರು ಆಸ್ಪತ್ರೆ, ಹೀಗೆ 454 ಯೋಜನೆ, ಸಂಸ್ಥೆಗಳಿಗೆ ಇವರ ಕುಟುಂಬದವರ ಹೆಸರನ್ನೇ ಇಡಲಾಗಿದೆ.

## ವೋಟ್ ಪಾಲಿಟಿಕ್ಸ್ ಬೇಡ!!

### 80 ಪರ್ಸೆಂಟ್ ಸರ್ಕಾರ

ಗುತ್ತಿಗೆದಾರರು ಮೂರು ಬಾರಿ ಸುದ್ದಿಗೋಷ್ಠಿ ನಡೆಸಿ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಬಿಜೆಪಿ ಸರ್ಕಾರವಿದ್ದರೂ 40 ಪರ್ಸೆಂಟ್ ಎಂದು ಆರೋಪ ಮಾಡಲಾಗಿತ್ತು. ಮಧ್ಯವರ್ತಿಗಳ ಹಾವಳಿ, ಹಿಂದಿನ ಸರ್ಕಾರಕ್ಕಿಂತ ದುಪ್ಪಟ್ಟು ಕಮಿಷನ್, 80 ಪರ್ಸೆಂಟ್ ಕಮಿಷನ್ ಹೀಗೆ ಮೊದಲಾದ ಆರೋಪಗಳನ್ನು ಮಾಡಿದ್ದಾರೆ. ಅವರು ಮಾಡಿರುವ ಆರೋಪ ರಾಹುಲ್ ಗಾಂಧಿಯ ತನಕ ಹೋಗಿದೆ. ಆಂಧ್ರದವರಿಗೆ ಟೆಂಡರ್ ನೀಡಲಾಗಿದೆ, ಹಳೆ ಬಿಲ್‌ಗಳಿಗೆ ಹೆಚ್ಚಿನ ಕಮಿಷನ್ ಪಡೆಯಲಾಗುತ್ತಿದೆ, 37,370 ಕೋಟಿ ರೂ. ಬಾಕಿ ಇದೆ ಎಂದಿದ್ದರೂ ಸರ್ಕಾರ ಕ್ರಮ ವಹಿಸಿಲ್ಲ, ಮುಷ್ಕರ ಮಾಡದೇ ಬೇರೆ ದಾರಿಯಿಲ್ಲ ಎಂದು ಗುತ್ತಿಗೆದಾರರ ಸಂಘ ತಿಳಿಸಿದೆ. ನಗರಾಭಿವೃದ್ಧಿ ಇಲಾಖೆ ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಂಘ ಪತ್ರ ಬರೆದಿದೆ. ಇಷ್ಟೆಲ್ಲ ಆಪಾದನೆಗಳು ಬಂದರೂ ಗುತ್ತಿಗೆದಾರರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದರೆ, ಸರ್ಕಾರ ತಪ್ಪು ಮಾಡಿದೆ ಎಂದೇ ಅರ್ಥ.

ಕಲ್ಯಾಣ ಕರ್ನಾಟಕ ಮಂಡಳಿಯ ವತಿಯಿಂದ ಮಾಡಬೇಕಿರುವ ಕಾಮಗಾರಿಗಳನ್ನು ಇನ್ನೂ ನಡೆಸಿಲ್ಲ. ಸರ್ಕಾರದಿಂದ 5,000 ಕೋಟಿ ರೂ. ನೀಡಿದ್ದರೂ ಕಾಮಗಾರಿ ಮಾಡಿಲ್ಲ ಎಂದು ಗುತ್ತಿಗೆದಾರರು ಹೇಳಿದ್ದಾರೆ. ಈ ಎಲ್ಲ ಆರೋಪಗಳಿಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ ಹಿಂದಿನ ಬಿಜೆಪಿ ಬಾಕಿ ಇಟ್ಟುಕೊಂಡಿದೆ ಎಂದು ಹೇಳಿದ್ದಾರೆ. ಹಿಂದೆ 14,000 ಕೋಟಿ ರೂ. ಬಾಕಿ ಬಿಲ್ ಇರಿಸಿದ್ದಾಗ ಬಿಜೆಪಿ ಅದನ್ನು ಪಾವತಿಸಿತ್ತು. ಬಿಲ್ ಪಾವತಿಸುವುದು ನಿರಂತರ ಪ್ರಕ್ರಿಯೆ. 40 ಪರ್ಸೆಂಟ್ ಎಂಬ ಭಿತ್ತಿಪತ್ರಗಳನ್ನು ಕಾಂಗ್ರೆಸ್ ನಾಯಕರು ಎಲ್ಲ ಕಡೆ ಅಂಟಿಸಿದ್ದರು. ಈಗ ಈ ಆರೋಪದ ಪತ್ರಗಳನ್ನು ಜನರು ಕಾಂಗ್ರೆಸ್ ನಾಯಕರ ಮುಖದ ಮೇಲೆ ಅಂಟಿಸುತ್ತಾರೆ.

☞15

# ಬಿಜೆಪಿ ಅವಧಿಯಲ್ಲೇ ಹೆಚ್ಚು ಕೊಲೆ ನಡೆದಿರುವುದು! - ಜಿ ಪರಮೇಶ್ವರ್

ರಾಷ್ಟ್ರಮಟ್ಟದ ಚೆನ್ನೈ ಮೂಲದ ಸಂಸ್ಥೆಯೊಂದು ದೇಶದಾದ್ಯಂತ 125 ನಗರಗಳನ್ನೊಳಗೊಂಡಂತೆ ನಡೆಸಿರುವ ಸಮೀಕ್ಷೆಯ ವರದಿ ಪ್ರಕಾರ, ಬೆಂಗಳೂರು ನಗರವು ಮಹಿಳೆಯರಿಗೆ ಹೆಚ್ಚು ಸುರಕ್ಷಿತ ನಗರವೆಂಬ ಹೆಗ್ಗಳಿಕೆಯನ್ನು ಹೆಗ್ಗಳಿಕೆಯನ್ನು ಪಡೆದಿದೆ ಎಂದು ಗೃಹ ಸಚಿವರಾದ ಡಾ. ಜಿ. ಪರಮೇಶ್ ಅವರು ಸೋಮವಾರ ವಿಧಾನಸಭೆಯಲ್ಲಿ ತಿಳಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ , ಸುನಿಲ್ ಕುಮಾರ್ ಹಾಗೂ ಅರಗ ಜ್ಞಾನೇಂದ್ರ, ಅವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ಹದಗೆಟ್ಟಿದೆ ಎಂದು ಆರೋಪಿಸಿದ ಹಿನ್ನೆಲೆಯಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ನೀಡಿದ ಗೃಹ ಸಚಿವರು ಈ ಸಮೀಕ್ಷೆಯಲ್ಲಿ ಕರ್ನಾಟಕವು 53.82 ಅಂಕವನ್ನು ಪಡೆದು ಮೊದಲ ಸ್ಥಾನವನ್ನು, ಚೆನ್ನೈ 49.86 ಪಡೆದು ಎರಡನೇ ಸ್ಥಾನವನ್ನು ಪಡೆದಿದೆ ಎಂದರು.

ಇಂಡಿಯಾ ಜಸ್ಟೀಸ್ ರಿಪೋರ್ಟ್ 2025 ರ ಪ್ರಕಾರ ಕೂಡ ನಮ್ಮ ರಾಜ್ಯವು ಮೊದಲ ಸ್ಥಾನವನ್ನು ಪಡೆದಿರುವುದು ಕಾನೂನು ಸುವ್ಯವಸ್ಥೆಯಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು. ಈ ಎರಡೂ ಸಮೀಕ್ಷೆಗಳು ನಮ್ಮ ಕರ್ನಾಟಕ ರಾಜ್ಯವು ಎಷ್ಟು ಸುರಕ್ಷಿತವಾಗಿದೆ ಎಂಬುದನ್ನು ಸಾಬೀತು ಪಡಿಸಿದೆ ಎಂದು ತಿಳಿಸಿದರು.


ಆರ್. ಅಶೋಕ್ ಅವರು ಗೃಹ ಸಚಿವರಾಗಿದ್ದಾಗ 201113 ರಲ್ಲಿ 4121 ಕೊಲೆಗಳಾಗಿದ್ದರೆ, ಬೊಂಬಾಯಿ ಅವರು ಗೃಹ ಸಚಿರಾಗಿದ್ದಾಗ 201921 ರವರೆಗೆ 2554 ಹಾಗೂ ಅರಗ ಜ್ಞಾನೇಂದ್ರ ಅವರು ಗೃಹ ಸಚಿವರಾಗಿದ್ದಾಗ 2417 ಕೊಲೆಗಳಾಗಿದ್ದವು. ಆದರೆ ನಮ್ಮ ಸರ್ಕಾರ ಬಂದ ಮೇಲೆ 2023 ರಲ್ಲಿ 1322 ಹಾಗೂ 2024 ರಲ್ಲಿ 1208 ಕೊಲೆ ಪ್ರಕರಣಗಳಾಗಿರುವುದಾಗಿ ಅವರು ಮಾಹಿತಿ ನೀಡುವ ಮೂಲಕ ಅವರ ಕಾಲದಲ್ಲಿಯೇ ಅತಿ ಹೆಚ್ಚು ಕೊಲೆ ಪ್ರಕರಣಗಳಾಗಿರುವುದರ ಬಗ್ಗೆ ಸದನಕ್ಕೆ ಮಾಹಿತಿ ನೀಡಿದರು. ಇನ್ನು ಡ್ರಗ್ಸ್ ತಡೆಗೆ ನಮ್ಮ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ. 2023 ರಲ್ಲಿ 133 ಕೋಟಿ ರೂ ಬೆಲೆಯ 10630 ಕೆ.ಜಿ ಗಾಂಜಾವನ್ನು, 2024 ರಲ್ಲಿ 264 ಕೋಟಿ ಬೆಲೆಯ 6136 ಕೆ.ಜಿ ಹಾಗೂ 2025 ರಲ್ಲಿ 208 ಕೋಟಿ ಬೆಲೆಯ 6279 ಕೆ.ಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.



ವರದಿಯೊಂದರಲ್ಲಿ ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನದಲ್ಲಿ ಅತಿ ಹೆಚ್ಚು ಡ್ರಗ್ಸ್ ತಯಾರಾಗುತ್ತಿದೆ ಎಂದು ತಿಳಿದು ಬಂದಿದೆ. ನಮ್ಮ ಸರ್ಕಾರ ಡ್ರಗ್ಸ್ ಅನ್ನು ತಡೆಗಟ್ಟಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಡ್ರಗ್ಸ್ ಘಟಕಗಳನ್ನು ಪತ್ತೆಹಚ್ಚುವ ಸಲುವಾಗಿ ಎಲ್ಲಾ ಎಸ್.ಪಿ ಗಳಿಗೆ ತಮ್ಮ ಏರಿಯಾದಲ್ಲಿ ಸ್ಥಾಪನೆಯಾಗುವ ಯಾವುದೇ ಕೆಮಿಕಲ್ ಘಟಕಗಳನ್ನು ಪರಿಶೀಲಿಸುವಂತೆ ಹಾಗೂ ತಮ್ಮ ಏರಿಯಾದಲ್ಲಿ ಡ್ರಗ್ಸ್ ದಂಧೆ ನಡೆಯದಂತೆ ನೋಡಿಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಪೊಲೀಸರು ಶಾಲಾ ಕಾಲೇಜುಗಳಿಗೆ ಹೋಗಿ ಡ್ರಗ್ಸ್ ಬಳಸುವುದರಿಂದಾಗುವ ಪರಿಣಾಮಗಳ ಬಗ್ಗೆ ಅರಿವು ಕೂಡ ಮೂಡಿಸುತಿದ್ದಾರೆ ಎಂದು ತಿಳಿಸಿದರು.

ಇನ್ನು ಸೈಬರ್ ಅಪರಾಧವನ್ನು ತಡೆಗಟ್ಟಲು ಡಿ.ಜಿ ಅವರ ನೇತೃತ್ವದಲ್ಲಿ ಒಂದು ಪ್ರತ್ಯೇಕ ವಿಭಾಗವನ್ನು ರಚಿಸಲಾಗಿದೆ. ಭ್ರಷ್ಟಾಚಾರ ನಿಮ್ಮ ಸರ್ಕಾರದಲ್ಲಿ ಕೂಡ ಆಗಿದೆ. ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಾಗದಿರಬಹುದು. ಆದರೆ ನಮ್ಮ ಸರ್ಕಾರ ಭ್ರಷ್ಟಾಚಾರ ಎಸಗುವವರಿಗೆ ಎಂದಿಗೂ ರಕ್ಷಣೆ ನೀಡಿಲ್ಲ. ಇತ್ತೀಚೆಗೆ ಲಂಚ ಪಡೆಯುವಾಗ ಸಿಕ್ಕಿಬಿದ್ದ ಇನ್ಸ್‌ಪೆಕ್ಟರ್ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಮತ್ತೊಂದು ಕೇಸ್ ನಲ್ಲಿ ನಮ್ಮ ಸರ್ಕಾರ ಹಿರಿಯ ಅಧಿಕಾರಿಯೊಬ್ಬರನ್ನು ಅಮಾನತ್ತು ಕೂಡ ಮಾಡಲಾಗಿದೆ. ನಮ್ಮ ಸರ್ಕಾರ ಪೊಲೀಸ್ ಕ್ಯಾಪ್ ಅನ್ನು ಮಾತ್ರ ಬದಲಾಯಿಸಿಲ್ಲ. ಅವರ ಮಾನಸಿಕ ಸ್ಥೈರ್ಯ ವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ ಅವರು, ಗೃಹ ಇಲಾಖೆಯು ನಮ್ಮ ರಾಜ್ಯದಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಲು ಬಯಸುತ್ತೇನೆ ಎಂದು ಸದನಕ್ಕೆ ತಿಳಿಸಿದರು

# ಬಯಲಾಯ್ತು ತ್ರಿವಳಿ ಕೊಲೆಯ ರಹಸ್ಯ...
# ಮರ್ಯಾದೆಗೇಡು ಕುಟುಂಬವನ್ನೇ ಮುಗಿಸಿದ ಕ್ರೂರಿ ಮಗ!



ಆರೋಪಿ ಅಕ್ಷಯ್

**ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣದ ಅಸಲಿ ಕಾರಣ ಬಯಲಾಗಿದೆ! ಬೆಂಗಳೂರು ತಿಲಕ್‌ನಗರ ಪೊಲೀಸ್ ತನಿಖೆ ವೇಳೆ, ಆರೋಪಿ ಅಕ್ಷಯ್ ತನ್ನ ತಂಗಿ ತಂದೆ ತಾಯಿ ಮೂವರನ್ನು ಕೊಲೆ ಮಾಡಿದ್ದಾನೆ ಎಂಬುದು ಬೆಳಕಿಗೆ ಬಂದಿದೆ. ಜೊತೆಗೆ, ಇದು ದ್ವೇಷದ ಕೊಲೆಯಲ್ಲ, ಮರ್ಯಾದಾ ಹತ್ಯೆ ಎಂದು ತಿಳಿದುಬಂದಿದೆ!!**

ವಿಜಯನಗರ ಜಿಲ್ಲೆಯ ಕೊಟ್ಟೂರಿನಲ್ಲಿ ನಡೆದ ಭೀಕರ ತ್ರಿವಳಿ ಕೊಲೆ ಪ್ರಕರಣದ ಹಿಂದಿನ ಕ್ರೂರತೆ ಹಾಗೂ ಆಘಾತಕಾರಿ ಸತ್ಯವನ್ನು ಬೆಂಗಳೂರು ತಿಲಕ್ ನಗರದ ಪೊಲೀಸರು ಬಯಲು ಮಾಡಿದ್ದಾರೆ. ಈ ಪ್ರಕರಣದಲ್ಲಿ ಆರೋಪಿ ಅಕ್ಷಯ್, ತನ್ನ ತಂಗಿಯ ಪ್ರೇಮ ಪ್ರಕರಣ ಮತ್ತು ಆಕೆ ಗರ್ಭಿಣಿಯಾಗಿರುವುದು ತಿಳಿದು ಮರ್ಯಾದಾ ಹತ್ಯೆ ಮಾಡಿರುವುದಾಗಿ ಪೊಲೀಸರ ಮುಂದೆ ಬಾಯ್ಬಿಟ್ಟಿದ್ದಾನೆ. ಅಷ್ಟೇ ಅಲ್ಲದೆ, ಅನ್ಯ ಕೋಮಿನ ಪುರುಷನ ಪ್ರೀತಿ ಮಾಡಿ ಗರ್ಭಿಣಿಯಾಗಿದ್ದ ತಂಗಿಗೆ ಬೆಂಬಲ ನೀಡಿದ ತಂದೆ, ತಾಯಿಯನ್ನೂ ಕೊಲೆ ಮಾಡಿದ್ದಾನೆ. ಪೊಲೀಸರ ವಿಚಾರಣೆ ವೇಳೆ ಸತ್ಯ ಬಾಯ್ಬಿಟ್ಟಿರುವ ಅಕ್ಷಯ್, ಇದು ದ್ವೇಷದ ಕೊಲೆಯಲ್ಲ, ಕುಟುಂಬದ ಗೌರವ ಉಳಿಸಿಕೊಳ್ಳಲು ಮಾಡಿದ ಕೃತ್ಯ ಎಂದು ಹೇಳಿಕೊಂಡಿದ್ದಾನೆ.



ಕೊಲೆಯಾದ ತಂದೆ, ತಾಯಿ, ತಂಗಿ

**3 ತಿಂಗಳ ಗರ್ಭಿಣಿ!**

ಅಕ್ಷಯ್ ತನ್ನ ತಂಗಿ ಅಮೃತ (18) ಮೂರು ತಿಂಗಳ ಗರ್ಭಿಣಿಯಾಗಿದ್ದಾಳೆ ಎಂಬ ವಿಚಾರ ತಿಳಿದು ತೀವ್ರವಾಗಿ ಕೋಪಗೊಂಡಿದ್ದ. ತನ್ನ ತಂಗಿ ಪ್ರೀತಿಸುತ್ತಿದ್ದವನು ಅನ್ಯ ಸಮುದಾಯಕ್ಕೆ ಸೇರಿದವನು ಎಂಬುದು ಅಕ್ಷಯ್ ಕೋಪಕ್ಕೆ ಕಾರಣವಾಗಿತ್ತು.ಆಕೆ ಪಿಯುಸಿ ಓದುತ್ತಿದ್ದ ಅನ್ಯ ಕೋಮಿನ ಹುಡುಗನನ್ನು ಪ್ರೀತಿ ಮಾಡುತ್ತಿದ್ದಳು.

ಕಳೆದ ನಾಲ್ಕು ತಿಂಗಳ ಹಿಂದೆ ಅಕ್ಷಯ್ ತನ್ನ ತಂಗಿಯ ಮೊಬೈಲ್ ಪರಿಶೀಲಿಸಿದ ವೇಳೆ ಪಿಯುಸಿ ಓದುತ್ತಿದ್ದ ಯುವಕನೊಂದಿಗೆ ಅವಳು ನಿರಂತರ ಸಂಪರ್ಕದಲ್ಲಿರುವುದು ಗೊತ್ತಾಗಿದೆ. ಬಳಿಕ ಆ ಯುವಕನಿಗೆ ಕರೆ ಮಾಡಿದ ಅಕ್ಷಯ್, ಇಬ್ಬರ ನಡುವೆ ಪ್ರೇಮ ಸಂಬಂಧ ಇರುವುದನ್ನು ತಿಳಿದುಕೊಂಡಿದ್ದ. ಈ ವಿಷಯ ತಿಳಿದ ಬಳಿಕ ಕೋಪಗೊಂಡ ಅಕ್ಷಯ್ ತಂಗಿಗೆ ಹಲ್ಲೆ ಮಾಡಿ ಬೆದರಿಸಿದ್ದಾನೆ.

✍ ಹೆಚ್.ಕೆ. ಮಹದೇವ್

**ಕ್ಷಮೆ ಕೇಳಿದ್ದಳು ತಂಗಿ ಅಮೃತ!**

ಅವತ್ತು ಅಣ್ಣನ ಮುಂದೆ ಆಣೆ ಪ್ರಮಾಣ ಮಾಡಿ ಇನ್ಮುಂದೆ ಅವನನ್ನು ಮಾತಾಡಿಸುವುದಿಲ್ಲ, ಲವ್ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದಳು. ಆದರೆ, ಜನವರಿ 26 ತಂಗಿ ಅಮೃತ ವಿಪರೀತ ವಾಂತಿ ಮಾಡಿಕೊಂಡು, ಆಕೆ ಗರ್ಭಿಣಿ ಎಂಬ ವಿಚಾರ ಹೊರ ಬಿದ್ದಿದೆ!.

ತಂಗಿ ಗರ್ಭಿಣಿಯಾಗಿರುವ ವಿಚಾರವನ್ನು ಅಕ್ಷಯ್‌ಗೆ ಅವನ ತಾಯಿಯೇ ತಿಳಿಸಿದ್ದಾರೆ. ಆಗ ತಂಗಿಯ ಗರ್ಭವನ್ನು ತೆಗಿಸೋಣ ಎಂದು ಹೇಳಿದ್ದ. ಆದರೆ, ತಂದೆತಾಯಿ ಅದಕ್ಕೆ ಒಪ್ಪಿರಲಿಲ್ಲ. ಇದರಿಂದ ಕೋಪಗೊಂಡು ತನ್ನ ಮಾತಿಗೆ ಬೆಲೆ ಇಲ್ಲವೆಂದು ಭಾವಿಸಿದ ಅಕ್ಷಯ್, ತಂಗಿ, ತಂದೆ ತಾಯಿ ಮೂವರನ್ನೂ ಕೊಲ್ಲುವ ನಿರ್ಧಾರಕ್ಕೆ ಬಂದಿದ್ದಾನೆ!

**ಮೂರು ಹೆಣಗಳೊಂದಿಗೆ ರಾತ್ರಿ ಕಳೆದ....**

ಪೊಲೀಸ್ ತನಿಖೆ ವೇಳೆ ದೊರೆತಿರುವ ಮಾಹಿತಿಯ ಪ್ರಕಾರ, ಜನವರಿ 26ರಂದು ಮೊದಲು ಅಕ್ಷಯ್ ತನ್ನ ತಾಯಿಯನ್ನು ಕೊಂದಿದ್ದಾನೆ. ಕೊಲೆ ಬಳಿಕ ಸ್ನಾನ ಮಾಡಿ ರಕ್ತಸಿಕ್ತ ಬಟ್ಟೆಗಳನ್ನು ನಾಶಪಡಿಸಿದ್ದಾನೆ. ಸಂಜೆ ತಂಗಿ ಮನೆಗೆ ಬಂದಾಗ ಆಕೆಯನ್ನೂ ಹತ್ಯೆ ಮಾಡಿ, ತಾಯಿಯ ಮೃತದೇಹದ ಪಕ್ಕದಲ್ಲೇ ಮಲಗಿಸಿದ್ದಾನೆ. ಮತ್ತೆ ಸ್ನಾನ ಮಾಡಿ ಅದೇ ಬಟ್ಟೆ ಧರಿಸಿದ್ದಾನೆ.

ರಾತ್ರಿ 10.30ರ ಸುಮಾರಿಗೆ ಕುಡಿದು ಮನೆಗೆ ಬಂದ ತಂದೆ ಸೋಫಾದ ಮೇಲೆ ಕೂತಿದ್ದಾಗ, ಅಕ್ಷಯ್ ಅವರ ಕುತ್ತಿಗೆ ಕತ್ತರಿಸಿ ಕೊಲೆ ಮಾಡಿದ್ದಾನೆ. ತಂದೆಯ ಮೃತದೇಹವನ್ನೂ ತಾಯಿ ಹಾಗೂ ತಂಗಿಯ ಪಕ್ಕ ಇಟ್ಟಿದ್ದಾನೆ. ನಂತರ ಆ ಕೊಠಡಿಗೆ ಬೀಗ ಹಾಕಿ, ಮತ್ತೆ ಸ್ನಾನ ಮಾಡಿ ಬೇರೆ ಬಟ್ಟೆ ಧರಿಸಿದ್ದಾನೆ.

**ಇಡೀ ರಾತ್ರಿ ಟಿವಿ ನೋಡಿದ್ದ ಕೊಲೆಗಾರ!**

ಹಾಗೆ ಮೂರು ಹೆಣಗಳನ್ನು ಕೆಡವಿದ ಬಳಿಕ ರಾತ್ರಿಯಿಡೀ ಟಿವಿ ನೋಡುತ್ತಾ, ಕಾನೂನಿನಿಂದ ತಪ್ಪಿಸಿಕೊಳ್ಳುವ ಮಾರ್ಗಗಳ ಬಗ್ಗೆ ಯೋಚಿಸಿದ್ದಾನೆ. ಬೆಳಗ್ಗೆ ತಾಯಿ ಹಾಗೂ ತಂಗಿಯ ಮೊಬೈಲ್‌ಗಳನ್ನು ತೆಗೆದುಕೊಂಡು ಬೆಂಗಳೂರಿಗೆ ಬಂದ ಅಕ್ಷಯ್ ತನ್ನ ಮೊಬೈಲ್ ಅನ್ನು ಮಾತ್ರ ಅಲ್ಲೇ ಬಿಟ್ಟು ಬಂದಿದ್ದಾನೆ. ಇಲ್ಲಿ ಜಯದೇವ ಆಸ್ಪತ್ರೆ ಬಳಿ ಫೋಟೋವೊಂದನ್ನು ತೆಗೆದು ತನ್ನ ಮೊಬೈಲ್‌ಗೆ ಕಳುಹಿಸಿ ಕೊಂಡಿದ್ದಾನೆ. ನಂತರ ತಂಗಿ ಮತ್ತು ಅಪ್ಪನ ಮೊಬೈಲ್‌ಗಳನ್ನು ಜಯದೇವ ಆಸ್ಪತ್ರೆ ಸಮೀಪದ ಕಸದ ಬುಟ್ಟಿಗೆ ಬಿಸಾಡಿದ್ದಾನೆ.

**ಶವಗಳನ್ನು ಹೂತು 'ಮಿಸ್ಸಿಂಗ್' ಡ್ರಾಮಾ...**

ಈ ಸಂದರ್ಭದಲ್ಲಿ ಅಕ್ಷಯ್ ತನ್ನ ಮಾವ ವಸಂತನನ್ನು ಭೇಟಿ ಮಾಡಿ ಅವನಿಗೆ ಎಲ್ಲಾ ವಿಚಾರ ತಿಳಿಸಿದ್ದಾನೆ. ಶವಗಳನ್ನು ಹೂತು ಟಿಮಿಸ್ಸಿಂಗ್‌ಟಿ ನಾಟಕ ಮಾಡೋಣ ಎಂಬ ಐಡಿಯಾವನ್ನ ಆ ಮಾವನೇ ಕೊಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಅದರಂತೆ ಜನವರಿ 27ರ ರಾತ್ರಿ, ಕೊಟ್ಟೂರಿಗೆ ವಾಪಸ್ ಆಗಿದ್ದ ಅಕ್ಷಯ್, ಟೈಲ್ಸ್ ಕಟರ್ ಹಾಗೂ ಡ್ರಿಲ್ಲಿಂಗ್ ಯಂತ್ರ ತರಿಸಿ, 5×5 ಅಳತೆಯ ಗುಂಡಿ ತೋಡಿ ಮೂವರ ಶವಗಳನ್ನು ಹೂತಿದ್ದಾನೆ. ಅಪ್ಪನ ದೇಹ ಉದ್ದವಾಗಿದ್ದಕ್ಕೆ ಕಾಲುಗಳನ್ನು ಕತ್ತರಿಸಿ ಹೂತಿದ್ದಾನೆ!



ಎಸ್ಪಿ ಜಾಹ್ನವಿ

## ಹಣ ಲಪಟಾಯಿಸಲು ಕೊಲೆ ಮಾಡಿದನೇ?!

ಕೆಲ ಗಾಳಿ ಸುದ್ದಿಗಳ ಪ್ರಕಾರ, ಅಕ್ಷಯ್ ತಂದೆ ತಮ್ಮ ಮನೆಯನ್ನು ಮಾರಾಟ ಮಾಡಿದ್ರು ಎನ್ನಲಾಗಿದ್ದು, ಮನೆ ಮಾರಿದ ಹಣದಲ್ಲಿ ಸ್ವಲ್ಪ ಹಣ ತನಗೆ ಕೇಳಿದ್ದಾನೆ ಅಕ್ಷಯ್. ತಂದೆ ತಾಯಿ ಈತನಿಗೆ ಹಣ ಕೊಟ್ಟಿಲ್ಲ. ತಂಗಿ ಲವ್ ಸ್ಟೋರಿಯಿಂದ ಮೊದಲೇ ಕೋಪಗೊಂಡಿದ್ದ ಅಕ್ಷಯ್, ಈಗ ಹಣವೂ ಸಿಗದಿದ್ದರಿಂದ ಮತ್ತಷ್ಟು ಕುಪಿತಾನಾಗಿ ಅನ್ಯಾಯವಾಗಿ ಟ್ರಿಪ್ಲ್ ಮರ್ಡರ್ ಮಾಡಿದ್ದಾನೆ ಎಂಬ ಗಾಳಿಮಾತು ತೆಲಾಡುತ್ತಿದೆ!! ಹಾಗಾದ್ರೆ, ಧುರುಳ ಹಂತಕ ಹಣ ಲಪಟಾಯಿಸಲಿಕ್ಕಾಗಿಯೇ ಈ ಕೊಲೆಗಳನ್ನು ಮಾಡಿದನೇ?! ದಕ್ಷ ಎಸ್ಪಿ ಜಾಹ್ನವಿ ಮೇಡಂ ಈತನನ್ನು ಖಡಕ್ಕಾಗಿ ವಿಚಾರಿಸಿದರೆ ಸತ್ಯ ಹೊರ ಬರಬರಬಹುದೇನೋ... ☯

**ವಿಫಲವಾಯ್ತು ಮಿಸ್ಸಿಂಗ್ ನಾಟಕ**

ಜನವರಿ 29ರಂದು ಅಕ್ಷಯ್ ಮಾವನೊಂದಿಗೆ ತಿಲಕನಗರ ಪೊಲೀಸ್ ಠಾಣೆಗೆ ತೆರಳಿ ತನ್ನ ತಂದೆ ತಾಯಿತಂಗಿ ನಾಪತ್ತೆಯಾಗಿದ್ದಾರೆ ಎಂದು ದೂರು ನೀಡಿದ್ದಾನೆ. ಆದರೆ ಪೊಲೀಸರಿಗೆ ಅನುಮಾನ ಬಂದು ವಿಚಾರಣೆ ನಡೆಸಿದಾಗ... ಇವನ ನಾಟಕ ಬಯಲಾಗಿದ್ದು, ಅಕ್ಷಯ್ ಮತ್ತು ಅವನ ಕಂತ್ರಿ ಮಾವ ವಸಂತನನ್ನು ಬಂಽಸಲಾಗಿದೆ. ಸದ್ಯ ಕೊಲೆ, ಸಾಕ್ಷಿ ನಾಶ ಸೇರಿದಂತೆ ಹಲವು ಕಲಂಗಳ ಅಡಿ ಪ್ರಕರಣ ದಾಖಲಾಗಿದ್ದು, ತಿಲಕನಗರ ಪೊಲೀಸರು ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಶೀಘ್ರವೇ ಪ್ರಕರಣವನ್ನು ಕೊಟ್ಟೂರು ಪೊಲೀಸರಿಗೆ ವರ್ಗಾವಣೆ ಮಾಡಲಾಗುತ್ತದೆ. ☯



ಹೆಣಗಳ ಹೂತಿದ್ದ ಮನೆ



ಗುಂಡಿಯಿಂದ ಹೆಣಗಳ ಹೊರ ತೆಗೆದಿರುವುದು



# ಮದುವೆ ದಿನವೇ ವರನ ಕೊಲೆಗೆ ಯತ್ನಿಸಿ ಲವರ್ ಸಮೇತ ಸಿಕ್ಕಿಬಿದ್ದ ಸುಪತ್ನಿ!

ಚಾಮರಾಜನಗರ
ಎಸ್. ಸ್ವಾಮಿ


ಮದುಮಗ ರವೀಶ


ಆರೋಪಿ ನಯನ

ಆತ ಬೆಂಗಳೂರಿನ ಟೆಕ್ನಾಲಜಿ ಕಂಪನಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಆಕೆಯು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದಳು. ಜನವರಿ 29 ಹಾಗೂ 30 ರಂದು ಕೊಳ್ಳೇಗಾಲ ಪಟ್ಟಣದ ವೆಂಕಟೇಶ್ವರ ಮಹಲ್ ಈ ನೂತನ ಜೋಡಿಗಳ ಮದುವೆಗೆ ಸಿದ್ದಗೊಂಡು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು. ಸಂಬಂಧಿಕರು, ಸ್ನೇಹಿತರು, ಬಂಧು ಬಾಂದವರು ಕಲ್ಯಾಣ ಮಂಟಪಕ್ಕೆ ಬಂದು ನವ ದಂಪತಿಗಳನ್ನು ಹರಸುವವರಿದ್ದರು. ಮದುಮಗ ಭವಿಷ್ಯದ ಕನಸ್ಸಿನೊಂದಿಗೆ ಮದುವೆ ಮಂಟಪಕ್ಕೆ ಕಾರಿನಲ್ಲಿ ಬರುತ್ತಿದ್ದ. ಹಸಮಣೆ ಹೇರಿ ಮಂಗಳವಾದ್ಯಗಳ ಸದ್ದಿನೊಂದಿಗೆ ಸಪ್ತಪದಿ ತುಳಿಯಬೇಕಾದವಳು ತನ್ನ ಪ್ರಿಯಕರನ ಜೊತೆ ಸೇರಿ ಗಂಡನಾಗಬೇಕಿದ್ದವನ ಕೊಲೆಗೆ ಸಂಚು ರೂಪಿಸಿ ಮದುಮಗನಿಗೆ ಚಾಕು ಇರಿಸಿರುವ ಐನಾತಿ ಯುವತಿ ತಾನು ತೋಡಿದ್ದ ಖೆಡ್ಡಕ್ಕೆ ತಾನೆ ಬಿದ್ದು ಪೊಲೀಸರ ಅತಿಥಿಯಾಗಿ ತನ್ನ ಪ್ರಿಯಕರನೊಡನೆ ಜೈಲು ಸೇರಿದ್ದಾಳೆ.

ತಾಲೂಕಿನ ಕುಣಗಳ್ಳಿ ಗ್ರಾಮದ ರವೀಶ್ ಮತ್ತು ನಯನ ಅವರ ವಿವಾಹ ಜ. 30ರಂದು ಪಟ್ಟಣದ ಕಲ್ಯಾಣ ಮಂಟಪದಲ್ಲಿ ನಿಗದಿಯಾಗಿತ್ತು. ಅದಕ್ಕಾಗಿ ಮದುಮಗ ರವೀಶ್ ಜ. 29 ರಂದು ಸಂಜೆ ಕಾರಿನಲ್ಲಿ ಕಲ್ಯಾಣ ಮಂಟಪಕ್ಕೆ ಬರುತ್ತಿದ್ದರು. ಈ ವೇಳೆ ಮತ್ತೊಂದು ಕಾರಿನಲ್ಲಿ ಹಿಂಬಾಲಿಸಿ ಬಂದಿದ್ದ ಆರೋಪಿ ದರ್ಶನ್, ಮದುಮಗ ತೆರಳುತ್ತಿದ್ದ ಕಾರನ್ನು ಅಡ್ಡಗಟ್ಟಿ, ರವೀಶ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದನು. ವಧುವಿನ ಕುಮ್ಮಕ್ಕಿನಿಂದಲೇ ಕೃತ್ಯ ನಡೆದಿರಬೇಕೆಂಬ ಶಂಕೆಯಿಂದ ವರ ಮದುವೆಗೆ ನಿರಾಕರಿಸಿದ್ದರಿಂದ ಜ. 30 ರಂದು ನಡೆಯಬೇಕಿದ್ದ ಮದುವೆ ಮುರಿದುಬಿದ್ದಿದೆ. ಪ್ರಕರಣ ಬೇಧಿಸಿರುವ ಕೊಳ್ಳೇಗಾಲ ಪೊಲೀಸರು ಪ್ರಕರಣದ ಮಾಸ್ಟರ್ ಮೈಂಡ್ ಆರೋಪಿ ಕೊಳ್ಳೇಗಾಲ ಪಟ್ಟಣದ ಹೊಸ ಅಣಗಳ್ಳಿ ನಯನ (24) ಹಾಗೂ ಆಕೆಯ ಪ್ರಿಯಕರ ಬೆಂಗಳೂರು ದಕ್ಷಿಣ ಜಿಲ್ಲೆ ಹೆಣ್ಣೂರು ಬಂಡೆಯ ಹೊರಮಾವು ಅಗರದ ಅಲೆಕ್ಸಾಂಡರ್ ಹಿರಿಯ ಮಗ ಆರೋಪಿ ದರ್ಶನ್ (32) ಇಬ್ಬರೂ ಐನಾತಿ ಪ್ರೇಮಿಗಳು ಮದುಮಗನ ಕೊಲೆಗೆ ಯತ್ನಿಸಿ ಜೈಲು ಸೇರಿದ್ದಾರೆ.

ಪ್ರಕರಣದ ಮಾಸ್ಟರ್ ಮೈಂಡ್ ಆರೋಪಿ ನಯನ ಕೊಳ್ಳೇಗಾಲ ಪಟ್ಟಣದ ಹೊಸ ಅಣಗಳ್ಳಿ ಬಡಾವಣೆಯ ಲೇ.ಮಂಚಯ್ಯ ಮಗಳು ತಂದೆ ಈಗ ಇಲ್ಲ ತಾಯಿ ನೆರಳಲ್ಲೇ ಬೆಳದ ಈಕೆ ಎಎನ್‌ಎಂ ನರ್ಸಿಂಗ್ ತರಬೇತಿ ಪಡೆದಿದ್ದಳು. ಹಾಗಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ಹೆಣ್ಣೂರು ಬಂಡೆಯ ವಿಜಯಲಕ್ಷ್ಮಿ ನರ್ಸಿಂಗ್ ಹೋಮ್‌ನಲ್ಲಿ ಶುಶ್ರೂಷಕಿ (ನರ್ಸ್) ಯಾಗಿ ಕಳೆದ 2 ವರ್ಷಗಳಿಂದ ಕೆಲಸ ಮಾಡಿ ಕೊಂಡಿದ್ದಳು. ನೆಟ್ಟಗೆ ಶುಶ್ರೂಷಕಿ ಕೆಲಸ ಮಾಡಿ ಕೊಂಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಹಸಿಬಿಸಿ ವಯಸ್ಸಿನ ಹದ್ದು ಮೀರಿದ ಹುಚ್ಚು ಮನಸ್ಸನ್ನು ನಿಯಂತ್ರಿಸಿ ಕೊಳ್ಳಲಾಗದೆ ದೂರದ ಬೆಂಗಳೂರಿನಲ್ಲಿ ದರ್ಶನ್ ಎಂಬ ಪೊರ್ಕಿಯ ಜೊತೆ ಸೇರಿ ಪ್ರೀತಿ, ಪ್ರೇಮ, ಪ್ರಣಯ ಎಂದು ಬದುಕನ್ನು ನರಕ ಮಾಡಿಕೊಂಡು ಈಗ ಪೊಲೀಸರ ಅತಿಥಿಯಾಗಿ ಜೈಲೂಟದ ರುಚಿ ನೋಡುತ್ತಿದ್ದಾಳೆ.

ಬೆಂಗಳೂರು ದಕ್ಷಿಣ ಜಿಲ್ಲೆ ಹೆಣ್ಣೂರು ಬಂಡೆಯ ಹೊರಮಾವು ಅಗರದ ಅಲೆಕ್ಸಾಂಡರ್ ಹಾಗೂ ಮುನಿರತ್ನಳ ಹಿರಿಯ ಮಗ ಆರೋಪಿ ದರ್ಶನ್ (32), ಎಸ್‌ಎಸ್‌ಎಲ್‌ಸಿವರೆಗೆ ಓದಿಕೊಂಡಿದ್ದನು. ದರ್ಶನ್ ಆಟೋ ಓಡಿಸಿಕೊಂಡಿದ್ದ ಜೊತೆಗೆ ತಮಟೆ ಬಾರಿಸುವ ಕೆಲಸವನ್ನು ಮಾಡುತ್ತಿದ್ದ. ಈತನ ತಮ್ಮ ತರುಣ್, ತಂಗಿ ಜ್ಯೋತಿ, ತಂದೆ ಅಲೆಕ್ಸಾಂಡರ್ ಈಗ ಜೊತೆಯಲ್ಲಿಲ್ಲ ಹೆಂಡತಿ ಮಕ್ಕಳನ್ನು ಬಿಟ್ಟು ಬೇರೆಲ್ಲೋ ಇದ್ದಾನೆ. ಮೂವರು ಮಕ್ಕಳನ್ನು ತಾಯಿ ಮುನಿರತ್ನಳೇ ಮನೆ ಕೆಲಸ ಮಾಡಿ ಸಾಕುತ್ತಿದ್ದಾಳೆ.


ಎಸ್ಪಿ ಮುತ್ತುರಾಜ್


ಪಿಎಸ್‌ಐ ಬಿ.ವಿ. ವರ್ಷ

ಒಮ್ಮೆ ದರ್ಶನ್ ತನ್ನ ಸ್ನೇಹಿತನೊರ್ವನಿಗೆ ಅಪಘಾತವಾಗಿತ್ತು, ಆತನನ್ನು ಹೆಣ್ಣೂರು ಬಂಡೆಯ ವಿಜಯಲಕ್ಷ್ಮಿ ನರ್ಸಿಂಗ್ ಹೋಂ ಗೆ ಕರೆದುಕೊಂಡು ಹೋಗಿದ್ದ. ಈ ವೇಳೆ ನಯನಳ ಪರಿಚಯವಾಗಿತ್ತು. ಮತ್ತೊಮ್ಮೆ ಆತನ ತಾಯಿ ಮುನಿರತ್ನಳಿಗೆ ಉಷಾರಿಲ್ಲದ ವೇಳೆ ಅದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ಆಗ ನಯನಳೇ ಮುಂದೆ ನಿಂತು ಸಹಾಯ ಮಾಡಿದ್ದಳು. ಈ ಸಂದರ್ಭದಲ್ಲಿ ಇಬ್ಬರು ಮೊಬೈಲ್ ನಂಬರ್‌ಗಳನ್ನು ಪರಸ್ಪರ ಬದಲಿಸಿ ಕೊಂಡಿದ್ದರು. ಅಂದಿನಿಂದ ಇಬ್ಬರು ಪೋನ್ ಕಾಲ್, ಇನ್‌ಸ್ಟಾಗ್ರಾಂ ಚಾಟಿಂಗ್ ಶುರುಮಾಡಿಕೊಂಡಿದ್ದರು. ಇದರಿಂದ ಪರಸ್ಪರ ಇಬ್ಬರಲ್ಲಿಯೂ ಪ್ರೇಮಾಂಕುರವಾಗಿತ್ತು ಕಳೆದ ಎರಡು ವರ್ಷಗಳಿಂದ ಇಬ್ಬರು ಗಾಢವಾಗಿ ಪ್ರೀತಿಸುತ್ತಿದ್ದರು. ಬಾನಾಡಿಗಳಂತೆ ಸ್ವಚ್ಚಂದವಾಗಿ ತೇಲಾಡುತ್ತಾ ಮೈಮರೆತಿದ್ದರು.


ಆರೋಪಿ ನಯನ

ಇತ್ತ ಕಳೆದ ಆರು ತಿಂಗಳ ಹಿಂದೆ ನಯನಳಿಗೆ ಕುಣಗಳ್ಳಿ ಗ್ರಾಮದ ರವಿ ಜೊತೆ ಮದುವೆ ನಿಶ್ಚಯವಾಗಿತ್ತು. ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಕುಣಗಳ್ಳಿ ಗ್ರಾಮದ ಲಿಂಗಯ್ಯ ಹಾಗೂ ಸುಂದ್ರಮ್ಮ ದಂಪತಿಗಳ ಒಬ್ಬನೇ ಮಗ ರವೀಶ, ಅಕ್ಕ ಮಹಾದೇವಮ್ಮ ಪಕ್ಕದ ಊರಿಗೆ ಮದುವೆಯಾಗಿದ್ದು ತನ್ನ ಗಂಡನೊಂದಿಗೆ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದಾಳೆ. ಐಟಿಐ ತರಬೇತಿ ಪಡೆದಿದ್ದ ರವೀಶ ಕಳೆದ 8-10 ವರ್ಷಗಳ ಹಿಂದೆ ಉದ್ಯೋಗ ಹರಸಿ ಬೆಂಗಳೂರು ಸೇರಿದ್ದಾನೆ. ಇಲ್ಲಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕಫೆಖ ಎಲೆಕ್ಟ್ರಾನಿಕ್ಸ್ ಕಂಪನಿಯಲ್ಲಿ 5 ವರ್ಷಗಳ ಕಾಲ ಕೆಲಸ ಮಾಡಿ ಕೊಂಡಿದ್ದ ನಂತರ ಹೆಬ್ಬಾಳದ ಕಲ್ಯಾಣ ನಗರದಲ್ಲಿರುವ RND ಟೆಕ್ನಾಲಜಿ ಕಂಪನಿಯಲ್ಲಿ ತಂತ್ರಜ್ಞಾನನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ. ತೀರಾ ಬಡತನದಿಂದ ಮೇಲೆ ಬಂದ ರವೀಶ ಬೆಂಗಳೂರು ಸೇರಿದ ಮೇಲೆ ಸುಧಾರಿಸಿಕೊಳ್ಳುತ್ತಿದ್ದ. ತಂದೆ ಲಿಂಗಯ್ಯ ವಯಸ್ಸಾಗಿದ್ದರಿಂದ ದುಡಿಯುವುದನ್ನು ನಿಲ್ಲಿಸಿದ್ದರು. ತಾಯಿ ಸುಂದ್ರಮ್ಮ ಮಗನ ಮದುವೆಯನ್ನೆ ಎದರು ನೋಡುತ್ತಿದ್ದಳು. ಗ್ರಾಮದಲ್ಲಿ ನೂತನವಾಗಿ ಮನೆಯನ್ನು ಕಟ್ಟಿಸಿ ಇತ್ತೀಚೆಗೆ ಗೃಹ ಪ್ರವೇಶವನ್ನು ಮಾಡಿದ್ದ ರವೀಶ ಮದುವೆ ಮಾಡಿಕೊಳ್ಳಲು ಮುಂದಾಗಿದ್ದ. ಅದಕ್ಕಾಗಿ ವಧು ಅನ್ವೇಷಣೆಮಾಡಿಸಿ ಗುರುಹಿರಿಯರ ಸಮ್ಮುಖದಲ್ಲಿ ಮದುವೆ ನಿಶ್ಚಯವಾಗಿತ್ತು. ಇನ್ನೇನು ಎಲ್ಲವೂ ಕೈಗೂಡಿತು ಎನ್ನುವ ವೇಳೆಗಾಗಲೆ ಕೈ ಹಿಡಿಯಬೇಕಿದ್ದವಳಿಂದಲೇ ಅಘಾತವೊಂದು ಬರಸಿಡಿಲಿನಂತೆ ಬಂದರಗಿತು.



ಇದೇ ಜನವರಿ 29 ಹಾಗೂ 39 ರಂದು ಪಟ್ಟಣದ ಶ್ರೀ ವೆಂಕಟೇಶ್ವರ ಮಹಲ್‌ನಲ್ಲಿ ಮದುವೆ ನಿಗಧಿಯಾಗಿತ್ತು. ರವೀಶ್‌ನ ಜೊತೆ ಮದುವೆ ನಿಶ್ಚಯವಾಗಿದ್ದರೂ ನಯನ ತನ್ನ ಪ್ರಿಯಕರ ದರ್ಶನ್ ಜೊತೆ ಎಂದಿನಂತೆ ಸಂಬಂಧ ಮುಂದುವರೆಸಿದ್ದಳು. ಪಾಪ ರವೀಶ ಅಮಾಯಕ ಯುವಕ ಅವನನ್ನು ಯಾಮಾರಿಸಿ ದರ್ಶನ್ ಜೊತೆ ನಿರಂತರ ಸಂಪರ್ಕದಲ್ಲಿದ್ದಳು. ಪ್ರಿಯಕರ ದರ್ಶನ್ ನಯನ ಜೊತೆ ಕದ್ದು ಮುಚ್ಚಿ ಪ್ರಣಯ ದಾಟವಾಡಲು ಆಗಾಗ ಕೊಳ್ಳೇಗಾಲಕ್ಕೆ ಬರುತ್ತಿದ್ದ ಬಂದವನು ನಯನಳನ್ನು ಇಲ್ಲಿನ ಬಿಳಿಗಿರಿ ರಂಗನ ಬೆಟ್ಟ ಹಾಗೂ ಇನ್ನಿತರ ಕಡೆ ಕರೆದುಕೊಂಡು ಹೋಗಿ ಸುತ್ತಾಡಿಕೊಂಡು ಏಕಾಂತವಾಗಿ ಬಾನಾಡಿಗಳಂತೆ ಸ್ವಚ್ಚಂದವಾಗಿ ತೇಲಾಡುಡುತ್ತಾ ಮೈಮರೆತಿದ್ದರು. ರುಚಿಕಂಡ ಬೆಕ್ಕು ಬಿಡುವುದೇ ಆಗಾಗಿ ಪರಸ್ಪರ ಇಬ್ಬರನ್ನೊಬ್ಬರು ಬಿಟ್ಟು ಕೊಡಲು ಸಾಧ್ಯವಾಗದಷ್ಟು ಗಾಢವಾಗಿ ಪ್ರೀತಿಸುತ್ತಿದ್ದರು. ಇದು ಯಾವ ರೀತಿ ಪ್ರೇಮವೆಂದರೆ ನಯನಳನ್ನು ಮದುವೆಯಾಗ 'ಬೇಕಾದ ಹುಡುಗನನ್ನ ಕೊಲ್ಲುವ ಮಟ್ಟಿಗೆ ಇತ್ತು ಎಂಬುದು ಸಾಬೀತಾಗಿದೆ.

ಆದರೂ ನಯನ ಮದುವೆ ನಿಶ್ಚಯವಾಗಿದ್ದ ರವೀಶ್ ಹಾಗೂ ತನ್ನ ಪ್ರೇಮಿ ದರ್ಶನ್ ಇಬ್ಬರ ಜೊತೆಯಲ್ಲಿಯೂ ಗೇಮ್ ಆಡಲು ಶುರು ಮಾಡಿದ್ದಾಳೆ. ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ಎರಡು ದೋಣಿಗಳಲ್ಲೂ ಪ್ರಯಾಣ ಮಾಡಲು ಹೊರಟಿದ್ದಳು. ಮದುವೆ ಹತ್ತಿರ ಬರುತ್ತಿದ್ದಂತೆ ರವೀಶ್ ನನ್ನನ್ನು ಮದುವೆಯಾಗದಂತೆ ಏನಾದರೂ ಮಾಡಿ ಬೆದರಿಸಬೇಕೆಂದು ನಯನ ತನ್ನ ಪ್ರಿಯಕರ ದರ್ಶನ್‌ಗೆ ಒತ್ತಡ ಹಾಕಿದ್ದಳು. ಈಕೆಯ ಚಿತಾವಣೆ ಮೇರೆಗೆ ದರ್ಶನ್ ಮದುವೆಗೆ ಇಪ್ಪತ್ತು ದಿನಗಳ ಹಿಂದೆ ರವೀಶನಿಗೆ ಕರೆ ಮಾಡಿ ನಯನಳ ಜೊತೆ ತನಗಿರುವ ಪ್ರೇಮದ ಬಗ್ಗೆ ಹೇಳಿಕೊಂಡಿದ್ದ ಹಾಗೂ ಮದುವೆ ಮಾಡಿಕೊಳ್ಳದಂತೆ ದಮ್ಕಿ ಹಾಕಿದ್ದ. ಈ ಬಗ್ಗೆ ರವೀಶ್ ಯುವತಿ ಹಾಗೂ ಕುಟುಂಬದವರನ್ನು ಕೇಳಿದಾಗ ಆತ ಯಾರೆಂದು ನನಗೆ ಗೊತ್ತಿಲ್ಲ. ನಮಗೆ ಈ ಮದುವೆ ಇಷ್ಟವಿದೆ ಎಂದು

☞ 10


ಆಸ್ಪತ್ರೆಯಲ್ಲಿ ದಾಖಲಾಗಿದ್ದ ರವೀಶನನ್ನು ಮದುವೆಯಾಗು ಎಂದು ಹೈಡ್ರಾಮಾ ಮಾಡುತ್ತಿರುವ ನಯನ



**ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕಿನ ಜಗದಾಳ ಗ್ರಾಮದಲ್ಲಿ ನಡೆದಿರುವ ಒಂದು ಘಟನೆ, ಆಸ್ತಿ ಆಸೆ ಮಾನವನನ್ನು ಎಷ್ಟರ ಮಟ್ಟಿಗೆ ಕ್ರೂರನನ್ನಾಗಿ ಮಾಡ ಬಲ್ಲದು ಎಂಬುದಕ್ಕೆ ಭೀಕರ ಉದಾಹರಣೆಯಾಗಿದೆ. ದೈವಭಕ್ತೆ, ದಾನಶೀಲತೆಗಾಗಿ ಹೆಸರುವಾಸಿಯಾಗಿದ್ದ, ಬದುಕಿನುದ್ದಕ್ಕೂ ನೋವುನಲಿವನ್ನು ಮೌನವಾಗಿ ಸಹಿಸಿಕೊಂಡು ಬಂದ 90 ವರ್ಷದ ವೃದ್ಧೆ ಚಂದ್ರವ್ವ ತಂದೆ ಮಲ್ಲಪ್ಪ ನಿಲಜಗಿಯನ್ನು, ಆಕೆಯದೇ ಅಣ್ಣನ ಮಕ್ಕಳು ಪಿತ್ರಾರ್ಜಿತ ಆಸ್ತಿಯ ಲಾಭಕ್ಕಾಗಿ ಕಾಲುವೆಗೆ ತಳ್ಳಿ, ಬಳಿಕ ಉಸಿರುಗಟ್ಟಿಸಿ ಕೊಲೆ ಮಾಡಿರುವ ಘಟನೆ ಜಿಲ್ಲೆ ಆಕ್ರೋಶಕ್ಕೆ ಕಾರಣವಾಗಿದೆ.**


ಚಂದ್ರವ್ವ ಮಾಡಿಸಿರುವ ಬೆಳ್ಳಿ ಬಾಗಿಲುಗಳು

## ಜಗದಾಳ ಗ್ರಾಮದಲ್ಲಿ ಮಾನವೀಯತೆಯನ್ನು ನಡುಗಿಸಿದ ಅಮಾನವೀಯ ಘಟನೆ

# ಆಸ್ತಿ ಆಸೆಗೆ 90 ವರ್ಷದ ದಾನಶೀಲ ದಾನವ್ವಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ ಪಾಪಿಗಳು!

**ಬಾಗಲಕೋಟೆ**

✍ ಮಂಜುನಾಥ ಕರೋಳಿ

**ಚಂ**ದ್ರವ್ವ ನಿಲಜಗಿ ಎಂಬ ಈ ವೃದ್ಧೆ ಜೀವನದ ಆರಂಭದಲ್ಲಿಯೇ ಭಾರೀ ನೋವುಗಳನ್ನು ಕಂಡಿದ್ದಳು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ತೀರಾ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ, ಮದುವೆಯಾದ ಕೇವಲ ಒಂದು ವರ್ಷದೊಳಗೆ ಪತಿಯನ್ನು ಕಳೆದುಕೊಂಡ ಈ ಮಹಿಳೆ, ಪುನರ್ವಿವಾಹವಿಲ್ಲದೆ ತನ್ನ ಜೀವನವನ್ನು ದೇವರ ಸೇವೆ ಮತ್ತು ಕಾಯಕದಲ್ಲಿಯೇ ಸಮರ್ಪಿಸಿಕೊಂಡಿದ್ದಳು. ಸಹೋದರರು ಸಹ ನಿಧನರಾಗಿದ್ದು, ಸಂಬಂಧಗಳೆಲ್ಲ ಕ್ಷೀಣಿಸುತ್ತಿದ್ದರೂ, ಬದುಕಿನ ಮೇಲಿನ ವಿಶ್ವಾಸವನ್ನು ಕಳೆದುಕೊಳ್ಳದೆ ಚಂದ್ರವ್ವ ತನ್ನ ದಾರಿಯನ್ನು ತಾನು ತಾನೇ ರೂಪಿಸಿಕೊಂಡಿದ್ದಳು.


ಎಸ್ಪಿ ಸಿದ್ದಾರ್ಥ್ ಗೋಯಲ್


ಅ॥ ಎಸ್ಪಿ ಪ್ರಸನ್ನ ದೇಸಾಯಿ

### ದೇವಾಲಯಕ್ಕೆ ಲಕ್ಷಾಂತರ ರೂಪಾಯಿ ದಾನ

ಜಗದಾಳ ಗ್ರಾಮವನ್ನು ತೊರೆದು ತೇರದಾಳದ ಶ್ರೀ ಅಲ್ಲಮಪ್ರಭು (ಶ್ರಪ್ರಭುಲಿಂಗೇಶ್ವರ) ದೇವಸ್ಥಾನದ ಸಮೀಪ ವಾಸವಾಗಿದ್ದ ಚಂದ್ರವ್ವ, ದಿನನಿತ್ಯ ತರಕಾರಿ ಮಾರಾಟ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಬಂದ ಆದಾಯದಲ್ಲಿ ತನ್ನ ಅಗತ್ಯಕ್ಕೆ ಬೇಕಾದಷ್ಟು ಮಾತ್ರ ಇಟ್ಟುಕೊಂಡು, ಉಳಿದ ಹಣವನ್ನು ದೇವಾಲಯ ಮತ್ತು ದಾನಧರ್ಮಕ್ಕೆ ಮೀಸಲಿಡುತ್ತಿದ್ದರು. ಈ ಕಾರಣದಿಂದಲೇ ಸ್ಥಳೀಯರಲ್ಲಿ ಅವರು 'ಚಂದ್ರವ್ವ ದಾನವ್ವ' ಎಂಬ ಹೆಸರಿನಿಂದಲೇ ಪ್ರಸಿದ್ಧರಾಗಿದ್ದರು. ದೇವಾಲಯಕ್ಕೆ ಭಕ್ತರ ವಿಶ್ರಾಂತಿ ಕೊಠಡಿಗಳು, ಹಾಗೂ ಸುಮಾರು 16 ಲಕ್ಷ ರೂಪಾಯಿ ಮೌಲ್ಯದ 22 ಕೆ.ಜಿ ಬೆಳ್ಳಿಯಿಂದ ನಿರ್ಮಿತ ಗರ್ಭಗುಡಿಯ ಬೆಳ್ಳಿಬಾಗಿಲುಗಳನ್ನು ನಿರ್ಮಿಸಿ ಕೊಟ್ಟಿರುವುದು ಅವರ ದಾನಶೀಲತೆಯ ಜೀವಂತ ಸಾಕ್ಷಿಯಾಗಿದೆ.


### 40 ಎಕರೆ ಪಿತ್ರಾರ್ಜಿತ ಆಸ್ತಿ

ಚಂದ್ರವ್ವಳ ತಂದೆ ಮಲ್ಲಪ್ಪ ನಿಲಜಗಿಗೆ ಒಟ್ಟು 40 ಎಕರೆ ಜಮೀನು ಇದ್ದು, ಐದು ಮಕ್ಕಳಲ್ಲಿ ಒಬ್ಬಳಾದ ಚಂದ್ರವ್ವಳಿಗೂ ನ್ಯಾಯಸಮ್ಮತ ಪಾಲು ಬರಬೇಕಿತ್ತು. ಆದರೆ ಸಹೋದರರು ಮೃತಪಟ್ಟ ನಂತರ, ಆ ಆಸ್ತಿಯನ್ನು ಅಣ್ಣಂದಿರ ಮಕ್ಕಳು ನೋಡಿಕೊಳ್ಳುತ್ತಿದ್ದರು. ಇದರಿಂದ ಬೇಸತ್ತ ಚಂದ್ರವ್ವ, ಸುಮಾರು 35 ವರ್ಷಗಳ ಹಿಂದೆ ಬನಹಟ್ಟಿ ನ್ಯಾಯಾಲಯದಲ್ಲಿ ಪಿತ್ರಾರ್ಜಿತ ಆಸ್ತಿ ಹಕ್ಕಿಗಾಗಿ ದಾವೆ ಹೂಡಿದ್ದರು. ದೀರ್ಘಕಾಲದ ವಿಚಾರಣೆಯ ಬಳಿಕ, ನ್ಯಾಯಾಲಯ ಚಂದ್ರವ್ವಳಿಗೆ 11 ಎಕರೆ ಜಮೀನು ನೀಡಬೇಕು ಎಂದು ಆದೇಶ ನೀಡಿತ್ತು. ಈ ಆದೇಶವೇ ಆಕೆಯ ಸಾವಿಗೆ ಕಾರಣವಾಗುತ್ತದೆ ಎಂಬುದು ಯಾರೂ ಊಹಿಸಿರಲಿಲ್ಲ.


ಡಿವೈಎಸ್ಪಿ ರೋಷನ್ ಜಮೀರ್


ಪಿಎಸ್ಐ ಶಾಂತಾ ಹಳ್ಳಿ

ನ್ಯಾಯಾಲಯದ ಆದೇಶದಂತೆ ಜಮೀನಿನ ಸರ್ವೆ ಕಾರ್ಯಕ್ಕಾಗಿ ಕಂದಾಯ ಅಧಿ ಕಾರಿಗಳು 2026ರ ಜನವರಿ 13ರಂದು ಚಂದ್ರವ್ವಳನ್ನು ಜಗದಾಳ ಗ್ರಾಮಕ್ಕೆ ಬರಲು ದೂರವಾಣಿ ಮೂಲಕ ಸೂಚಿಸಿದ್ದರು. ಈ ವಿಷಯವನ್ನು ಚಂದ್ರವ್ವ ತಮ್ಮನ್ನು ತಾಯಿ ಸಮಾನವಾಗಿ ನೋಡಿಕೊಂಡಿದ್ದ ತೇರದಾಳದ ದೇವಸ್ಥಾನದ ಅರ್ಚಕ ಕಾಡಯ್ಯ ಅವರಿಗೆ ತಿಳಿಸಿದ್ದರು. ಕಾಡಯ್ಯ ಅವರು ಕಾರನ್ನು ಬಾಡಿಗೆಗೆ ತೆಗೆದುಕೊಂಡು, ಚಂದ್ರವ್ವಳನ್ನು ಜಗದಾಳ ಗ್ರಾಮಕ್ಕೆ ಕರೆತಂದಿದ್ದರು. ವಯಸ್ಸಿನ ಕಾರಣದಿಂದ ಆರೋಗ್ಯ ಕ್ಷೀಣಿಸಿದ್ದ ಚಂದ್ರವ್ವ ಕಾರಿನಲ್ಲಿಯೇ ಕುಳಿತಿದ್ದರು.


ಬಂಧಿತ ಆರೋಪಿಗಳು

ಜಮೀನಿನ ಸಮೀಪ ಕಾರು ನಿಲ್ಲಿಸಿದ್ದ ವೇಳೆ, ಕಂದಾಯ ಅಧಿಕಾರಿಗಳು, ಕಾಡಯ್ಯ ಮತ್ತು ಕಾರು ಚಾಲಕ ಸ್ವಲ್ಪ ದೂರ ತೆರಳಿದ್ದ ಸಂದರ್ಭವನ್ನು ಗಮನಿಸಿದ ಅಣ್ಣನ ಮಕ್ಕಳಾದ ಪರಪ್ಪ ನಿಲಜಗಿ, ಸದಾಶಿವ ನಿಲಜಗಿ, ಶಂಕರಪ್ಪ ನಿಲಜಗಿ ಸೇರಿದಂತೆ ಇತರರು, ಚಂದ್ರವ್ವಳನ್ನು 'ಚಹಾ ಕುಡಿಯೋಣ' ಎಂದು ಕಾರಿನಿಂದ ಕೆಳಗಿಳಿಸಿದ್ದಾರೆ. ಯಾರೂ ಇಲ್ಲದ ಸಮಯವೇ ಸೂಕ್ತವೆಂದು ನಿರ್ಧರಿಸಿದ ಆರೋಪಿಗಳು, ಸಮೀಪದಲ್ಲೇ ಇದ್ದ ಘಟಪ್ರಭಾ ಕಾಲುವೆಯ ಬಳಿ ಕರೆದೊಯ್ದು, ಅಜ್ಜಿಯನ್ನು ಬಲವಂತವಾಗಿ ಕಾಲುವೆಗೆ ತಳ್ಳಿದ್ದಾರೆ.

### ಗೋಕಾಕ ಮಾರ್ಗದಲ್ಲಿ ಉಸಿರುಗಟ್ಟಿಸಿ ಹತ್ಯೆ

ಚಂದ್ರವ್ವ ಕಿರುಚಾಟ ಕೇಳಿದ ಕೂಡಲೇ ಕಾಡಯ್ಯ, ಕಂದಾಯ ಅಧಿಕಾರಿಗಳು ಮತ್ತು ಚಾಲಕ ಸ್ಥಳಕ್ಕೆ ಧಾವಿಸಿದಾಗ, ಆರೋಪಿಗಳು ನಾಟಕೀಯವಾಗಿ ಕಾಲುವೆಗೆ ಜಿಗಿದು ರಕ್ಷಿಸುವಂತೆ ನಟಿಸಿ, ಗಂಭೀರವಾಗಿ ಗಾಯಗೊಂಡ ಚಂದ್ರವ್ವಳನ್ನು ಹೊರತೆಗೆದಿದ್ದಾರೆ. ತೀವ್ರ ಪೆಟ್ಟಿನಿಂದ ನರಳುತ್ತಿದ್ದ ವೃದ್ಧೆಯನ್ನು ತಕ್ಷಣ ಬನಹಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅಲ್ಲಿನ ವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ರೆಫರ್ ಮಾಡಿದ್ದಾರೆ.

ಇಲ್ಲಿ ಮತ್ತೊಂದು ಸಂಚು ನಡೆಯಿತು.

ಆರೋಪಿಗಳು ಜನಾವು ಅತ್ತೆಯನ್ನು ನೋಡಿಕೊಳ್ಳುತ್ತೇವೆಜ ಎಂದು ಹೇಳಿ, ಚಂದ್ರವ್ವಳನ್ನು ತಮ್ಮ ಕಾರಿನಲ್ಲಿ ಕರೆದುಕೊಂಡು ಹೋಗಿ, ಕಾಡಯ್ಯ ಮತ್ತು ಚಾಲಕನನ್ನು ತೇರದಾಳಕ್ಕೆ ಹಿಂದಿರುಗಿಸಿದ್ದಾರೆ. ಆದರೆ ಬನಹಟ್ಟಿಯಿಂದ ಗೋಕಾಕ ಕಡೆಗೆ ಪ್ರಯಾಣ ಬೆಳೆಸಿದ ಆರೋಪಿಗಳು, ಗೂರ್ಲಾಪೂರ ಕ್ರಾಸ್ ಬಳಿ ಕಾರು ನಿಲ್ಲಿಸಿ, ಚಂದ್ರವ್ವಳ ಮೂಗು ಮತ್ತು ಬಾಯಿಯನ್ನು ಬಲವಂತವಾಗಿ ಒತ್ತಿ ಉಸಿರುಗಟ್ಟಿಸಿ ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ.

ನಂತರ ಮೃತದೇಹವನ್ನು ಗೋಕಾಕದ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಬಿಟ್ಟು, ಸಹಜ ಸಾವು ಎಂದು ಬಿಂಬಿಸಲು ಯತ್ನಿಸಿದ್ದಾರೆ. ವೈದ್ಯರು ಚಂದ್ರವ್ವ ಮೃತಪಟ್ಟಿರುವುದಾಗಿ ತಿಳಿಸಿದ ನಂತರ, ಮೃತದೇಹವನ್ನು ಮರಳಿ ಜಗದಾಳ ಗ್ರಾಮಕ್ಕೆ ಕರೆತಂದು ಅಂತ್ಯಕ್ರಿಯೆಗೆ ಸಜ್ಜಾಗಿದ್ದರು. ಆದರೆ ಅಜ್ಜಿಯನ್ನು ತಾಯಿ ಸಮಾನವಾಗಿ ನೋಡಿಕೊಂಡಿದ್ದ ಕಾಡಯ್ಯ ಅವರಿಗೆ ಈ ಸಾವಿನಲ್ಲಿ ಅನುಮಾನ ಮೂಡಿ, ನೇರವಾಗಿ ಬನಹಟ್ಟಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.


ದೂರು ದಾಖಲಿಸಿಕೊಂಡ ಬನಹಟ್ಟಿ ಪಿ.ಎಸ್.ಐ ಶಾಂತಾಹಳ್ಳಿ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಿದಾಗ, ಆರೋಪಿಗಳ ವಿರುದ್ಧ ಗಂಭೀರ ಅನುಮಾನಗಳು ವ್ಯಕ್ತವಾದವು. ತೀವ್ರ ವಿಚಾರಣೆ ವೇಳೆ ಆರೋಪಿಗಳು ತಮ್ಮ ಕೃತ್ಯವನ್ನು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ವಿಷಯ ತಿಳಿದ ಕೂಡಲೇ ಬನಹಟ್ಟಿ ಸಿಪಿಐ ಎಚ್.ಆರ್. ಪಾಟೀಲ, ಜಮಖಂಡಿ ಡಿವೈಎಸ್‌ಪಿ ರೋಷನ್ ಜಮೀರ್, ಬಾಗಲಕೋಟೆ ಎಸ್‌ಪಿ ಸಿದ್ದಾರ್ಥ ಗೋಯಲ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ತನಿಖೆಗೆ ಮಾರ್ಗಸೂಚಿ ನೀಡಿದ್ದಾರೆ.

### ಆರೋಪಿಗಳ ಬಂಧನ

ಪ್ರಕರಣದ ಪ್ರಮುಖ ಆರೋಪಿಗಳಾದ ಪರಪ್ಪ ನಿಲಜಗಿ, ಸದಾಶಿವ ನಿಲಜಗಿ, ಶಂಕರಪ್ಪ ನಿಲಜಗಿ, ಸಿದ್ದಪ್ಪ ನಿಲಜಗಿ ಮತ್ತು ಮಲ್ಲಪ್ಪ ನಿಲಜಗಿ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಘಟನೆ ಕೇವಲ ಒಂದು ಕೊಲೆ ಪ್ರಕರಣವಲ್ಲ; ಇದು ಕುಟುಂಬ, ಆಸ್ತಿ, ಮತ್ತು ಮೌಲ್ಯಗಳ ಕುಸಿತವನ್ನು ತೋರಿಸುವ ಕಪ್ಪು ಅಧ್ಯಾಯವಾಗಿದೆ. ಬದುಕಿನುದ್ದಕ್ಕೂ ದೇವರ ಸೇವೆ, ದಾನ ಮತ್ತು ಸರಳತೆಯಲ್ಲೇ ಜೀವನ ಕಳೆಯುತ್ತಿದ್ದ ಚಂದ್ರವ್ವಳ ಅಂತ್ಯ, ಸಮಾಜವನ್ನು ಆತ್ಮಾವಲೋಕನಕ್ಕೆ ದೂಡಬೇಕಾದ ಅಗತ್ಯವಿದೆ.


ಕೊಲೆ ಮಾಡಿ ಶವವನ್ನು ಈ ಕಾಲುವೆಯಲ್ಲೇ ಎಸೆದದ್ದು

ಪೋಲೀಸ್ ನ್ಯೂಸ್ 9 08-02-2026




ಜೈದ್‌ಖಾನ್ ನಟನೆಯ ಕಲ್ಟ್ ಸಿನಿಮಾ ಪ್ರಚಾರ ಸಭೆಯ ಫ್ಲೆಕ್ಸ್‌ನ್ನು ಶಿಡ್ಲಘಟ್ಟ ನಗರದ ಕೋಟೆ ವೃತ್ತದಲ್ಲಿ ಅಳವಡಿಸಲಾಗಿ, ರಸ್ತೆ ಮಧ್ಯದಲ್ಲಿದ್ದ ಫ್ಲೆಕ್ಸ್ ಕೆಲವು ಬೈಕ್ ಸವಾರರಿಗೆ ತಗುಲಿ ಗಾಯಗಳಾಗಿದ್ದರ ಬಗ್ಗೆ ನಗರಸಭೆ ಪೌರಾಯುಕ್ತರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಫ್ಲೆಕ್ಸ್‌ನ್ನು ಪೌರ ಕಾರ್ಮಿಕರಿಂದ ತೆರವು ಮಾಡಿಸಿದರು. ಫ್ಲೆಕ್ಸ್ ತೆಗೆದಿರುವ ವಿಷಯ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡರಿಗೆ ತಿಳಿಯುತ್ತಿದ್ದಂತೆ, ಪೌರಾಯುಕ್ತರಿಗೆ ಫೋನ್ ಮಾಡಿ, ನಮ್ಮ ಫ್ಲೆಕ್ಸ್‌ನ್ನು ತೆಗೆದ ಸೂ... ಮಕ್ಕಳು ಯಾರು? ಅವರನ್ನು ನಿಮ್ಮನ್ನು ಸುಟ್ಟು ಹಾಕುವುದಲ್ಲದೆ ವಾರ್ಡ್‌ಗಳಿಂದನ ನಮ್ಮ ಜನರನ್ನು ಕರೆಸಿ ಚಪ್ಪಲಿಯಲ್ಲಿ ಹೊಡೆಸಿ ಊರು ಬಿಟ್ಟು ಹೋಗುವಂತೆ ಮಾಡುವುದಾಗಿ ಧಮ್ಕಿ ಹಾಕಿದರು. ಪೌರಾಯುಕ್ತೆ ಹಾಗೂ ಪೌರ ಕಾರ್ಮಿಕರಿಗೆ ಅವಾಚ್ಯ ಶಬ್ದಗಳಿಂದ ಬೈದು ಧಮ್ಕಿ ಹಾಕಿರುವುದನ್ನು ಖಂಡಿಸಿದ ಸಾರ್ವಜನಿಕರು ಮತ್ತು ಪೌರ ಸೇವಾ ನೌಯರರು ಪ್ರತಿಭಟನೆ ನಡೆಸಿ ತಾಲ್ಲೂಕು ದಂಡಾಧಿಕಾರಿಗಳಿಗೆ ಮನವಿ ನೀಡಿದರು ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದರೆಂಬ ಕಾರಣಕ್ಕೆ ಪೌರಾಯುಕ್ತೆ ಪೊಲೀಸರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಬಂಧನದ ಭೀತಿಯಿಂದ ಮಾಡಿದ ತಪ್ಪಿಗೆ ಸೋಶಿಯಲ್ ಮೀಡಿಯಾದಲ್ಲಿ ಕ್ಷಮೆ ಕೋರಿ ಉದ್ಯಮಿಯೊಂದಿಗೆ ಕೇರಳಕ್ಕೆ ಪಲಾಯನನಾಗಿದ್ದ ರಾಜೀಗೌಡರವರನ್ನು 14 ದಿನಗಳ ನಂತರ ಶಿಡ್ಲಘಟ್ಟ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ 24 ಗಂಟೆಗಳಲ್ಲಿ ಜಾಮೀನಿನ ಮೇಲೆ ಹೊರ ಬಂದು ಇದೊಂದು ರಾಜಕೀಯ ಪ್ರೇರಿತ ಪಿತೂರಿ, ಕಾನೂನು ಹೋರಾಟದಲ್ಲಿ ನ್ಯಾಯ ಸಿಗಲಿದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.


# ಫ್ಲೆಕ್ಸ್ ತೆರವು ಗಲಾಟೆ : ಪೌರಯುಕ್ತೆ ಹಾಗೂ ಪೌರ ಕಾರ್ಮಿಕರಿಗೆ ಧಮ್ಕಿ ಶಿಡ್ಲಘಟ್ಟ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಬಂಧನ!


**ಚಿಕ್ಕಬಳ್ಳಾಪುರ**

**ಕೋಲಾರ ಮಂಜು**

ರಾಜ್ಯದಲ್ಲಿ ಅಭಿವೃದ್ಧಿ ನಡೆಸಲೆಂದು ಜನತೆ ಕಾಂಗ್ರೆಸ್ ಸರ್ಕಾರಕ್ಕೆ ಪೂರ್ಣ ಪ್ರಮಾಣದ ಅಧಿಕಾರ ಕೊಟ್ಟರೆ, ಕೆಲವು ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗಿಂತ ತಮ್ಮನ್ನು ತಾವು ವಿಜೃಂಭಿಸಿಕೊಳ್ಳುವ ಫ್ಲೆಕ್ಸ್ ರಾಜಕೀಯ ಮಾಡಿಕೊಂಡು ರಾಜ್ಯದಲ್ಲಿ ಗಲಭೆಗಳಿಗೆ ಕಾರಣರಾಗುತ್ತಿದ್ದಾರೆ. ಇತ್ತೀಚೆಗೆ ಬಳ್ಳಾರಿಯಲ್ಲಿ ಕಾಂಗ್ರೆಸ್ ಶಾಸಕರ ಬ್ಯಾನರ್ ಕಟ್ಟುವ ವಿಚಾರದಲ್ಲಿ ಗಲಾಟೆಯಾಗಿ ಗುಂಡು ಹಾರಿಸುವ ಹಂತಕ್ಕೆ ತಲುಪಿದ್ದು, ಇದರಲ್ಲಿ ಒಬ್ಬನಿಗೆ ಗುಂಡು ತಗುಲಿ ಸಾವನ್ನಪ್ಪಿದ್ದ ಘಟನೆ ನಬಗ್ಗೆ ಇಬ್ಬರು ಶಾಸಕರ ನಡುವೆ ಸವಾಲು, ಪ್ರತಿ ಸವಾಲು ನಡೆಯುತ್ತಿದೆ. ಹೀಗಿರುವಾಗ ಕಾಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿಯೂ ಬ್ಯಾನರ್ ವಿಚಾರಕ್ಕೆ ಗೊಂದಲವಾಗಿತ್ತು. ಅಲ್ಲಿನ ಬಿಜೆಪಿ ತಾಲ್ಲೂಕು ಅಧ್ಯಕ್ಷ ಹಾಕಿಸಿದ್ದ ಫ್ಲೆಕ್ಸ್‌ನ್ನು ತೆಗೆಸಿದರೆಂಬ ಕಾರಣಕ್ಕೆ ನಗರಸಭೆ ಪೌರಾಯುಕ್ತರ ಮುಂದೆ ಮಾತನಾಡುವಾಗ ಅವರು ಬಳಸಿದ ಅಸಭ್ಯವಾಗಿದ್ದು, ಇದರಿಂದ ಅಧ್ಯಕ್ಷರು ಸಾರ್ವಜನಿಕರ ಟೀಕೆಗೆ ಒಳಗಾದಿದ್ದ ಘಟನೆ ಮಾಸುವ ಮುನ್ನವೇ ಇದೀಗ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ನಗರದಲ್ಲಿ ರಸ್ತೆಗೆ ಅಡ್ಡಲಾಗಿ ಕಟ್ಟಲಾಗಿದ್ದ ಫ್ಲೆಕ್ಸ್ ವೊಂದನ್ನು ನಗರಸಭೆ ಅಧಿಕಾರಿಗಳು ಪೌರ ಕಾರ್ಮಿಕರ ಮೂಲಕ ತೆರವು ಗೊಳಿಸಿದ್ದಾರೆ ಎಂಬ ವಿಚಾರಕ್ಕೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ, ನನಗೆ ಇಂತಹವರು ಗಾಡ್‌ಫಾದರ್ ಇದ್ದಾರೆ. ನಾನು ನಡೆದಿದ್ದೆ ದಾರಿ, ನಾನು ಏನು ಮಾಡಿದರೂ ಕೇಳುವವರೇ ಇಲ್ಲ ಎಂದು ಹೇಳಿಕೊಂಡು ಬೀಗುತ್ತಿರುವ ಉಪಮುಖ್ಯಮಂತ್ರಿಗಳ ಪರಮಾಪ್ತನೊಬ್ಬ ಕರೋನಾ ಸಂದರ್ಭದಲ್ಲಿ ತನ್ನ ಹುಟ್ಟೂರನ್ನು ಬಿಟ್ಟು ಶಿಡ್ಲಘಟ್ಟ ತಾಲ್ಲೂಕಿಗೆ ಬಂದು, ಕುಡಿಯಲು ನೀರಿಲ್ಲದೆ, ತಿನ್ನಲು ಅನವಿಲ್ಲದೆನೊಂದ ಜನರಿಗೆ ಆಹಾರ ಕಿಟ್ ಸೇರಿದಂತೆ ಮೂಲಸೌಕರ್ಯಗಳನ್ನು ನೀಡುತ್ತಾ ಅಲ್ಲಿಯೇ ನೆಲೆಸಿ ರಿಯಲ್ ಎಸ್ಟೇಟ್ ಉದ್ಯಮವನ್ನು ಮಾಡಿಕೊಂಡು ಜನೋಪಕಾರಿ ಕೆಲಸಗಳನ್ನು ಮಾಡುತ್ತಾ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಕೃಪೆಯಿಂದ 2023ರ ಶಿಡ್ಲಘಟ್ಟ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜೆಡಿಎಸ್ ಅಭ್ಯರ್ಥಿ ಮೇಲೂರು ರವಿಕುಮಾರ್‌ರವರಿಂದ ಪರಾಭವಗೊಂಡಿದ್ದ ಕೆಪಿಸಿಸಿ ಸಂಯೋಜಕ ರಾಜೀವ್‌ಗೌಡ ಅಲಿಯಾಸ್ ರಾಜಣ್ಣರವರು ಹಾಕಿಸಿದ್ದ ಕಾರ್ಯಕ್ರಮವೊಂದರ ಫ್ಲೆಕ್ಸ್‌ನ್ನು ನಗರಸಭೆಯಿಂದ ತೆರವು ಮಾಡಿಸಿದ್ದಾರೆಂದು ಪೌರಾಯುಕ್ತೆ ಮತ್ತು ಪೌರ ಕಾರ್ಮಿಕರನ್ನು ಅವಹೇಳನಕಾರಿಯಾಗಿ ಬೈದು, ನಿಂದಿಸಿ ಧಮ್ಕಿ ಹಾಕಿದ್ದಾರೆಂದು ಸಾರ್ವಜನಿಕರು ಹಾಗೂ ಪೌರ ಸೇವಾ ನೌಕರರು ರಾಜೀವ್‌ಗೌಡರ ವಿರುದ್ಧ ತಿರುಗಿ ಬಿದ್ದಿದ್ದಾರೆ.


ಕಣ್ಣೀರಿಡುತ್ತಿರುವ ಆಯುಕ್ತೆ ಅಮೃತ ಗೌಡ


ಎಸ್ಪಿ ಕುಶಾಲ್ ಚೌಕ್ಸೆ


ಡಿವೈಎಸ್ಪಿ ಮುರುಳಿಧರ


ಪಿಐ ಆನಂದ್

## ಸಿನಿಮಾ ಫ್ಲೆಕ್ಸ್ ಗಲಾಟೆ

ಸಚಿವ ಜಮೀರ್ ಅಹ್ಮದ್‌ರವರ ಮಗ ಚಿತ್ರನಟ ಜೈದ್‌ಖಾನ್‌ರವರ ನಟನೆಯ ಕಲ್ಟ್ ಚಲನಚಿತ್ರದ ಪ್ರಚಾರ ಸಭೆಯನ್ನು ರಾಜ್ಯಾದ್ಯಂತ ನಡೆಸುತ್ತಿದ್ದು, ಜನವರಿ 13ರಂದು ಶಿಡ್ಲಘಟ್ಟ ನಗರದ ನೆಹರೂ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿತ್ತು. ಅದರ ಪ್ರಚಾರಕ್ಕಾಗಿ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ನೇತೃತ್ವದಲ್ಲಿ ಶಿಡ್ಲಘಟ್ಟ ನಗರದಾದ್ಯಂತ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಅದರಂತೆ ನಗರದ ಕೋಟೆ ವೃತ್ತದಲ್ಲಿ ದೊಡ್ಡ ಪ್ರಮಾಣದಲ್ಲಿ ಫ್ಲೆಕ್ಸ್ ಅಳವಡಿಸಿದ್ದು, ಅದು ರಸ್ತೆಗೆ ತಾಗುತ್ತಿದ್ದು, ಬೈಕ್ ಸವಾರರಿಬ್ಬರಿಗೆ ಫ್ಲೆಕ್ಸ್ ತಗುಲಿ ಕೆಳಗೆ ಬಿದ್ದು ಗಾಯಗಳಾಗಿ ಚಿಕಿತ್ಸೆ ನಂತರ ನಗರಸಭೆ ಆಯುಕ್ತೆ ಅಮೃತಗೌಡರಿಗೆ ದೂರು ನೀಡಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವ ಫ್ಲೆಕ್ಸ್‌ನ್ನು ತೆಗೆಯುವಂತೆ ಒತ್ತಾಯಿಸಿದರು.

ಇದರಿಂದ ಎಚ್ಚೆತ್ತುಕೊಂಡ ನಗರಸಭೆಯ ಅಧಿಕಾರಿಗಳು ಅಲ್ಲಿಯ ಫ್ಲೆಕ್ಸ್‌ನ್ನು ಪೌರ ಕಾರ್ಮಿಕರಿಂದ ತೆರವುಗೊಳಿಸಿದರು. ಈ ವಿಷಯ ಕಾಂಗ್ರೆಸ್ ಮುಖಂಡ ರಾಜೀವ್ ಗೌಡರಿಗೆ ತಿಓಳಿಯುತ್ತಿದ್ದಂತೆ ಸೋಮವಾರ ಸಂಜೆ 4 ಗಂಟೆ ಸಮಯದಲ್ಲಿ ನಗರಸಭೆಯ ಆಯುಕ್ತೆ ಅಮೃತಸಭೆಗೌಡರವರ ಮೊಬೈಲ್ ಫೋನ್‌ಗೆ ಕರೆ ಮಾಡಿ ಏಕಾಏಕಿ ಬ್ಯಾನರ್ ತೆರವು ಬಗ್ಗೆ ಕೇಳಿದಾಗ ರಸ್ತೆ ಅಡ್ಡಲಾಗಿ ಇತ್ತು. ಆದ್ದರಿಂದ ತೆರವುಗೊಳಿಸಲಾಗಿದೆ ಎಂದು ತಾಳ್ಮೆಯಿಂದ ಉತ್ತರಿಸುತ್ತಿದ್ದ ನಗರಸಭೆ ಆಯುಕ್ತರ ಮೇಲೆ ಯಾವ ಸೂ... ಮಕ್ಕಳು ಫ್ಲೆಕ್ಸ್ ತೆಗೆದಿದ್ದು ಅಂತೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಲು ಪ್ರಾರಂಭಿಸಿದ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ನಗರಸಭೆ ಅಧಿಕಾರಿಗಳು ಹಾಗೂ ಫ್ಲೆಕ್ಸ್ ಕಿತ್ತು ಹಾಕಿರುವ ಪೌರ ಕಾರ್ಮಿಕರನ್ನು ಸುಟ್ಟು ಹಾಕುವುದಲ್ಲದೆ ವಾರ್ಡ್‌ಗಳಿಂದ ನಮ್ಮ ಜನರನ್ನು ಕರೆಸಿ ಚಪ್ಪಲಿಯಲ್ಲಿ ಹೊಡೆಸುವುದಾಗಿ ಹೇಳಿದರಲ್ಲದೆ ಫ್ಲೆಕ್ಸ್ ಅಳವಡಿಕೆ ವಿಚಾರದಲ್ಲಿ ನಮ್ಮ ಕಡೆಯವರು ನಗರಸಭೆಯ ಅನುಮತಿ ತೆಗೆದುಕೊಂಡಿದ್ದರು. ಫ್ಲೆಕ್ಸ್‌ನ್ನು ತೆರವುಗೊಳಿಸಿದ್ದು ಏಕೆ, ನೀವು ಯಾರ್ಯಾರೋ ಮಾತುಗಳನ್ನು ಕೇಳಿಕೊಂಡು ಅಧಿಕಾರ ನಡೆಸುತ್ತಿದ್ದೀಯಾ ಎಂದು ಬೆದರಿಕೆ ಹಾಕಿದ ರಾಜೀವ್ ಗೌಡರಿಗೆ ನಿಮ್ಮ ಕಡೆಯವರು ನಗರಸಭೆಯಿಂದ ಯಾವುದೇ ಅನುಮತಿ ತೆಗೆದುಕೊಂಡಿಲ್ಲ, ರಸ್ತೆ ಮಧ್ಯದಲ್ಲಿದ್ದ ಫ್ಲೆಕ್ಸ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರಿಂದ ಫ್ಲೆಕ್ಸ್‌ನ್ನು ತೆಗೆದು ನಗರಸಭೆಯ ಆವರಣದಲ್ಲಿಯೇ ಇಡಲಾಗಿದೆ. ನಿಮ್ಮವರಿಗೆ ಹೇಳಿ ತೆಗೆದುಕೊಂಡು ಹೋಗುವಂತೆ ಹೇಳಿದಕ್ಕೆ ಕೆಂಡಮಂಡಲನಾದ ರಾಜೀವ್‌ಗೌಡ ಅವಾಚ್ಯ ಶಬ್ದಗಳಿಂದ ಬೈದು ಧಮ್ಕಿ ಹಾಕುತ್ತಾರೆ.


ಶಿಡ್ಲಘಟ್ಟ ಶಾಸಕ ಮೇಲೂರು ರವಿಕುಮಾರ್


ರಾಜೀವ್‌ಗೌಡನನ್ನು ಬಂಧಿಸಿರುವ ಪೊಲೀಸರು

## ತಾಳ್ಮೆ ಕಳೆದುಕೊಂಡ ರಾಜೀವ್ ಗೌಡ

ಮುಂದುವರೆಯುತ್ತಾ ಶಿಡ್ಲಘಟ್ಟ ಶಾಸಕ ರವಿಕುಮಾರ್ ವಿರುದ್ಧ ತುಚ್ಛವಾಗಿ ಮಾತನಾಡುವುದಲ್ಲದೆ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ, ನಾನು ಡಿ.ಕೆ. ಶಿವಕುಮಾರ್‌ರವರ ಪರಮಾಪ್ತ. ಶಿಡ್ಲಘಟ್ಟದಲ್ಲಿ ಜೆಡಿಎಸ್ ಶಾಸಕರಿದ್ದರೂ ಇಲ್ಲಿ ನನ್ನದೇ ಆಡಳಿತ ಅಂತೇಳಿಕೊಂಡು ಅಧಿಕಾರಿಗಳಿಗೆ ಬೆದರಿಕೆ ಹಾಕುವ ಮಟ್ಟಕ್ಕೆ ಬಂದಿದ್ದಾರೆ. ಇಲ್ಲಿ ನಾನು ಒಬ್ಬ ಮಹಿಳಾ ಅಧಿಕಾರಿಯ ಜೊತೆ ಮಾತನಾಡುತ್ತಿದ್ದೇನೆಂಬ ಪರಿಜ್ಞಾನವು ಇಲ್ಲದೆ, ಕೀಳು ಮಟ್ಟದ ಭಾಷೆಯಲ್ಲಿ ನಿಂದಿಸುತ್ತಿದ್ದರೂ ಎಲ್ಲಿಯೂ ತಾಳ್ಮೆ ಕಳೆದುಕೊಳ್ಳದ ಮಹಿಳಾ ಆಯುಕ್ತೆ ಸಂಯಮದಿಂದಲೇ ಉತ್ತರಿಸುತ್ತಿದ್ದ ಮೊಬೈಲ್‌ನ ಆಡಿಯೋ ಬಹಿರಂಗವಾಗುತ್ತಿದ್ದಂತೆ ಸಾರ್ವಜನಿಕರು ಹಾಗೂ ಪೌರ ಕಾರ್ಮಿಕರು ರಾಜೀವ್ ಗೌಡರ ವಿರುದ್ಧ ತಿರುಗಿ ಬಿದ್ದಿದ್ದಾರೆ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದೆ ಅಂತೇಳಿ ಅಧಿಕಾರದ ಮದದಿಂದ ಒಬ್ಬ ಮಹಿಳಾ ಆಯುಕ್ತೆ ಎನ್ನುವುದನ್ನು ನೋಡದೆ ಅವಾಚ್ಯ ಶಬ್ದ ಬಳಕೆ, ಬೆದರಿಕೆ ಹಾಕಿದ್ದು ಅಲ್ಲದೆ ಸ್ಥಳೀಯ ಶಾಸಕ ಬಿ.ಎನ್. ರವಿಕುಮಾರ್ ಅವರ ಬಗ್ಗೆಯೂ ಅವಾಚ್ಯ ಶಬ್ದ ಬಳಕೆ ಮಾಡಿ ತನ್ನ ದರ್ಪವನ್ನು ಮೆರೆದಿರುವುದು ಇಡೀ ರಾಜ್ಯದ ಜನರು ತೀವ್ರವಾಗಿ ಖಂಡಿಸಿದ್ದಾರೆ.

ನಗರಸಭೆ ಆಯುಕ್ತೆ ಹಾಗೂ ನಗರಸಭೆಯ ಕಾರ್ಮಿಕರ ವಿರುದ್ಧ ಅಸಭ್ಯವಾಗಿ ನಿಂದಿಸಿ ಮಾತನಾಡಿರುವ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡರ ವಿರುದ್ಧ ಕಾನೂನು ಕ್ರಮ ಜರುಗಿಸುವವರೆಗೂ ನಗರದ ವ್ಯಾಪ್ತಿಯಲ್ಲಿ ಯಾವುದೇ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸುವುದಿಲ್ಲವೆಂದು ಪೌರಸೇವಾ ನೌಕರರು ಮುಷ್ಕರ ಕೈಗೊಂಡಿದ್ದು, ಇದಕ್ಕೆ ಬೆಂಬಲವಾಗಿ ಚಿಂತಾಮಣಿ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಹಾಗೂ ದೊಡ್ಡಬಳ್ಳಾಪುರ ನಗರಸಭೆಯ ಸಿಬ್ಬಂದಿಯೂ ಸಾಥ್ ನೀಡಿದ್ದಾರೆ. ಜಿಲ್ಲೆಯಾದ್ಯಂತ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡರ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಪೌರಾಯುಕ್ತೆ ಅಮೃತಾಗೌಡರವರು ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ರಾಜೀವ್‌ಗೌಡರ ವಿರುದ್ಧ ದೂರು ನೀಡಿದ್ದಾರೆ. ಆಯುಕ್ತೆ ಹಾಗೂ ಪೌರ ಕಾರ್ಮಿಕರ ವಿರುದ್ಧ ಅಸಭ್ಯ ಪದ ಬಳಕೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದನ್ನು ಖಂಡಿಸಿ ಶಿಡ್ಲಘಟ್ಟ ಸೇರಿದಂತೆ ರಾಜ್ಯದ 36 ಕಡೆ ಪೌರ ಸೇವಾ ನೌಕರರ ಸಂಘದ ವತಿಯಿಂದ ರಾಜೀವ್‌ಗೌಡರ ವಿರುದ್ಧ ದೂರು ನೀಡಿರುತ್ತಾರೆ. ಇದೇ ಸಂದರ್ಭದಲ್ಲಿ ಪೌರಾಯುಕ್ತೆ ಅಮೃತಾ ಗೌಡರವರು ಮಾತನಾಡಿ ಈ ಹಿಂದೆ ಸಿಎಂ ಸಿದ್ದರಾಮಯ್ಯವರ ಕಾರ್ಯಕ್ರಮದ ಅಂಗವಾಗಿ ಇವೆಂಟ್ ಮ್ಯಾನೇಜ್‌ಮೆಂಟ್‌ನವರು ನಗರದ ರೈಲ್ವೆ ಬ್ರಿಜ್ ಮತ್ತು ಸಿಎಂಸಿ ಹೆಬ್ಬಾಗಿಲ ಬಳಿ ಬ್ಯಾನರ್‌ಗಳನ್ನು ಅಳವಡಿಸಲು ಕೋರಿದ್ದರು. ಫೋಟೋ ಕಾಲ್ ಪ್ರಕಾರ ಅವರು ಕೇಳಿದ ಸ್ಥಳಗಳನ್ನು ಬಿಟ್ಟುಕೊಟ್ಟಿದ್ದು ಈ ಮೊದಲೇ ಕಟ್ಟಿದ್ದ ರಾಜೀವ್‌ಗೌಡರ ಬ್ಯಾನರ್‌ಗಳನ್ನು ತೆಗೆಸಿ ಅವರಿಗೆ ಅವಕಾಶ ಮಾಡಿಕೊಟ್ಟಾಗ ನನ್ನ ಮೇಲೆ ರಾಜೀವ್‌ಗೌಡ ಮತ್ತು ಅವರ ಬೆಂಬಲಿಗರು ಜಗಳ ಮಾಡಿ ಬೆದರಿಕೆ ಹಾಕಿದರು. ಈಗ ಮತ್ತೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುವುದು ನನ್ನ ಮನಸ್ಸಿಗೆ ತುಂಬಾ ನೋವಾಗುತ್ತಿದೆ ಎಂದು ಬಿಕ್ಕಿ ಬಿಕ್ಕಿ ಅತ್ತು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆ.

ಪೌರಯುಕ್ತೆ ಅಮೃತಾ ಗೌಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ವಿಚಾರವನ್ನು ರಾಜ್ಯ ಮಹಿಳಾ ಆಯೋಗವು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆರವರಿಗೆ ಆಯೋಗದ ಕಾರ್ಯದರ್ಶಿಗಳು ನಿರ್ದೇಶನ ನೀಡಿದ್ದಾರೆ. ಪೌರಾಯುಕ್ತೆ ಅಮೃತಾ ಗೌಡರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಹಾಕಿರುವ ರಾಜೀವ್ ಗೌಡರ ವಿರುದ್ಧ ಕ್ರಮ ಜರುಗಿಸುವಂತೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿರವರನ್ನು ಒತ್ತಾಯಿಸಿರುವುದಲ್ಲದೆ ಶಾಸಕ ಮೇಲೂರು ರವಿಕುಮಾರ್‌ರವರು ಮಾತನಾಡಿ ರಾಜೀವ್‌ಗೌಡ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ತಮ್ಮ ಪರವಾಗಿದ್ದಾರೆಂದು ದುರಂಹಕಾರದಿಂದ ಕ್ಷೇತ್ರದಲ್ಲಿ ಗೂಂಡಾ ರೀತಿ ವರ್ತಿಸುತ್ತಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿರುವುದಾಗಿ ತಿಳಿಸಿದರು. ಹಲವು ಕ್ರಮಗಳಿಂದ ರಾಜೀವ್ ಗೌಡರಿಗೆ ಈ ಪರಿಸ್ಥಿಥಿ ಬಂದಿದರೆ. ಇದು ಶಾಶ್ವತವಲ್ಲ ಕತ್ತಲು ಕಳೆದು ಬೆಳಕು ಬಂದೇ ಬರುತ್ತದೆ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿ ಹೋಗುವುದೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಹಾಗೂ ರಾಜೀವ್ ಗೌಡರ ಪತ್ನಿ ಸಹನಾ ಭಾವುಕರಾಗಿ ನುಡಿದಿದ್ದಾರೆ.


ರಾಜೀವ್‌ಗೌಡನ ವಿರುದ್ಧ ದೂರು ನೀಡುತ್ತಿರುವ ನಗರಸಭೆ ಆಯುಕ್ತೆ


ಕೇರಳದ ವಾಜಿಕಡವು ಹೋಟೆಲ್‌ನಲ್ಲಿ ತಂಗಿದ್ದ ರಾಜೀವ್‌ಗೌಡ



ಕೇರಳದಲ್ಲಿ ಪೊಲೀಸರು ವಶಕ್ಕೆ ಪಡೆದ ಕಾರು


ಲೋಕಸಭೆಯ ವಿರೋಧ ಪಕ್ಷದ ನಾಯಕರ ಜೊತೆ ರಾಜೀವ್


ಉಪಮುಖ್ಯಮಂತ್ರಿಗಳ ಜೊತೆ ರಾಜೀವ್ ಗೌಡ

## ರಾಜೀವ್‌ಗೌಡರ ಬಂಧನ - ಬಿಡುಗಡೆ

ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಯಲ್ಲಿ ರಾಜೀವ್‌ಗೌಡರ ವಿರುದ್ಧ ದೂರು ದಾಖಲಾದ ಹಿನ್ನೆಲೆಯಲ್ಲಿ ಈ ಬಗ್ಗೆ ಠಾಣಾಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದು ಎಸ್ಪಿ ಕುಶಾಲ್ ಚೌಕ್ಸೆರವರು ಶಿಡ್ಲಘಟ್ಟಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡರ ಮೇಲೆ ಸೂಕ್ತ ಕ್ರಮಕ್ಕೆ ಆದೇಶಿಸಿದರು. ಅದರಂತೆ ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಎಸ್ಪಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಮುರುಳಿಧರರವರ ಮಾರ್ಗದರ್ಶನದಲ್ಲಿ ಪಿಐ ಆನಂದ್‌ರವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿದ್ದು, ಈ ವಿಷಯ ತಿಳಿಯುತ್ತಿದ್ದಂತೆ ಬಂಧನದ ಭೀತಿಯಿಂದ ಊರು ಬಿಟ್ಟು ತಲೆಮರೆಸಿಕೊಂಡಿದ್ದ ರಾಜೀವ್‌ಗೌಡನನ್ನು ಹದಿನಾಲ್ಕು ದಿನಗಳ ನಂತರ ಆತನ ಮೊಬೈಲ್ ಕರೆಗಳು, ವಾಹನ ಸಂಚಾರ, ಇತರೆ ಚಟುವಟಿಕೆ, ಚಲನವಲನಗಳ ಆಧಾರದ ಮೇಲೆ ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಪ್ರಾರಂಭದಲ್ಲಿ ಬೆಂಗಳೂರು, ಮಂಗಳೂರು ಸೇರಿದಂತೆ ಇನ್ನಿತರ ರಾಜ್ಯ, ಜಿಲ್ಲೆಗಳಲ್ಲಿ ತಲೆಮರೆಸಿಕೊಂಡಿದ್ದ ರಾಜೀವ್‌ಗೌಡರವರು ಕೇರಳದ ತನ್ನ ಸ್ನೇಹಿತ ಫರ್ನೀಚರ್ ಉದ್ಯಮಿ ಮೈಕಲ್ ಜೋಸೆಫ್ ರೇಗೋ ಎನ್ನುವವರ ಜೊತೆ ಮುಲ್ಲಾಪುರಂ ಜಿಲ್ಲೆ, ವಾಜಿಕಡವು ಹೋಟೆಲ್ ಸಮೀಪ ಕಾರಿನಲ್ಲಿದ್ದ ಇಬ್ಬರನ್ನು ವಶಕ್ಕೆ ಪಡೆದ ಪೊಲೀಸರು ಶಿಡ್ಲಘಟ್ಟಕ್ಕೆ ಕರೆದುಕೊಂಡು ಬಂದು ಜನವರಿ 27ರಂದು ಮಂಗಳವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ನಗರದ ಜೆಎಂಎಫ್‌ಸಿ ಕೋರ್ಟ್ ರಾಜೀವ್ ಗೌಡ ಮತ್ತು ಮೈಕಲ್ ಜೋಸೆಫ್ ರೇಗೋಗೆ ಸಹ ಷರತ್ತುಬದ್ಧ ಜಾಮೀನು ನೀಡಿದೆ. ಚಿಂತಾಮಣಿ ಸಬ್ ಜೈಲಿನಿಂದ ಹೊರ ಬಂದ ರಾಜೀವ್ ಗೌಡ ಮಾತನಾಡುತ್ತಾ ಪೌರಾಯುಕ್ತೆಯನ್ನು ನಿಂದಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷಮಾಪಣೆ ಕೇಳಿದರೂ ಸಹ ಅದನ್ನು ಪರಿಗಣಿಸದೆ ಸಣ್ಣ ವಿಷಯವನ್ನು ದೊಡ್ಡದು ಮಾಡಿ ನನ್ನ ವಿರುದ್ಧ ರಾಜಕೀಯ ಪಿತೂರಿ ಮಾಡಿದವರ ಹೊಟ್ಟೆ ತಣ್ಣಗಿರಲಿ ಮತ್ತು ಅವರ ಹೆಂಡತಿ, ಮಕ್ಕಳು ಚೆನ್ನಾಗಿರಲೆಂದು ಹಾರೈಸುವ ಮೂಲಕ ವ್ಯಂಗ್ಯವಾಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.



ರಾಜೀವ್‌ಗೆ ಸಹಾಯ ಮಾಡಿದ ಮೈಕಲ್ ಜೋಸೆಫ್ ರೇಗೋ


ಕಲ್ಟ್ ಸಿನಿಮಾದ ಪ್ರಚಾರ ಫ್ಲೆಕ್ಸ್


ಬಾಗೇಪಲ್ಲಿ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಪೌರ ಕಾರ್ಮಿಕರಿಂದ ಮನವಿ


ಸಿಂಹ ಸೇನಾ ಪದಾಧಿಕಾರಿಗಳು ಪೌರಾಯುಕ್ತೆಗೆ ಭಾಗಿನ ನೀಡಿ ಹೋರಾಟಕ್ಕೆ ಬೆಂಬಲ ನೀಡಿದರು


ಶಿಡ್ಲಘಟ್ಟ ಪೌರ ಕಾರ್ಮಿಕರು ಮತ್ತು ಸಾರ್ವಜನಿಕರು ಹೋರಾಟ ನಡೆಸುತ್ತಿರುವುದು


ಪೌರಾಯುಕ್ತೆ ಮತ್ತು ನಗರಸಭೆ ಅಧಿಕಾರಿಗಳು ಹೋರಾಟದಲ್ಲಿ ಭಾಗವಹಿಸಿರುವುದು


ಚಿಂತಾಮಣಿ ನಗರಸಭೆಯ ಪೌರ ಕಾರ್ಮಿಕರಿಂದ ಪ್ರತಿಭಟನೆ

6 ☞

ರವೀಶ್ ಹಾಗೂ ಕುಟುಂಬದವರಿಗೆ ಹೇಳಿದ್ದರು. ಹೀಗಾಗಿ, ಮದುವೆ ತಯಾರಿ ಮಾಡಿಕೊಂಡಿದ್ದರು. ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಿರುವಾಗಲೇ ದರ್ಶನ್ ಎಂಬಾತ **9663922973** ನಂಬರಿನಿಂದ ಕರೆ ಮಾಡಿ ನಯನಳನ್ನು ನಾನು ಪ್ರೀತಿಸುತಿದ್ದೇನೆ ಆದ್ದರಿಂದ ಆಕೆಯನ್ನು ಮದುವೆಯಾಗದಂತೆ ಜೀವಬೆದರಿಕೆ ಹಾಕಿದ್ದ, ನಂತರ ಮತ್ತೊಂದು **7619225549** ಮೊಬೈಲ್ ನಂಬರಿನಿಂದ ಬೆದರಿಕೆಯ ವಾಟ್ಸಾಪ್ ಮೆಸೇಜ್‌ಗಳು ಬಂದಿದ್ದವು, ಮದುವೆ ಕಾರ್ಯದಲ್ಲಿ ರವೀಶ್ ಗಮನಿಸಿರಲಿಲ್ಲ. ಹಾಗಾಗಿ ಮದುವೆ ಆಗಿಬಿಡುತ್ತದೆ ಎಂಬ ಕಾರಣಕ್ಕೆ ದರ್ಶನ್ ತನ್ನ ಸಂಗಡಿಗರನ್ನು ಕಾರಿನಲ್ಲಿ ಕೊಳ್ಳೇಗಾಲಕ್ಕೆ ಕರೆತಂದು ಕೊಲೆ ಪ್ರಯತ್ನಕ್ಕೆ ಕೈಹಾಕಿದ್ದಾನೆ. ಅದಕ್ಕಾಗಿ ಸ್ಕೆಚ್ ಹಾಕಿದ ದರ್ಶನ್ ಈ ದುಷ್ಕೃತ್ಯಕ್ಕೆ ತನ್ನ ಸ್ನೇಹಿತರಾದ ಅಂಕಿತ್, ಮಿಥುನ್, ಧನುಷ್ ಹಾಗೂ ಗೋಕುಲ್‌ರನ್ನು ಬಳಸಿಕೊಂಡಿದ್ದಾನೆ. ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿರುವ ಮಿಥುನ್ ಅದೇ ಹೊರಮಾವು ಅಗರದವರು ತಂದೆ ಬಸವರಾಜು ಆಟೋ ಚಾಲಕ.

ಆರೋಪಿ ದರ್ಶನ್ ಸ್ನೇಹಿತ ಅಂಕಿತ್, ಈತನ ಸ್ನೇಹಿತ ಸುನಿಲ್ ಈತ ಮುನಿವೀರಪ್ಪ ಎಂಬುವವರ ಕಾರನ್ನು ಅಡವಿಟ್ಟುಕೊಂಡಿದ್ದ. ಈ ಬಗ್ಗೆ ತಿಳಿದಿದ್ದ ದರ್ಶನ್ ದೇವಸ್ಥಾನಕ್ಕೆ ಹೋಗಿ ಬರುವುದಕ್ಕೆ ಸ್ನೇಹಿತ ಅಂಕಿತ್‌ನ ಮೂಲಕ ಸುನಿಲ್ ಅಡವಿಟ್ಟುಕೊಂಡಿದ್ದ ಕಾರನ್ನು 2000 ರೂ.ಗೆ ಬಾಡಿಗೆಗೆ ಪಡೆದಿದ್ದ. ಆದರೆ ಈತ ಈ ದುಷ್ಕೃತ್ಯಕ್ಕೆ ಹೋಗುತ್ತಿದ್ದಾನೆ ಎಂಬುದನ್ನು ಅರಿಯದ ಅಂಕಿತ್ ಸ್ನೇಹಿತ ದರ್ಶನ್‌ಗೆ ಬಾಡಿಗೆಗೆ ಕಾರು ಕೊಡಿಸಿದ್ದ.

ಜ.28 ಅದೇ ಕಾರಿನಲ್ಲಿ ಬೆಂಗಳೂರು ಬಿಟ್ಟು ಕೊಳ್ಳೇಗಾಲಕ್ಕೆ ಬಂದಿದ್ದ. ಬರುವಾಗ ತನ್ನ ಅಪ್ರಾಪ್ತ ಸ್ನೇಹಿತರಾದ ಮಿಥುನ್, ಧನುಷ್ ಹಾಗೂ ಗೋಕುಲ್



ರವೀಶನ ಮನೆ

ರವರನ್ನು ಕರೆತಂದಿದ್ದನು. ಕೊಳ್ಳೇಗಾಲಕ್ಕೆ ಕಾರಿನಲ್ಲಿ ಬಂದಿಳಿದ ಈ ನಾಲ್ವರು ಪಟ್ಟಣದ ಬಸ್ ನಿಲ್ದಾಣ ಬಳಿ ಇರುವ ಖಾಸಗಿ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು. ಮಾರನೆಯ ದಿನ ನಾಲ್ವರು ಬೆಳಿಗ್ಗೆಯಿಂದ ಸಂಜೆಯವರೆಗೆ ಪಟ್ಟಣದಲ್ಲಿ ಸುತ್ತಾಡಿ ಸ್ಕೆಚ್ ಹಾಕಿದ್ದಾರೆ.

ಇದೇ ಜನವರಿ 29 ಹಾಗೂ 30ರಂದು ಪಟ್ಟಣದ ಶ್ರೀ ವೆಂಕಟೇಶ್ವರ ಮಹಲ್‌ನಲ್ಲಿ ಮದುವೆ ನಿಗಧಿಯಾಗಿದ್ದರಿಂದ ದಿನಾಂಕ 29-01-2026ರಂದು ಗುರುವಾರ ಸಂಜೆ 06:45 ಗಂಟೆ ಸಮಯದಲ್ಲಿ ಮದುಮಗ ರವೀಶ್ ಕುಣಗಳ್ಳಿಯಲ್ಲಿರುವ ತನ್ನ ಮನೆಯಿಂದ ಕಲ್ಯಾಣ ಮಂಟಪಕ್ಕೆ ಬಿಳಿ ಬಣ್ಣದ ಸ್ವಿಫ್ಟ್ ಡಿಜೈರ್ ಕಾರಿನಲ್ಲಿ ಹೊರಟಿದ್ದ ಅದಕ್ಕಾಗಿ ಟಿಸಿ ಹುಂಡಿ ಗ್ರಾಮದ ಶಿವು ಎಂಬಾತ ಕಾರು ಚಾಲನೆ ಮಾಡುತ್ತಿದ್ದ. ಕಾರಿನ ಮುಂದಿ ಸೀಟ್‌ನಲ್ಲಿ ಕುಳಿತಿದ್ದ ಮದುಮಗ ರವೀಶ ನಾಳಿನ ಮದುವೆ ಸಂಭ್ರಮದಲ್ಲಿ ಮೈಮರೆತಿದ್ದ. ಈತ ಜೊತೆಗೆ ಕಾರಿನಲ್ಲಿ ಅಕ್ಕ ಮಹದೇವಮ್ಮ ಹಾಗೂ ಕುಟುಂಬದ ಇತರರು ಕುಳಿತಿದ್ದರು. ಕಾರು ಕೊಳ್ಳೇಗಾಲ ಪಟ್ಟಣದೊಳಗೆ ಪ್ರವೇಶಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗುತ್ತಾ ಎಂಜಿಎಸ್‌ವಿ ಕಾಲೇಜು ಮುಂಭಾಗದ ಪ್ರಸಾದ್ ಸ್ಕ್ಯಾನಿಂಗ್ ಸೆಂಟರ್ ಬಳಿ ಬರುತ್ತಿದ್ದಂತೆ ಕೆಂಪು ಕಾರಿನಲ್ಲಿ ಬಂದ ಅಪರಿತರು ಕಾರಿನ ಮುಂದಿ ಸೀಟ್‌ನಲ್ಲಿ ಕುಳಿತಿದ್ದ ರವೀಶ್ ತನ್ನ ಎಡಗೈಯನ್ನು ಕಾರಿನ ಎಡಭಾಗದ ಕಿಟಕಿ ಮೇಲೆ ಇಟ್ಟುಕೊಂಡಿದ್ದನು. ಇದನ್ನು ಗಮನಿಸಿರುವ ದುಷ್ಕರ್ಮಿಗಳು ಈತನ ಎಡ ತೋಳಿಗೆ ಚಾಕುವಿನಿಂದ ಚುಚ್ಚಿ ಪರಾರಿಯಾಗಿದ್ದಾರೆ. ಕೂಡಲೇ ಕುಟುಂಬಸ್ಥರು ರವೀಶ್‌ನನ್ನು ಚಿಕಿತ್ಸೆಗಾಗಿ ಪಟ್ಟಣದ ಉಪವಿಭಾಗ ಆಸ್ಪತ್ರೆಗೆ ದಾಖಲಿಸಿದ್ದಾರೆ. ಇತ್ತ ಕೊಳ್ಳೇಗಾಲದಲ್ಲಿ ಕಲ್ಯಾಣ ಮಂಟಪಕ್ಕೆ ತೆರಳುತಿದ್ದ ಮದುಮಗನಿಗೆ ಚಾಕು ಇರಿದು ಕೊಲ್ಲುವ ಯತ್ನ ನಡೆದಿದೆ ಎಂಬ ವಿಚಾರ ಕೆಲವೇ



ನಿಮಿಷದಲ್ಲಿ ಕಾಡ್ಗಿಚ್ಚಿನಂತೆ ಹರಡಿ ಪ್ರಕ್ಷುಬ್ದ ವಾತಾವರಣ ಉಂಟಾಗಿದೆ. ವಿಷಯ ತಿಳಿದ ಕೂಡಲೇ ಜಾಗ್ರತರಾದ ಕೊಳ್ಳೇಗಾಲ ಪಟ್ಟಣ ಠಾಣೆಯ ಪಿಎಸ್‌ಐ ಕು॥ ಬಿ.ವಿ. ವರ್ಷ ಹಾಗೂ ಸಿಬ್ಬಂದಿ ಸಿಸಿಟಿವಿಗಳ ಮೇಲೆ ನಿಗಾ ಇರಿಸಿದ್ದಾರೆ. ಈ ವೇಳೆಗಾಗಲೇ ಕಾರು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿಯ ಟೋಲ್‌ಗೇಟ್ ಬಿಟ್ಟು ಹೋಗುತ್ತಿರುವುದು ಸೆರೆಯಾಗಿದೆ. ನಂತರ ಕಾರು ಮಳವಳ್ಳಿ ದಾಟಿ ಕನಕಪುರ ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಎಲ್ಲರ ಮೊಬೈಲ್‌ಗಳು ಸ್ವಿಚ್ ಆಫ್ ಆಗಿವೆ. ಈ ನಡುವೆ ಮಾರ್ಗ ಮಧ್ಯೆ ನಾಯಿ ಅಡ್ಡ ಬಂದು ಕಾರು ಅಪಘಾತವಾಗಿದೆ. ಕೂಡಲೇ ಕಾರನ್ನು ಹಲಗೂರು ವರ್ಕ್ ಷಾಪ್ ನಲ್ಲಿ ನಿಲ್ಲಿಸಿ ಬೆಂಗಳೂರು ಬಸ್ ಏರಿ ಎಲ್ಲರೂ ಮನೆ ಸೇರಿಕೊಂಡಿದ್ದಾರೆ.

ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ರವೀಶ್ ಪೊಲೀಸರ ಮುಂದೆ ಮದುವೆಯನ್ನು ನಿಲ್ಲಿಸುವ ಉದ್ದೇಶದಿಂದ ಹಾಗೂ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಅಪರಿಚಿತ ಕೆಂಪು ಬಣ್ಣದ ಕಾರಿನಲ್ಲಿದ್ದ ಅಪರಿಚಿತ ಅಸಾಮಿಗಳು ನನಗೆ ಚಾಕು ಚುಚ್ಚಿ ರಕ್ತಗಾಯಗೊಳಿಸಿದ್ದು, ಅವರ ಮೇಲೆ ಕಾನೂನುರಿತ್ಯಾ ಕ್ರಮ ತೆಗೆದುಕೊಳ್ಳಬೇಕೆಂದು ದೂರು ನೀಡಿದ್ದರು. ಹಾಗೆಯೇ ರವೀಶ ನೀಡಿದ್ದ ದೂರಿನಲ್ಲಿ ದರ್ಶನ್ ಎಂಬ ಯುವಕ **9663922973** ಈ ಮೊಬೈಲ್ ನಂಬರ್‌ನಿಂದ ಕರೆ ಮಾಡಿ ಬೆದರಿಕೆ ಹಾಕಿದ್ದ ಬಗ್ಗೆಯೂ ಕ್ಲೂ ಕೂಡ ಕೊಟ್ಟಿದ್ದ. ರವೀಶ್ ನೀಡಿದ ದೂರಿನ ಮೇರೆಗೆ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ಠಾಣಾ ಮೊ.ನಂ:**08/2026** ಕಲಂ: **118(1), 109, 351 (2)(3)** ಬಿಎನ್‌ಎಸ್ ರಿತ್ಯಾ ದೂರು ದಾಖಲು ಮಾಡಿಕೊಂಡು ತನಿಖೆಗೆ ಮುಂದಾಗಿದ್ದರು.

ಅಲ್ಲಿಗೆ ಸಪ್ತಪದಿ ತುಳಿಯಬೇಕಿದ್ದ ಕುಣಗಳ್ಳಿ ಗ್ರಾಮದ ರವೀಶ ಹೊಸ ಅಣಗಳ್ಳಿಯ ನಯನರ ಮದುವೆ ಮುರಿದು ಬಿದ್ದಿತ್ತು. ಅಂದು ಆಸ್ಪತ್ರೆ ಸೇರಿದ್ದ ವರ ರವೀಶ್ ಘಟನೆಯಿಂದ ಗಾಬರಿಗೊಂಡಿದ್ದ ಪೊಲೀಸ್ ಠಾಣೆಗೆ ದೂರು ನೀಡಿ ವಧು ನಯನಳ ಪ್ರಿಯಕರನೇ ತನ್ನ ಹತ್ಯೆಗೆ ಯತ್ನಿಸಿರುವ ಬಗ್ಗೆ ಆರೋಪಿಸಿದ್ದ. ಪೊಲೀಸರೊಂದಿಗೆ ನನಗೆ ಜೀವ ಭಯವಿದೆ. ನನಗೆ ಮದುವೆ ಬೇಡ, ನನ್ನನ್ನು ಬೇರೆಡೆಗೆ ಕಳುಹಿಸಿಕೊಡಿ ಎಂದು ಹಠ ಹಿಡಿದಿದ್ದಾನೆ. ಅತ್ತ ಯುವತಿ ನಾನು ರವೀಶ್‌ನನ್ನೇ ಮದುವೆಯಾಗುತ್ತೇನೆ ಎಂದು ಹೇಳುತ್ತಿದ್ದಾರೆ. ಅದರಂತೆ ನಾಟಕೀಯ ತಿರುವು ಪಡೆದುಕೊಂಡ ಈ ಮದುವೆ ವಿಚಾರಕ್ಕೆ ಸಂಬಂಧಿಸಿದಂತೆ ವಧು ನಯನ ಆಸ್ಪತ್ರೆಗೆ ಬಂದು ನನ್ನನ್ನು ಮದುವೆಯಾಗುವಂತೆ ವಿನಯದಿಂದಲೆ ರವೀಶನನ್ನು ಬೇಡಿಕೊಂಡಿದ್ದಳು. ನಯನಳ ವಿನಯತೆ ಮನವಿಯನ್ನ ತಿರಸ್ಕರಿದ್ದ ರವೀಶ ನಯನಳ ಜೊತೆ ಮದುವೆಗೆ ಬ್ರೇಕ್ ಹಾಕಿದ್ದ.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗುತ್ತಿದ್ದಂತೆ ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ಕು॥ ಬಿ.ವಿ. ವರ್ಷರವರು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯ ನೇತೃತ್ವದಲ್ಲಿ ಆರೋಪಿಗಳ ಪ'ತ್ತೆ'ಗೆ ತ'ಂಡ' ರ'ಚಿಸಿಕೊಂಡ'ು ಕಾರ್ಯಾಚರಣೆಗಿಳಿಯುತ್ತಾರೆ. ಈ ತಂಡ ಆರೋಪಿಗಳ ಪತ್ತೆಕಾರ್ಯದಲ್ಲಿ ತೊಡಗಿದ್ದಾಗ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕಾರು ಮಾರ್ಗಮಧ್ಯ ಅಪಘಾತಕ್ಕೀಡಾಗಿ ಮಳವಳ್ಳಿ ತಾಲೂಕಿನ ಹಲಗೂರಿನ ಗ್ಯಾರೇಜ್‌ನಲ್ಲಿ ಕಾರು ದುರಸ್ಥಿಗೆ ಬಿಟ್ಟಿರುವ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಕಾರಿಗೆ ಜಿಪಿಆರ್ ಅಳವಡಿಸಿದ್ದರಿಂದ ಕಾರಿನ ಲೋಕೇಷನ್ ಪತ್ತೆಹಚ್ಚಿದ್ದ ಕೊಳ್ಳೇಗಾಲ ಪೊಲೀಸರು ಅಷ್ಟರಲ್ಲಾಗಲೇ ಹಲಗೂರು ಪೊಲೀಸರಿಗೆ ಮಾಹಿತಿ ನೀಡಿ ಕಾರು ರಿಪೇರಿಗೆ ಬರುವವರನ್ನು ಹಿಡಿದು ಕೂರಿಸುವಂತೆ ಮಾಹಿತಿ ರವಾನಿಸುತ್ತಾರೆ. ಇದಕ್ಕಾಗಿ ಜಿಲ್ಲಾ ನಿಸ್ತಂತು ವಿಭಾಗದ ಪಿಐ ಮತ್ತು ಸಿಬ್ಬಂದಿಗಳು ಹಾಗೂ ಜಿಲ್ಲಾ ಸಿಡಿಆರ್ ತಾಂತ್ರಿಕ ವಿಭಾಗದ ಸಿಬ್ಬಂದಿಗಳ ತಂಡವನ್ನು ರಚಿಸಿದ್ದು ಎಲ್ಲಾ ಆಯಾಮಗಳಿಂದ ತನಿಖೆ ನಡೆಸಿ ಆರೋಪಿಗಳ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಲಾಗಿತ್ತು.

ಮಾರನೆಯ ದಿನ ಬೆಳಿಗ್ಗೆ ದರ್ಶನ್ ಕಾರು ಬಾಡಿಗೆಗೆ ಕೊಡಿಸಿದ್ದ ಅಂಕಿತ್ ನನ್ನು ಹಲಗೂರಿನಲ್ಲಿ ಕಾರು ಕೆಟ್ಟು ನಿಂತಿದೆ ರಿಪೇರಿ ಮಾಡಿಸಿಕೊಂಡು ಬಾ ಎಂದು ಕಳುಹಿಸುತ್ತಾನೆ. ಆದರೆ ಹಲಗೂರು ಪೊಲೀಸರು ವರ್ಕ್ ಷಾಪ್‌ನವರಿಗೆ ಘಟನೆಯ ಬಗ್ಗೆ ಅದಾಗಲೇ ಮಾಹಿತಿ ನೀಡಿದ್ದರಿಂದ ಅಂಕಿತ್‌ನ ಕೈಗೆ ಕಾರು ಕೊಡಲು ನಿರಾಕರಿಸುತ್ತಾರೆ. ಹಾಗೂ ಕಾರು ಬಿಟ್ಟಿರುವವರನ್ನು ಅಥವಾ ಓನರ್‌ನನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದಾರೆ. ಕೂಡಲೇ ಅಂಕಿತ್ ತನ್ನ ಮೊಬೈಲ್‌ನಿಂದ ದರ್ಶನ್‌ಗೆ ಕರೆ ಮಾಡಿದ್ದಾನೆ. ಗಟನೆಯಿಂದ ಭಯಗೊಂಡಿದ್ದ ದರ್ಶನ್ ಮೊಬೈಲ್ ಮನೆಯಲ್ಲಿಟ್ಟು ತನ್ನ ತಾಯಿಗೆ ಹೇಳಿ ಹೊರಗೆ ಹೋಗಿರುತ್ತಾನೆ. ಹಾಗಾಗಿ ಕರೆ ಸ್ವೀಕರಿಸುವ ದರ್ಶನ್ ತಾಯಿ ಮುನಿರತ್ನ ಆತನ ಸ್ನೇಹಿತನ ನಂಬರಿಗೆ ಕರೆ ಮಾಡಿ ಮೊದಲು ದರ್ಶನ್‌ನನ್ನು ಕಳುಹಿಸುವುದಾಗಿ ಹೇಳುತ್ತಾಳೆ. ಸ್ವಲ್ಪ ಸಮಯದ ನಂತರ ಮತ್ತೆ ಕರೆಮಾಡಿ ದರ್ಶನ್‌ನಿಂದ ವಿಡಿಯೋ ಕಾಲ್ ಮಾಡಿಸಿ ವರ್ಕ್‌ಷಾಪ್‌ನವರಿಗೆ ಮುಖ ತೋರಿಸುವುದಾಗಿ ಹೇಳಿದ್ದಾಳೆ. ಅತ್ತ ದರ್ಶನ್ ಬೇರೊಂದು ನಂಬರ್‌ನಿಂದ ವಿಡಿಯೋ ಕಾಲ್ ಮಾಡಿ ವರ್ಕ್‌ಷಾಪ್‌ನವರಿಗೆ ಅಂಕಿತ್ ಬಳಿ ಕಾರು ರಿಪೇರಿ ಮಾಡಿ ಕೊಡುವಂತೆ ಹೇಳಿದ್ದಾನೆ.

ಇದನ್ನೇ ಕಾಯ್ದು ಕುಳಿತಿದ್ದ ಪೊಲೀಸರು ದರ್ಶನ್ ವಿಡಿಯೋ ಕರೆ ಮಾಡಿದ್ದ ಮೊಬೈಲ್ ನಂಬರ್ ಲೋಕೇಶನ್‌ಗೆ ಹಾಕಿದಾಗ ಆರೋಪಿ ಇರುವ ಸ್ಥಳ ಪತ್ತೆಯಾಗಿದೆ. ಜನವರಿ 31ರಂದು ದರ್ಶನ್, ಮಿಥುನ್ ಎಂಬುವವರನ್ನು ಪೊಲೀಸರು ಬಂಧಿಸಿ ಕೊಳ್ಳೇಗಾಲ ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದಂತೆ ಅಲ್ಲೊಂದು ಸ್ಫೋಟಕ ಮಾಹಿತಿ ಹೊರಬಿದ್ದಿದೆ. ರವೀಶನ ಕೊಲೆಯತ್ನದಲ್ಲಿ ವಧು ನಯನಳೆ ಮಾಸ್ಟರ್ ಮೈಂಡ್ ಎಂಬುದು ಸಾಭೀತಾಗಿದೆ. ಪ್ರಕರಣದ ಹಿಂದಿನ ಸತ್ಯ ಬೆಳಕಿಗೆ ಬಂದಿದೆ.

ನಯನ ಬೆಂಗಳೂರಿನ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಅಲ್ಲಿ ಪರಿಚಯವಾಗಿ ನಾನು ಆಕೆಯನ್ನು ಎರಡು ವರ್ಷಗಳಿಂದಲೂ ಪ್ರೀತಿಸುತ್ತಿದ್ದು ಮದುವೆಯಾಗಬೇಕೆಂದು ತೀರ್ಮಾನ ಕೈಗೊಂಡಿದ್ದು ಈ ಮಧ್ಯದಲ್ಲಿ ರವೀಶ್ ಎಂಬುವವನ ಜತೆ ಮದುವೆಯಾಗಲು ನಿಶ್ಚಯ ಮಾಡಿ 6 ತಿಂಗಳ ಹಿಂದೆ ನಿಶ್ಚಿತಾರ್ಥ ಮಾಡಿದ್ದರೂ ಸಹ ನಮ್ಮಿಬ್ಬರು ಪ್ರೀತಿ ಮುಂದುವರಿಯುತ್ತಿದ್ದು, ಬಿಳಿಗಿರಿರಂಗನ ಬೆಟ್ಟ ಸೇರಿದಂತೆ ಪ್ರವಾಸಿ ಸ್ಥಳಗಳಲ್ಲಿ ಸುತ್ತಾಡಿದ್ದೆವು. ಮದುವೆ ಹತ್ತಿರ ಬರುತ್ತಿದ್ದಂತೆ ನನ್ನ ಮದುವೆಯನ್ನು ನಿಲ್ಲಿಸು ಎಂದು ನಯನ ನನ್ನ ಬಳಿ ಕೇಳಿಕೊಂಡಾಗ ನೀನೇ ಮದುವೆ ಆಗುವುದಿಲ್ಲ ಎಂದು ನಿಮ್ಮ ತಾಯಿಗೆ ಮತ್ತು ಪೋಷಕರಿಗೆ ಹೇಳು ಎಂದು ಕೇಳಿದಾಗ ಇಲ್ಲ ನಾನು ಮದುವೆ ಬೇಡ ಎಂದರೆ ನಮ್ಮ ಕುಟುಂಬಕ್ಕೆ ಅವಮಾನವಾಗುತ್ತದೆ. ನೀನೆ ನನ್ನ ಮದುವೆಯಾಗುವ ರವೀಶ್‌ನನ್ನು ಹೆದರಿಸು ಮದುವೆ ಬೇಡ ಎಂದು ಹೇಳಿದಾಗ ನಾವಿಬ್ಬರು ಮದುವೆಯಾಗೋಣ ಎಂದು ರವೀಶನ ಮೊಬೈಲ್ ನಂಬರ್‌ನನ್ನು ನಯನ ನನಗೆ ನೀಡಿದಳು ಎಂದು ದರ್ಶನ್ ಪೊಲೀಸ್ ತನಿಖೆಯಲ್ಲಿ ತಿಳಿಸಿದಾಗ ಜ.29 ರಂದು ನಾವು ಬೆಂಗಳೂರಿನಿಂದ ಸ್ನೇಹಿತನಿಂದ ದೇವಸ್ಥಾನಕ್ಕೆ ಹೋಗುತ್ತೇವೆಂದು ಕಾರನ್ನು ಪಡೆದು ಕೊಳ್ಳೇಗಾಲಕ್ಕೆ ಬಂದು ಕಾರಿನಲ್ಲಿ ಬರುತ್ತಿದ್ದ ರವೀಶನಿಗೆ ಚಾಕು ತಿವಿದು ಭಯ ಉಂಟು ಮಾಡುವ ರೀತಿಯಲ್ಲಿ ನಾವು ಬೆಂಗಳೂರಿಗೆ ಹೊರಟು ಹೋದೆವು ಎಂದು ದರ್ಶನ್ ವಿಚಾರಣೆ ವೇಳೆ ತಿಳಿಸಿದ್ದಾನೆ. ಪ್ರತಿ ಹಂತದಲ್ಲೂ ನಯನ ಮೊಬೈಲ್‌ನಲ್ಲಿ ಸಂಪರ್ಕ ಇದ್ದು ರವೀಶ್‌ನಿಗೆ ಚಾಕು ಹಾಕಿ ನಾವು ಹೋದ ನಂತರವೂ ನಯನ ಸಂಬಂಧಿ ಕರ ಯುವತಿಯ ಮೊಬೈಲ್‌ನಲ್ಲಿ ಪೊಲೀಸರು ಕಲ್ಯಾಣ ಮಂಟಪಕ್ಕೆ ಬಂದಿದ್ದಾರೆ. ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಇಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋಗು ಬಾ ಎಂದು ದರ್ಶನ್ ಮೊಬೈಲ್‌ಗೆ ವಾಟ್ಸಾಪ್ ಸಂದೇಶ ಕಳುಹಿರುವುದು ತನಿಖೆಯಲ್ಲಿ ಕಂಡು ಬಂದಿದೆ.

ಪ್ರಕರಣದಲ್ಲಿ ವಧು ನಯನಳ ಪಾತ್ರವಿರುವುದು ಹಾಗೂ ಕೃತ್ಯಕ್ಕೆ ಆಕೆಯೇ ಸುಪಾರಿ ನೀಡಿರುವುದು ಗೊತ್ತಾಗಿದೆ. ರವೀಶ್ ನನ್ನನ್ನು ಮದುವೆಯಾಗದಂತೆ ಏನಾದರೂ ಮಾಡಿ ಬೆದರಿಸಬೇಕೆಂದು ನಯನ ತನ್ನ ಪ್ರಿಯಕರ ದರ್ಶನ್‌ಗೆ ಸುಪಾರಿ ನೀಡಿದ್ದಳು. ಜತೆಗೆ, ಮದುವೆ ಮನೆಯಿಂದ ತನ್ನನ್ನು ಕಿಡ್ನ್ಯಾಪ್ ಮಾಡಿಕೊಂಡು ಹೋಗುವಂತೆ ಪ್ಲ್ಯಾನ್ ಕೊಟ್ಟಿದ್ದಳು ಎಂದು ಹೇಳಲಾಗಿದೆ.




ಇದೆಲ್ಲವನ್ನು ದರ್ಶನ್‌ನಿಂದ ತಿಳಿದ ಪೊಲೀಸರು, ನಂತರ ನಯನ ಹಾಗೂ ಆಕೆಯ ಪ್ರಿಯಕರನ ನಡುವೆ ನಡೆದಿದ್ದ ವಾಟ್ಸಾಪ್ ಸಂದೇಶ ಮತ್ತು ಫೋನ್ ಕರೆಗಳ ಮಾಹಿತಿ ಸಂಗ್ರಹಿಸಿದ್ದಾರೆ. ಅದರಂತೆ ಕೃತ್ಯಕ್ಕೆ ಬಳಸಿದ್ದ ಕೆಎ-03 ಎಂಝಡ್-5192 ಕಾರನ್ನು ವಶಕ್ಕೆ ಪಡೆದು ದರ್ಶನ್ ನಯನಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಅಪ್ರಾಪ್ತ ಬಾಲಕ ಮಿಥುನ್‌ನನ್ನು ಚಾಮರಾಜನಗರ ಬಾಲಮಂದಿರಕ್ಕೆ ಕಳುಹಿಸಿದ್ದು ತಲೆಮರೆಸಿಕೊಂಡಿರುವ ಉಳಿದಿಬ್ಬರು ಆರೋಪಿಗಳ ಪತ್ತೆಗೆ ಬಲೆಬೀಸಿದ್ದು ಪಿಎಸ್‌ಐ ಕು॥ ಬಿ.ವಿ. ವರ್ಷರವರು ತನಿಖೆ ಮುಂದುವರಿಸಿದ್ದಾರೆ. ಒಟ್ಟಿನಲ್ಲಿ ಐನಾತಿ ಯುವತಿಯ ಮಾಸ್ಟರ್ ಪ್ಲಾನ್ ಕೊಳ್ಳೇಗಾಲ ಪಟ್ಟಣದ ಜನರನ್ನು ಅಕ್ಷರ ಸಹ ಬೆಚ್ಚಿ ಬಿಳಿಸಿದೆ.

# ಜೀವಂತ ವ್ಯಕ್ತಿಗೆ ಮರಣ ಪ್ರಮಾಣಪತ್ರ!

## ಮಾನ್ವಿಯಲ್ಲಿ ಬಯಲಾಗಿರುವ ಆಡಳಿತಾತ್ಮಕ ಅರಾಜಕತೆ

**ರಾಯಚೂರು**

✍ ವೀರನಗೌಡ

ಜೀವಂತ ವ್ಯಕ್ತಿಯ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ಸೃಷ್ಟಿಯಾಗಿರುವುದು ಎಂಬುದು ಸಾಮಾನ್ಯ ಆಡಳಿತಾತ್ಮಕ ದೋಷವಲ್ಲ; ಅದು ನಾಗರಿಕರ ಅಸ್ತಿತ್ವವನ್ನೇ ಪ್ರಶ್ನಿಸುವ ಅತ್ಯಂತ ಗಂಭೀರ ವಿಷಯವಾಗಿದೆ. ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಜೀವಿಸುವ ಹಕ್ಕು, ಮಾನವ ಗೌರವ ಮತ್ತು ಕಾನೂನಿನ ಮುಂದೆ ಸಮಾನತೆ ಎಂಬ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸಿದೆ. ಆದರೆ ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಬೆಳಕಿಗೆ ಬಂದಿರುವ ಪ್ರಕರಣವು ಈ ಸಂವಿಧಾನಾತ್ಮಕ ಮೌಲ್ಯಗಳ ಮೇಲೆಯೇ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯನ್ನು ಎತ್ತಿದೆ. ಜೀವಂತವಾಗಿರುವ ವ್ಯಕ್ತಿಯೊಬ್ಬರ ಹೆಸರಿನಲ್ಲಿ ಮರಣ ಪ್ರಮಾಣಪತ್ರ ನೀಡಲಾಗಿದೆ ಎನ್ನುವ ಆರೋಪ, ಆ ದಾಖಲೆ ಆಧಾರದಲ್ಲಿ ಆಸ್ತಿ ವರ್ಗಾವಣೆ ಮತ್ತು ಮಾರಾಟ ನಡೆದಿದೆ ಎನ್ನುವ ಸಂಗತಿ, ಹಾಗೂ ಈ ಎಲ್ಲದಕ್ಕೂ ಸಂಬಂಧಿಸಿದಂತೆ ಆಡಳಿತ ಮತ್ತು ತನಿಖಾ ಸಂಸ್ಥೆಗಳು ತೋರಿರುವ ನಿರ್ಲಕ್ಷ್ಯ ಇವೆಲ್ಲವೂ ಸೇರಿ ಆಡಳಿತಾತ್ಮಕ ಅರಾಜಕತೆಯ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ.


ಷರ್ಫುದ್ದೀನ್

ಈ ಪ್ರಕರಣದ ಕೇಂದ್ರಬಿಂದು ಮಾನ್ವಿ ಪಟ್ಟಣದ ವಾರ್ಡ್ ನಂ.3, ಮಾರುತಿನಗರ ನಿವಾಸಿ ಮಹಮ್ಮದ್ ಷರ್ಫುದ್ದೀನ್ ತಂದೆ ಖಾಜಾ (ಪೀರ್ ಸಾಬ್). ಸಂತ್ರಸ್ತನಾಗಿ ಹೊರಹೊಮ್ಮಿರುವ ಅವರು, ತಾನು ಸಂಪೂರ್ಣವಾಗಿ ಜೀವಂತವಾಗಿದ್ದರೂ 2009ನೇ ಇಸವಿಯಲ್ಲಿ ತಾನು ಮರಣ ಹೊಂದಿದ್ದೇನೆ ಎಂಬಂತೆ ಸುಳ್ಳು ಮರಣ ಪ್ರಮಾಣಪತ್ರವನ್ನು ಮಾನ್ವಿ ಪುರಸಭೆ ವ್ಯಾಪ್ತಿಯ ಅಧಿಕಾರಿಗಳು ಸೃಷ್ಟಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಮರಣ ಪ್ರಮಾಣಪತ್ರದ ಅಸ್ತಿತ್ವವು ಕೇವಲ ಕಾಗದದ ದೋಷವಲ್ಲ, ಬದಲಾಗಿ ವ್ಯಕ್ತಿಯ ಕಾನೂನು ಅಸ್ತಿತ್ವವನ್ನೇ ಅಳಿಸುವಂತಹ ಅಪಾಯಕಾರಿ ಕ್ರಮವಾಗಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.


ಷರ್ಫುದ್ದೀನ್‌ನ ಹೆಂಡತಿ ಹಾಗೂ ಮಗಳು

### ಸುಳ್ಳು ಮರಣ ಪ್ರಮಾಣಪತ್ರದ ಆಧಾರದಲ್ಲಿ ಆಸ್ತಿ ವರ್ಗಾವಣೆ

ಸಂತ್ರಸ್ತನ ಹೇಳಿಕೆಯ ಪ್ರಕಾರ, ಈ ಸುಳ್ಳು ಮರಣ ಪ್ರಮಾಣಪತ್ರವನ್ನು ಆಧಾರವಾಗಿಸಿಕೊಂಡು, ತನ್ನ ಪತ್ನಿ ಶ್ರೀಮತಿ ರಸೂಲ್ ಬೀ ಗಂ. ಷರ್ಫುದ್ದೀನ್ ಅವರ ಹೆಸರಿನಲ್ಲಿದ್ದ ವಸತಿ ಮನೆಯನ್ನು ಕರಿಷ್ಮಾ ಕೆ. ಎಂಬ ಯುವತಿ ತನ್ನ ಹೆಸರಿಗೆ ವರ್ಗಾಯಿಸಿಕೊಂಡಿದ್ದಾಳೆ. ಆ ಬಳಿಕ ಆ ಆಸ್ತಿಯನ್ನು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡಲಾಗಿದೆ ಎಂಬ ಗಂಭೀರ ಆರೋಪವೂ ಇದೆ.



ಜೀವಂತ ವ್ಯಕ್ತಿಯ ಮರಣವನ್ನು ಕಾಗದದಲ್ಲಿ ತೋರಿಸಿ ಆಸ್ತಿ ವರ್ಗಾವಣೆ ಮಾಡಿರುವುದು ಭಾರತೀಯ ದಂಡ ಸಂಹಿತೆಯಡಿ ವಂಚನೆ, ನಕಲಿ ದಾಖಲೆ ಸೃಷ್ಟಿ, ಸಾರ್ವಜನಿಕ ದಾಖಲೆಗಳ ದುರುಪಯೋಗ ಮತ್ತು ಕ್ರಿಮಿನಲ್ ಸಂಚು ಸೇರಿದಂತೆ ಹಲವು ಗಂಭೀರ ಅಪರಾಧಗಳಿಗೆ ಒಳಪಡುವ ವಿಷಯವಾಗಿದೆ ಎಂದು ಕಾನೂನು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

### 'ಬೇರೆ ವ್ಯಕ್ತಿ' ಎಂಬ ವಾದ ಮತ್ತು ಕಾನೂನು ಗೊಂದಲ

ಈ ಪ್ರಕರಣದಲ್ಲಿ ಮತ್ತೊಂದು ಅತೀವ ಚರ್ಚೆಗೆ ಗ್ರಾಸವಾದ ಅಂಶವೆಂದರೆ 'ಬೇರೆ ವ್ಯಕ್ತಿ' ಎಂಬ ಆಡಳಿತಾತ್ಮಕವಾದ. ಮಾನ್ವಿ ಪುರಸಭೆ ಕಾರ್ಯಾಲಯವು ನಡೆಸಿದ ಆಂತರಿಕ ತನಿಖೆಯಲ್ಲಿ 'ಮಹಮ್ಮದ್ ಷರ್ಫುದ್ದೀನ್ ತಂದೆ ಖಾಜಾ' ಮತ್ತು 'ಷರ್ಫುದ್ದೀನ್ ತಂದೆ ಪೀರಸಾಬ್' ಎಂಬ ಇಬ್ಬರು ವಿಭಿನ್ನ ವ್ಯಕ್ತಿಗಳಿದ್ದಾರೆ ಎಂಬುದನ್ನು ಕೇವಲ ಪತ್ರದ ಮೂಲಕ ಉಲ್ಲೇಖಿಸಿದೆ. ಆದರೆ ಈ ವಿಭಜನೆಗೆ ಯಾವುದೇ ದೃಢ ದಾಖಲೆಗಳು, ಗುರುತಿನ ಚೀಟಿಗಳು, ಜನನ ಅಥವಾ ಮರಣ ದಾಖಲೆಗಳು ಇಲ್ಲ ಎಂಬುದನ್ನು ಸಂತ್ರಸ್ತರು ತೀವ್ರವಾಗಿ ಆಕ್ಷೇಪಿಸಿದ್ದಾರೆ. ಕಾನೂನು ದೃಷ್ಟಿಯಿಂದ ನೋಡಿದರೆ, ಎರಡು ವಿಭಿನ್ನ ವ್ಯಕ್ತಿಗಳ ಅಸ್ತಿತ್ವವನ್ನು ಸ್ಥಾಪಿಸಲು ಸರಕಾರಿ ದಾಖಲೆಗಳು, ಸ್ಥಳೀಯ ತನಿಖಾ ವರದಿ ಮತ್ತು ದೃಢ ಸಾಕ್ಷ್ಯಗಳ ಅವಶ್ಯಕತೆ ಇರುತ್ತದೆ. ಆದರೆ ಇಂತಹ ಯಾವುದೇ ದಾಖಲೆಗಳಿಲ್ಲದೆ ಕೇವಲ ಹೇಳಿಕೆಯ ಆಧಾರದಲ್ಲಿ ವಿಭಿನ್ನ ವ್ಯಕ್ತಿಗಳಿದ್ದಾರೆ ಎಂದು ತೀರ್ಮಾನಿಸುವುದು ಕಾನೂನು ಪ್ರಕ್ರಿಯೆಯ ಗಂಭೀರ ಉಲ್ಲಂಘನೆಯಾಗುತ್ತದೆ ಎಂಬುದು ಕಾನೂನು ತಜ್ಞರ ಅಭಿಪ್ರಾಯವಾಗಿದೆ.

### ಪೊಲೀಸ್ ತನಿಖೆ, ತಹಸೀಲ್ದಾರ್ ವರದಿ ಮತ್ತು 'ಬಿ' ವರದಿ ಕುರಿತು ಪ್ರಶ್ನೆಗಳು

ಪೊಲೀಸ್ ತನಿಖೆಯ ಹಂತದಲ್ಲಿಯೂ ಅನೇಕ ಪ್ರಶ್ನೆಗಳು ಎದ್ದಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ವಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದರೂ, ತನಿಖೆ ಸಮರ್ಪಕವಾಗಿ ನಡೆದಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಹಿಂದಿನ ಪೊಲೀಸ್ ಇನ್‌ಸ್ಪೆಕ್ಟರ್ ವೀರಭದ್ರಯ್ಯ ಸ್ವಾಮಿ ಹಿರೇಮಠ ಹಾಗೂ ಪ್ರಸ್ತುತ ಪಿಐ ಸೋಮಶೇಖರ ಕೆಂಚಾರೆಡ್ಡಿ ಅವರು ಪ್ರಕರಣವನ್ನು ಸಂಪೂರ್ಣವಾಗಿ ತನಿಖೆ ಮಾಡದೆ ಸುಮಾರು ಒಂಬತ್ತು ತಿಂಗಳು ಕಾಲಹರಣ ಮಾಡಿದ್ದಾರೆ ಎಂದು ಸಂತ್ರಸ್ತರು ದೂರಿದ್ದಾರೆ. ತಹಸೀಲ್ದಾರರಿಂದ ಪಡೆಯಲಾದ ವರದಿಯಲ್ಲಿ 'ಷರ್ಫುದ್ದೀನ್ ತಂದೆ ಪೀರಸಾಬ್' ಎಂಬ ವ್ಯಕ್ತಿಯ ಅಸ್ತಿತ್ವವೇ ಇಲ್ಲ ಎಂದು ಉಲ್ಲೇಖಿಸಿದ್ದರೂ, ಯಾವುದೇ ದೃಢ ದಾಖಲೆಗಳಿಲ್ಲದೆ 'ಬಿ' ಅಂತಿಮ ವರದಿಯನ್ನು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿರುವುದು ತನಿಖಾ ಪ್ರಕ್ರಿಯೆಯ ಪಾರದರ್ಶಕತೆಯ ಮೇಲೆ ಗಂಭೀರ ಸಂಶಯವನ್ನು ಮೂಡಿಸಿದೆ.


### ದಾಖಲೆಗಳು ಸುಟ್ಟುಹೋಗಿವೆ ಎಂಬ ಕಾರಣ ಮತ್ತು ಆಡಳಿತದ ಜವಾಬ್ದಾರಿ

ಮರಣ ಪ್ರಮಾಣಪತ್ರ ನೀಡಿದ ಸಂದರ್ಭಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೇಳಿದಾಗ, ಅಗ್ನಿ ಅವಘಡದಲ್ಲಿ ದಾಖಲೆಗಳು ಸುಟ್ಟುಹೋಗಿವೆ ಎಂಬ ಉತ್ತರವನ್ನು ಸಂಬಂಧಪಟ್ಟ ಅಧಿಕಾರಿಗಳು ನೀಡಿದ್ದಾರೆ ಎನ್ನಲಾಗಿದೆ. ಆದರೆ ಸರ್ಕಾರಿ ದಾಖಲೆಗಳು ನಾಶವಾದಲ್ಲಿ, ಅದನ್ನು ತಕ್ಷಣವೇ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದಾಖಲಿಸಿ, ಅಧಿಕೃತ ವರದಿ ಸಲ್ಲಿಸುವುದು ಕಾನೂನುಬದ್ಧ ಕರ್ತವ್ಯವಾಗಿದೆ. ಈ ಕುರಿತು ಯಾವುದೇ ಎಫ್‌ಐಆರ್ ದಾಖಲಾಗಿಲ್ಲ ಎಂಬ ಸಂಗತಿ ಅಧಿಕಾರಿಗಳ ನಿರ್ಲಕ್ಷ್ಯವೋ ಅಥವಾ ಉದ್ದೇಶಪೂರ್ವಕ ಮುಚ್ಚಿಡುವಿಕೆಯಾಗಿದೆಯೋ ಎಂಬ ಅನುಮಾನಕ್ಕೆ ಕಾರಣವಾಗಿದೆ. ಆಡಳಿತಾತ್ಮಕ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಇಲ್ಲದೆ ಇಂತಹ ಪ್ರಕರಣಗಳನ್ನು ನಿರ್ಲಕ್ಷ್ಯಿಸುವುದು ಸಾರ್ವಜನಿಕ ನಂಬಿಕೆಯನ್ನು ಕುಸಿಸುವುದರತ್ತ ದಾರಿ ಮಾಡಿಕೊಡುತ್ತದೆ.


ಎಸ್ಪಿ ಅರುಣಾಂಶು ಗಿರಿ

ಸಂತ್ರಸ್ತರು ಜಿಲ್ಲಾಧಿಕಾರಿಗಳು, ಸಚಿವರು ಹಾಗೂ ವಿವಿಧ ಇಲಾಖೆಗಳ ಮುಂದೆ ಒಟ್ಟು 22ಕ್ಕೂ ಹೆಚ್ಚು ದೂರುಗಳನ್ನು ಸಲ್ಲಿಸಿದ್ದರೂ ಇದುವರೆಗೆ ಸ್ಪಷ್ಟ ನ್ಯಾಯ ದೊರೆತಿಲ್ಲ ಎಂದು ಹೇಳಿದ್ದಾರೆ. ಇದು ಭಾರತದ ಸಂವಿಧಾನದ ಕಲಂ 14 ಮತ್ತು 21 ಅಡಿಯಲ್ಲಿ ಭದ್ರಪಡಿಸಿರುವ ಸಮಾನತೆ ಮತ್ತು ಜೀವಿಸುವ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಜೀವಂತ ವ್ಯಕ್ತಿಯೊಬ್ಬನು ತನ್ನ ಅಸ್ತಿತ್ವವನ್ನು ಸಾಬೀತುಪಡಿಸಿಕೊಳ್ಳಲು ವರ್ಷಗಟ್ಟಲೆ ಕಚೇರಿಗಳ ಮೆಟ್ಟಿಲು ಹತ್ತಬೇಕಾಗಿರುವುದು ಆಡಳಿತ ವ್ಯವಸ್ಥೆಯ ವೈಫಲ್ಯವನ್ನೇ ತೋರಿಸುತ್ತದೆ.

ಒಟ್ಟಾರೆ, ಜೀವಂತ ವ್ಯಕ್ತಿಗೆ ಮರಣ ಪ್ರಮಾಣಪತ್ರ ನೀಡಿರುವುದು, ಆ ದಾಖಲೆ ಆಧಾರದಲ್ಲಿ ಆಸ್ತಿ ವರ್ಗಾವಣೆ ನಡೆದಿರುವುದು ಮತ್ತು ತನಿಖಾ ಸಂಸ್ಥೆಗಳ ನಿರ್ಲಕ್ಷ್ಯ ಈ ಎಲ್ಲ ಅಂಶಗಳು ಸೇರಿ ವ್ಯವಸ್ಥಾತ್ಮಕ ಭ್ರಷ್ಟಾಚಾರದ ಗಂಭೀರ ಸೂಚಕಗಳಾಗಿವೆ. ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಹಾಗೂ ವಿಭಾಗೀಯ ಕ್ರಮ ಕೈಗೊಳ್ಳದೇ ಹೋದರೆ, ಆಡಳಿತದ ಮೇಲಿನ ಸಾರ್ವಜನಿಕ ನಂಬಿಕೆ ಸಂಪೂರ್ಣವಾಗಿ ಕುಸಿಯುವ ಅಪಾಯವಿದೆ.



GOVERNMENT OF KARNATAKA
Chief Registrar of Births and Deaths
DEATH CERTIFICATE
"Ensure registration of every birth and death"


ಮರಣ ಪ್ರಮಾಣ ಪತ್ರ

### ನ್ಯಾಯಕ್ಕಾಗಿ ಅಗತ್ಯವಿರುವ ತುರ್ತು ಕ್ರಮಗಳು ಮತ್ತು ಸಾರ್ವಜನಿಕ ನಿರೀಕ್ಷೆ

ಈ ಪ್ರಕರಣದಲ್ಲಿ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳಲ್ಲಿ ಸುಳ್ಳು ಮರಣ ಪ್ರಮಾಣಪತ್ರವನ್ನು ರದ್ದುಪಡಿಸುವುದು, ಅದರ ಆಧಾರದಲ್ಲಿ ನಡೆದ ಆಸ್ತಿ ವರ್ಗಾವಣೆಗಳನ್ನು ಯಥಾಸ್ಥಿತಿಗೆ ತರುವುದು ಮತ್ತು ಸಂಬಂಧಪಟ್ಟ ಅಧಿ ಕಾರಿಗಳು ಹಾಗೂ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಪ್ರಮುಖವಾಗಿದೆ. ಮಾನ್ವಿಯ ಈ ಘಟನೆ ಕೇವಲ ಒಬ್ಬ ವ್ಯಕ್ತಿಗೆ ನಡೆದ ಅನ್ಯಾಯವಲ್ಲ; ಇದು ರಾಜ್ಯದ ದಾಖಲೆ ಮತ್ತು ಆಡಳಿತ ವ್ಯವಸ್ಥೆಯ ನೈತಿಕತೆಯನ್ನು ಪರೀಕ್ಷಿಸುವ ಪ್ರಕರಣವಾಗಿದೆ. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ಈ ಕುರಿತು ಸ್ಪಷ್ಟ, ಪಾರದರ್ಶಕ ಮತ್ತು ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬುದನ್ನು ಇದೀಗ ಸಾರ್ವಜನಿಕರು ಮತ್ತು ನ್ಯಾಯಾಂಗ ವಲಯ ಗಂಭೀರವಾಗಿ ಗಮನಿಸುತ್ತಿದೆ. ☯




APPLICATION FORM FOR TRANSFER OF ...
To,
The Chief officer,
TMC Manvi.


ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ
ಬೆಂಗಳೂರು – 560 001.
080-2286 8303

# ಸೌಜನ್ಯ ಫೈಲ್ಸ್



17

ನಿರೂಪಣೆ :
ಮೋಹನ್ ಬೋಳಂಗಡಿ

## ಸೌಜನ್ಯ ಮೃತದೇಹವನ್ನು ಮೊದಲು ನೋಡಿದವರು ಯಾರು?

ನಿಗೂಢ ರೀತಿಯಲ್ಲಿ ಕಾಣೆಯಾಗಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ರೀತಿಯಲ್ಲಿ ಪತ್ತೆಯಾದ ನತದೃಷ್ಟೆ ಸೌಜನ್ಯ. ಈ ಪ್ರಕರಣ ಮೂರು ತನಿಖಾ ಸಂಸ್ಥೆಗಳಿಂದ ತನಿಖೆಯಾಗಿ ಆರೋಪಿ ಸಂತೋಷ್‌ರಾವ್ ಎಂಬಾತನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಕೆಯಾಗಿ ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ನಿರ್ದೋಷಿಯಾಗಿ ಬಿಡುಗಡೆ ಹೊಂದಿದ್ದ. ಇಡೀ ಪ್ರಕರಣ ನ್ಯಾಯಾಲಯದಲ್ಲಿ ಬಿದ್ದು ಹೋಗಲು ಮುಖ್ಯ ಕಾರಣವಾಗಿರುವುದು ಸಾಕ್ಷಿ ವಿಚಾರಣೆಯ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಪರ ಸಾಕ್ಷಿದಾರರು ಮುಖ್ಯ ವಿಚಾರಣೆ ಮತ್ತು ಅಡ್ಡ ವಿಚಾರಣೆಯಲ್ಲಿ ಇತರ ಮೂವರು ಯುವಕರ ಹೆಸರುಗಳನ್ನು ನ್ಯಾಯಾಲಯದಲ್ಲಿ ಪ್ರಸ್ತಾಪಿಸಿದ್ದು. ಆದ್ದರಿಂದ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗಿ ಇವತ್ತಿಗೂ ಬಗೆಹರಿಯದ ಪ್ರಕರಣವಾಗಿ ಉಳಿದುಕೊಂಡಿದೆ. ಈ ಪ್ರಕರಣದ ಸಾಕ್ಷಿದಾರರ ಪೈಕಿ ಮುಖ್ಯವಾದವರು ನೇತ್ರಾವತಿ ಸ್ನಾನಘಟ್ಟದ ಬಳಿ ಅಂಗಡಿ ಹೊಂದಿದ್ದ ಗುರುಕಿರಣ್ ಅವರು. ಏಕೆಂದರೆ ಅವರು ಸೌಜನ್ಯಳ ಮೃತದೇಹವನ್ನು ಮೊದಲು ಕಂಡವರು ಮತ್ತು ಸೌಜನ್ಯ ಪ್ರಕರಣದ ನಾಲ್ಕನೇಯ ಸಾಕ್ಷಿ.



ವಿಠಲಗೌಡ

ಗುರುಕಿರಣ್ ಅವರು ಧರ್ಮಸ್ಥಳದ ವಾಸಿ ಮೋನಪ್ಪ ನಾಯ್ಕ ಎನ್ನುವವರ ಮಗ. ಹಲವು ವರ್ಷಗಳಿಂದ ಧರ್ಮಸ್ಥಳದ ಸ್ನಾನಘಟ್ಟದ ಬಳಿ ಅಂಗಡಿ ನಡೆಸಿಕೊಂಡು ಬಂದಿದ್ದರು. ಆ ಅಂಗಡಿಯಲ್ಲಿ ಯಾತ್ರಾರ್ಥಿಗಳಿಗೆ ಬೇಕಾಗುವಂತಹ ಬಟ್ಟೆ, ಲುಂಗಿ, ಸೋಪು, ಶ್ಯಾಂಪು ಮೊದಲಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಅಂಗಡಿಯ ಪಕ್ಕದಲ್ಲೇ ಸುಪ್ರಭಾತ ಎಂಬ ಹೆಸರಿನ ಹೋಟೇಲು ಇತ್ತು. ಈ ಹೋಟೇಲು ಸೌಜನ್ಯಳ ಮಾವ ವಿಠಲ ಗೌಡರದ್ದು. ಸೌಜನ್ಯ ದಿನನಿತ್ಯ ಆ ಹೋಟೇಲಿಗೆ ಬರುತ್ತಿದ್ದಳು. ಆದ್ದರಿಂದ ಗುರುಕಿರಣ್ ಅವರಿಗೆ ಆಕೆಯ ಪರಿಚಯ ಇತ್ತು. ಸೌಜನ್ಯ ನಾಪತ್ತೆಯಾದ ಮಾಹಿತಿ ತಿಳಿದು ಆಕೆಯನ್ನು ಹುಡುಕಾಟ ನಡೆಸಲು ಹೋಗಿದ್ದರು. ಮರುದಿನ ಅಂದರೆ 10.10.2012ರಂದು ಬೆಳಿಗ್ಗೆ ಸೌಜನ್ಯಳಿಗಾಗಿ ಮಣ್ಣಸಂಕದ ಬಳಿ ಹುಡುಕಾಟ ನಡೆಸಿದ ಸಂದರ್ಭದಲ್ಲಿ ಆಕೆಯ ಮೃತದೇಹ ಕಂಡು ಬಂದಿತ್ತು. ತಕ್ಷಣ ಅವರು ಇತರರಿಗೆ ಮಾಹಿತಿ ನೀಡಿದ್ದರು. ಆದ್ದರಿಂದ ಈ ಪ್ರಕರಣದ ಗುರುಕಿರಣ್ ಪ್ರಮುಖ ಸಾಕ್ಷಿಯಾಗಿ ಗುರುತಿಸಲ್ಪಟ್ಟಿದ್ದರು.

ಗುರುಕಿರಣ್ ಅವರು ನ್ಯಾಯಾಲಯದಲ್ಲಿ ಸಿಬಿಐ ಪರ ವಕೀಲರ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತಹ ಅಂಶಗಳು ಈ ರೀತಿ ಇದೆ. ನಾನು ಧರ್ಮಸ್ಥಳ ಗ್ರಾಮದ ನೇತ್ರಾವತಿ ಸ್ನಾನಘಟ್ಟದಲ್ಲಿ ರೆಡಿಮೆಡ್ ಬಟ್ಟೆ ಅಂಗಡಿ ನಡೆಸುತ್ತಿದ್ದೇನೆ. ನಮ್ಮ ಅಂಗಡಿಯಲ್ಲಿ ಬಟ್ಟೆ, ಲುಂಗಿ, ಸೋಪು, ಶ್ಯಾಂಪು ಇತರೆ ವಸ್ತುಗಳನ್ನು ಇಟ್ಟದ್ದೇನೆ. ಸ್ನಾನಘಟ್ಟದ ಪಕ್ಕದಲ್ಲಿಯೇ ನಮ್ಮ ಅಂಗಡಿ ಇದೆ. ನನಗೆ ಈ ಪ್ರಕರಣದ ಮೂರನೇ ಸಾಕ್ಷಿ ವಿಠಲ ಗೌಡ ಗೊತ್ತು. ಅವರು ನಮ್ಮ ಅಂಗಡಿಯ ಬಳಿ ಹೋಟೇಲು ಇಟ್ಟಿರುತ್ತಾರೆ. ಸೌಜನ್ಯ ಎಂಬ ಹುಡುಗಿ ನನಗೆ ಗೊತ್ತು. ವಿಠಲಗೌಡ ಸೌಜನ್ಯಳ ಮಾವ. ಸೌಜನ್ಯ ಅವರ ಹೋಟೇಲಿಗೆ ಆಗಾಗ ಬರುತ್ತಿದ್ದುದರಿಂದ ಗೊತ್ತು. ದಿ.9.10.2012ರಂದು ಸೌಜನ್ಯ ಕಾಣೆಯಾಗಿದ್ದಾಳೆ. ಆ ದಿನ ಸಂಜೆ 4.00 ಗಂಟೆಗೆ ಸೌಜನ್ಯ ನೇತ್ರಾವತಿ ಸ್ನಾನಘಟ್ಟದ ಬಸ್‌ಸ್ಟಾಪಿನಲ್ಲಿ ಇಳಿದು ಪಾಂಗಾಳದಲ್ಲಿರುವ ಅವರ ಮನೆ ಕಡೆ ಹೋಗುತ್ತಿದ್ದಳು. ನಾನು ನಮ್ಮ ಅಂಗಡಿಯಿಂದ ಅವರು ಹೋಗುತ್ತಿದ್ದುದನ್ನು ನೋಡಿದೆ. ಆ ದಿನ ಆ ಸಮಯದಲ್ಲಿ ವಿಠಲ ಗೌಡರ ಮನೆಯಲ್ಲಿ ಪೂಜಾ ಕಾರ್ಯಕ್ರಮ ಇದ್ದು, ಅವರು ಹೋಟೇಲಿಗೆ ಬಂದಿರುವುದಿಲ್ಲ. ಆ ಹುಡುಗಿ ಕಾಣೆಯಾದ ಬಗ್ಗೆ ನಮಗೆ ಸಂಜೆ 6.00 ಗಂಟೆಗೆ ಗೊತ್ತಾಯಿತು. ಆಗ ನಾವುಗಳು ಅದೇ ದಿನ ಸಂಜೆ ಆ ಹುಡುಗಿಯ ಮನೆಗೆ ಹೋಗುವ ದಾರಿಯಲ್ಲಿ ಹುಡುಕಾಡಿದೆವು. ರಾತ್ರಿ 10.00 ಗಂಟೆಯವರೆಗೆ ಹುಡುಕಿದೆವು. ನಮಗೆ ಆ ದಿನ ಯಾವುದೇ ಕುರುಹು ಸಿಗಲಿಲ್ಲ. ಮರುದಿನ ಬೆಳಿಗ್ಗೆ 10.00 ಗಂಟೆಗೆ ನಾನು ದಿನೇಶ್, ಅವಿನಾಶ್ ಶೆಟ್ಟಿ ಮತ್ತು ಉಮೇಶ್ ಗೌಡ ಎಲ್ಲಾ ಸೇರಿ ಮಣ್ಣಸಂಕದ ಬಳಿ ಹೋದೆವು. ಅಲ್ಲಿ ನಾವು ಹೋದಾಗ ಒಂದು ಶವ ಇತ್ತು. ಆ ಶವವನ್ನು ನೋಡಿದಾಗ ಅದು ಸೌಜನ್ಯಳದ್ದಾಗಿತ್ತು. ತಕ್ಷಣ ನಾನು ನನ್ನ ಅಂಗಡಿಯ ಯಜಮಾನರಾದ ಕುಸುಮಾಕರ್ ಅವರಿಗೆ ಬೆಳಿಗ್ಗೆ 10.30ರಿಂದ 11.00 ಗಂಟೆಯಲ್ಲಿ ವಿಷಯ ತಿಳಿಸಿದೆ. ಅವರು ಪೊಲೀಸರಿಗೆ ಮತ್ತು ಬೇರೆಯವರಿಗೆ ವಿಷಯ ತಿಳಿಸಿದರು. ಶವ ಸಿಕ್ಕಿದ ಜಾಗದಲ್ಲಿ ಕಾಡು ಇತ್ತು. ಶವ ಅರೆನಗ್ನ ಸ್ಥಿತಿಯಲ್ಲಿ ಇತ್ತು. ಬಟ್ಟೆಗಳು ಹರಿದಿತ್ತು. ನಂತರ ಪೊಲೀಸರು ಮತ್ತು ಸಾರ್ವಜನಿಕರು ಬಂದರು. ಪೊಲೀಸರು ಮಹಜರು ಮಾಡಿದ ಮೇಲೆ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು.



ಸಂತೋಷ್ ರಾವ್

ಸೌಜನ್ಯಳನ್ನು ರೇಪ್ ಮಾಡಿ ಕೊಲೆ ಮಾಡಿದ್ದಾರೆಂದು ನಂತರ ತಿಳಿಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸಬಹುದು. ಆ ದಿನ ಅಥವಾ ಅದಕ್ಕಿಂತ ಮೊದಲು ಆರೋಪಿಯನ್ನು ಆ ಸ್ಥಳದಲ್ಲಿ ಎಲ್ಲಿಯೂ ನೋಡಿರಲಿಲ್ಲ. ಸ್ನಾನಘಟ್ಟಕ್ಕೆ ಸುಮಾರು 400-500 ಜನರು ಪ್ರತಿದಿನ ಬರುತ್ತಾರೆ. ಬೆಳ್ತಂಗಡಿ ಪೊಲೀಸರು ಮತ್ತು ಸಿಬಿಐ ಪೊಲೀಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ. ಆರೋಪಿಯನ್ನು ಟಿವಿಯಲ್ಲಿ ಮತ್ತು ಪೇಪರ್‌ನಲ್ಲಿ ನೋಡಿದ್ದೆ. ಆ ಕಾರಣದಿಂದ ಗುರುತಿಸಬಹುದು. ಮುಖ್ಯ ವಿಚಾರಣೆಯಲ್ಲಿ ಈ ರೀತಿಯಾಗಿ ಹೇಳಿಕೆ ನೀಡಿದ್ದರು ಗುರುಕಿರಣ್. ಇವರ ಈ ಹೇಳಿಕೆಯನ್ನು ಪೊಲೀಸರು, ಸಿಓಡಿ ಮತ್ತು ಸಿಬಿಐ ಅಧಿಕಾರಿಗಳು ದಾಖಲಿಸಿಕೊಂಡಿದ್ದರು. ಘಟನೆ ನಡೆದ ದಿನದಂದು ಯಾವುದೇ ರೀತಿಯ ಒತ್ತಾಸೆಯಿಲ್ಲದೆ ಗುರುಕಿರಣ್ ಅವರು ನೀಡಿದಂತಹ ಹೇಳಿಕೆ ಇದು ಆಗಿತ್ತು. ಈ ಹೇಳಿಕೆಯಲ್ಲಿ ಪ್ರಮುಖ ಅಂಶ ಅಂದರೆ ಅವರಿಗೆ ಆರೋಪಿ ಯಾರು ಎಂದು ಹೇಳಿಕೆ ನೀಡುವ ಸಂದರ್ಭದಲ್ಲಿ ಗೊತ್ತಿತ್ತು. ಅಂದರೆ ಪ್ರಕರಣ ನಡೆದ ಎರಡು ದಿನದ ನಂತರ ಆರೋಪಿ ಸಂತೋಷ್‌ರಾವ್‌ನನ್ನು ಧರ್ಮಸ್ಥಳದಲ್ಲಿ ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದು, ಮತ್ತು ಪೊಲೀಸರು ವಿಚಾರಣೆ ನಡೆಸಿ ಆತನೇ ಆರೋಪಿ ಎಂದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ಅದೇ ಸ್ನಾನಘಟ್ಟದ ಬಳಿ ಕರೆದುಕೊಂಡು ಬಂದದ್ದು ಮತ್ತು ಆತ ಸೌಜನ್ಯಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ ಸ್ಥಳವನ್ನು ತೋರಿಸಿದ್ದು, ಎಲ್ಲವೂ ಗುರುಕಿರಣ್ ಅವರ ಉಪಸ್ಥಿತಿಯಲ್ಲೇ ನಡೆದಿತ್ತು. ಪೊಲೀಸರು ಅವರ ಹೇಳಿಕೆ ದಾಖಲಿಸಿಕೊಂಡಿದ್ದು, ಘಟನೆ ನಡೆದ ಸುಮಾರು ದಿವಸಗಳ ನಂತರ. ಆದ್ದರಿಂದ ಅವರು ಆ ಸಂದರ್ಭದಲ್ಲಿ ತಮಗೆ ಗೊತ್ತಿದ್ದಂತಹ ವಿಚಾರವನ್ನು ವಿಚಾರಣೆಯ ವೇಳೆಗೆ ತಿಳಿಸಿದ್ದರು. ಅದನ್ನೇ ತನಿಖಾಧಿಕಾರಿಗಳು ದಾಖಲಿಸಿಕೊಂಡಿದ್ದರು.



ಮೋಹಿತ್ ಕುಮಾರ್

ಗುರುಕಿರಣ್ ಅವರನ್ನು ಆರೋಪಿ ಸಂತೋಷ್ ರಾವ್ ಪರ ವಕೀಲ ಮೋಹಿತ್ ಕುಮಾರ್ ಅವರು ಪಾಟೀ ಸವಾಲಿಗೆ ಗುರಿಪಡಿಸಿದ್ದರು. ವಕೀಲರು ಪ್ರಶ್ನೆಗಳಿಗೆ ಉತ್ತರಿಸಿದ ಗುರುಕಿರಣ್ ಅವರು ನನ್ನ ಅಂಗಡಿ ಮತ್ತು ವಿಠಲಗೌಡರ ಹೋಟೆಲು ಅಕ್ಕಪಕ್ಕದಲ್ಲಿದೆ. ನಮ್ಮ ಅಂಗಡಿಯ ಪಕ್ಕದಲ್ಲಿ ಪ್ರಕೃತಿ ಚಿಕಿತ್ಸಾಲಯ ಇದೆ. ಅಲ್ಲಿ ಪ್ರತೀದಿನ ವಾಚ್‌ಮೆನ್‌ಗಳು ಇರುತ್ತಾರೆ. ಅಲ್ಲಿ ಸಿಸಿಟಿವಿ ಕ್ಯಾಮೆರಾ ಇದೆಯೋ ಇಲ್ಲವೋ ಎಂದು ಗೊತ್ತಿಲ್ಲ. ನಾನು ಸೌಜನ್ಯಳನ್ನು ನೋಡಿದ ಸಮಯದಲ್ಲಿ ಮಳೆ ಬರುತ್ತಿತ್ತು. ಆಕೆ ನಡೆದುಕೊಂಡು ಹೋಗುತ್ತಿದ್ದಳು. ಕೊಡೆ ಹಿಡಿದಿದ್ದಳೋ ಇಲ್ಲವೋ ಎಂಬುದು ನೆನಪಿಲ್ಲ. ನಾವು ಸೌಜನ್ಯಳನ್ನು ಹುಡುಕಿಕೊಂಡು ಹೋದಾಗ ಬಹಳಷ್ಟು ಜನರು ಇದ್ದರು. ನಾವೆಲ್ಲರೂ ಕಾಡಿನ ಒಳಗೆ ಹೋಗಿದ್ದೆವು. ಮೊದಲನೇ ದಿನ ಶವ ಸಿಕ್ಕ ಸ್ಥಳದಲ್ಲಿ ನಾವು ಹುಡುಕಿರಲಿಲ್ಲ. ಶವ ಸಿಕ್ಕ ಜಾಗದಲ್ಲಿ ಕಾಡು ಬೆಳೆದಿತ್ತು, ಪೊದೆ ಬೆಳೆದಿತ್ತು. ಆ ಎರಡೂ ದಿನಗಳು ಮಳೆ ಇತ್ತೋ ಇಲ್ಲವೋ ನೆನಪಿಲ್ಲ. ಶವ ಸಿಕ್ಕ ನಂತರ ಉದಯ್‌ಜೈನ್, ಮಲ್ಲಿಕ್ ಜೈನ್, ಆಶಿತ್ ಜೈನ್, ಧೀರಜ್ ಜೈನ್ ರವರುಗಳು ಈ ಕೃತ್ಯ ಮಾಡಿದ್ದಾರೆಂದು ನನಗೆ ಟಿವಿಯಲ್ಲಿ ಪ್ರಸಾರವಾದಾಗ ಗೊತ್ತಾಯಿತು ಎಂದು ಸ್ಪಷ್ಟಪಡಿಸಿದ್ದರು. 10ನೇ ತಾರೀಕು ಶವ ಸಂಸ್ಕಾರವಾದ ನಂತರ 11ನೇ ತಾರೀಕಿನಂದು ಉಜಿರೆ ಬೆಳ್ತಂಗಡಿ ಹಾಗೂ ಧರ್ಮಸ್ಥಳದಲ್ಲಿ ಪ್ರತಿಭಟನೆಗಳು ನಡೆಯಿತು. ಈ ಪ್ರತಿಭಟನೆಯ ಕಾರಣ ಆ ನಾಲ್ಕು ಜನರ ಮೇಲೆ ಸಂಶಯ ಇತ್ತು. ಅವರನ್ನು ಬಂಧಿಸಬೇಕು ಎಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಗುರುಕಿರಣ್ ನಿಜವಾದ ಆರೋಪಿಗಳನ್ನು ಬಂಧಿಸಬೇಕು ಎಂಬ ಒತ್ತಾಯದಿಂದ ಪ್ರತಿಭಟನೆ ನಡೆದಿತ್ತು ಎಂದು ಸ್ಪಷ್ಟಪಡಿಸಿದ್ದರು. ಈ ನಾಲ್ಕು ಜನರ ಮೇಲೆ ಸಂಶಯ ಇದೆ ಎಂದು ಮಾರನೇ ದಿನ ಟಿವಿ ಮತ್ತು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟವಾಗಿತ್ತು ಎಂಬುವುದರ ಬಗ್ಗೆ ನೆನಪಿಲ್ಲ ಎಂದು ಹೇಳಿದ ಗುರುಕಿರಣ್ ಅವರು ಆರೋಪಿ ಸಂತೋಷ್‌ರಾವ್‌ನನ್ನು ಯಾರೂ ಹಿಡಿದು ಕೊಟ್ಟರೋ ಎಂಬುದು ಗೊತ್ತಿಲ್ಲ. ಈ ಆರೋಪಿಯನ್ನು ಬಂಧಿಸಿದ ನಂತರ ನಿಜವಾದ ಆರೋಪಿತರನ್ನು ಬಂಧಿಸಬೇಕು ಎಂದು ದಕ್ಷಿಣ ಕನ್ನಡ ಮತ್ತು ಬೆಳ್ತಂಗಡಿ ಬಂದ್ ಮಾಡಿದ್ದರು ಎಂದರೆ ಸರಿ ಎಂದು ಸ್ಪಷ್ಟಪಡಿಸಿದರು. ಈ ಘಟನೆ ನಡೆದ ಸ್ವಲ್ಪ ದಿನಗಳ ಬಳಿಕ ಧರ್ಮಸ್ಥಳದಲ್ಲಿ ಕೆಲಸ ಮಾಡುತ್ತಿದ್ದ ರವಿ ಪೂಜಾರಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆತ ಈ ಪ್ರಕರಣದ ಸಾಕ್ಷಿಯಾಗಿದ್ದ. ಆತ ಸಾಕ್ಷಿ ಹೇಳುತ್ತಾನೆ ಎಂಬ ಉದ್ದೇಶದಿಂದ ಆತನ ಕೊಲೆಯಾಗಿದೆ ಎಂದು ಸಾರ್ವಜನಿಕರ ಅಭಿಪ್ರಾಯವಾಗಿತ್ತು ಎಂಬ ಅಂಶವನ್ನು ಒಪ್ಪಿಕೊಂಡಿದ್ದರು. ಸಿಬಿಐನವರು ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಸತ್ಯಕ್ಕೆ ಸಂದ ಜಯ ಎಂದು ಉಜಿರೆಯಲ್ಲಿ ಆಶಿತ್ ಜೈನ್ ಮತ್ತು ಧೀರಜ್ ಜೈನ್ ನೇತೃತ್ವದಲ್ಲಿ ದೊಡ್ಡ ಸಮಾರಂಭ ನಡೆದಿತ್ತು ಎಂಬುದನ್ನು ಗುರುಕಿರಣ್ ನ್ಯಾಯಾಲಯದ ಗಮನಕ್ಕೆ ತಂದಿದ್ದರು. ನನ್ನ ಅಂಗಡಿಯ ಬಾಡಿಗೆ 12000/- ರೂ. ಆಗಿತ್ತು. 2015ರಲ್ಲಿ ವಿಠಲ ಗೌಡರ ಹೋಟೆಲನ್ನು ಧರ್ಮಸ್ಥಳ ಗ್ರಾಮ ಪಂಚಾಯತ್ ರವರು ಮುಚ್ಚಿಸಿದ್ದರು ಎಂದು ಅವರು ಹೇಳಿದ್ದರು. ಈ ರೀತಿಯಾಗಿ ಗುರುಕಿರಣ್ ನೀಡಿದ್ದ ಹೇಳಿಕೆ ಮತ್ತು ಪಾಟೀಸವಾಲಿಗೆ ಉತ್ತರಿಸಿದ್ದನ್ನು ನ್ಯಾಯಾಧೀಶೆ ರೇಖಾ ಬಿ.ಎಸ್. ಅವರು ಅ.25,2016ರಂದು ದಾಖಲಿಸಿಕೊಂಡಿದ್ದರು.



ಧೀರಜ್ ಜೈನ್



ಉದಯ್ ಜೈನ್



ಮಲ್ಲಿಕ್ ಜೈನ್

ಮುಂದುವರಿಯುವುದು.....

# ಮೈಸೂರಿನಲ್ಲಿ ಪತ್ತೆಯಾಯ್ತು ಡ್ರಗ್ಸ್ ಫ್ಯಾಕ್ಟರಿ... ಇದರ ಮಾಸ್ಟರ್ ಮೈಂಡ್ ಯಾರು?

**ಸಿಎಂ ಸಿದ್ದರಾಮಯ್ಯ ಅವರ ತವರು ಕ್ಷೇತ್ರ, ಸಾಂಸ್ಕೃತಿಕ ನಗರಿ ಎಂಬ ಖ್ಯಾತಿಗೆ ಒಳಗಾಗಿ ಪ್ರವಾಸಿಗರ ಸ್ವರ್ಗವಾಗಿರುವ ಮೈಸೂರು ಇದೀಗ ಮಾದಕ ವ್ಯಸನಿಗಳಿಗೆ ಮಾದಕ ವಸ್ತುಗಳನ್ನು ತಯಾರಿಕೆ ಮಾಡುವ ಸ್ವರ್ಗವಾಗುತ್ತಿದೆಯಾ? ಎಂಬ ಪ್ರಶ್ನೆ ಮೂಡುತ್ತಿದೆ. ಇದಕ್ಕೆ ಕಾರಣವಾಗಿರುವುದು ಇಲ್ಲಿ ಪತ್ತೆಯಾಗಿರುವ ಡ್ರಗ್ಸ್ ಫ್ಯಾಕ್ಟರಿ. ಒಮ್ಮೆ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಿ ಡ್ರಗ್ಸ್ ಫ್ಯಾಕ್ಟರಿಯ ನಿಗೂಢ ರಹಸ್ಯವನ್ನು ಬಯಲು ಮಾಡಿದ ಮೇಲೂ ನಮ್ಮ ಪೊಲೀಸರಿಗೆ ಇಲ್ಲಿಯೇ ಮತ್ತೊಂದು ಫ್ಯಾಕ್ಟರಿ ಇದೆ ಎಂಬುದು ತಿಳಿಸೋಕೆ ರಾಜಸ್ಥಾನ ಪೊಲೀಸರು ಬರಬೇಕಾಯಿತಾ? ಜನ ಪ್ರಶ್ನೆ ಕೇಳುತ್ತಿದ್ದಾರೆ.**







ಸಾಂಸ್ಕೃತಿಕ ನಗರಿ ಮೈಸೂರು ಇದೀಗ ಡ್ರಗ್ ಫ್ಯಾಕ್ಟರಿ ಆಗಿದೆ. ಇಲ್ಲಿಂದಲೇ ಸದ್ದಿಲ್ಲದೆ ಡ್ರಗ್ ತಯಾರಾಗಿ ಇಡೀ ದೇಶದಲ್ಲಿ ಬಿಕರಿಯಾಗುತ್ತಿತ್ತು ಎಂದರೆ ಅಚ್ಚರಿಯಾಗಬಹುದು ಆದರೆ ನಿಜ. ಬೆಂಗಳೂರಿನಲ್ಲಿ ಕೋಟ್ಯಂತರ ರೂಪಾಯಿಯ ಮಾದಕ ವಸ್ತುಗಳ ಜಪ್ತಿ ಮತ್ತು ಆರೋಪಿಗಳನ್ನು ಅರೆಸ್ಟ್ ಮಾಡಿದಾಗಲೆಲ್ಲ ರಾಜ್ಯದ ಪೊಲೀಸರಿಗೆ ಜನ ಭೇಷ್ ಎನ್ನುತ್ತಿದ್ದರು. ಇದರ ಜಾಲ ನಮ್ಮ ರಾಜ್ಯದೊಳಗೆ ಗಟ್ಟಿಯಾಗಿ ಹರಡಿದ್ದು ಮಾತ್ರವಲ್ಲದೆ, ಇಲ್ಲಿಂದಲೇ ಡ್ರಗ್ ಬೇರೆಡೆಗೆ ರವಾನೆಯಾಗುತ್ತಿದೆ ಎಂಬ ಚಿಕ್ಕ ಅನುಮಾನವೂ ಬಂದಿರಲಿಲ್ಲ ಅದಕ್ಕಿಂತ ಹೆಚ್ಚಾಗಿ ಕಳೆದ (2025) ಜುಲೈನಲ್ಲಿ ಮಹಾರಾಷ್ಟ್ರ ಪೊಲೀಸರು ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಪತ್ತೆ ಹಚ್ಚಿದ ಮೇಲೂ ಇಲ್ಲಿ ಡ್ರಗ್ಸ್ ಫ್ಯಾಕ್ಟರಿ ಸಕ್ರಿಯವಾಗಿತ್ತು ಎಂದರೆ ನಮ್ಮ ಆಡಳಿತ ವ್ಯವಸ್ಥೆಗೆ ಅದ್ಯಾವ ಪರಿ ತುಕ್ಕು ಹಿಡಿದಿದೆ ಎಂಬುದು ಅರ್ಥವಾಗಿ ಬಿಡುತ್ತದೆ.





2025ರ ಜುಲೈನಲ್ಲಿ ಮೈಸೂರಿನ ರಿಂಗ್ ರೋಡ್‌ಗೆ ತಾಕಿಕೊಂಡಂತಿರುವ ಪ್ರದೇಶದಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಮಹಾರಾಷ್ಟ್ರ ಪೊಲೀಸರು ಪತ್ತೆ ಹಚ್ಚಿದ್ದರು. ಇದು ಭಾರಿ ಸುದ್ದಿ ಮಾಡಿದ್ದರಿಂದ ಎಚ್ಚೆತ್ತ ಪೊಲೀಸರು ಒಂದಷ್ಟು ದಿನ ಅಲರ್ಟ್ ಆಗಿ ಕಾರ್ಯಾಚರಣೆ ನಡೆಸಿದ್ದರು. ಆದರೆ ಆದಾದ ನಂತರವೂ ಇಲ್ಲಿ ಡ್ರಗ್ಸ್ ಫ್ಯಾಕ್ಟರಿ ಸದ್ದಿಲ್ಲದೆ ನಡೆದಿತ್ತು ಎಂಬುದು ಮಾತ್ರ ಅಚ್ಚರಿಯ ಸಂಗತಿಯೇ. ಈ ವಿಚಾರದಲ್ಲಿ ಗೃಹಸಚಿವರಾದ ಡಾ.ಜಿ. ಪರಮೇಶ್ವರ್ ಕೂಡ ಒಪ್ಪಿಕೊಂಡಿರಲಿಲ್ಲ. ಫಿನಾಯಿಲ್ ಫ್ಯಾಕ್ಟರಿ ನಡೆಯುತ್ತಿತ್ತು ಎನ್ನುವ ಮೂಲಕ ಅಚ್ಚರಿ ಹುಟ್ಟಿಸಿದ್ದರು. ಅದೆಲ್ಲ ಆಚೆಗಿಟ್ಟು ನೋಡಿದ್ದೇ ಆದರೆ ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಇದ್ದುದರ ಬಗ್ಗೆ ಖುದ್ದು ದೆಹಲಿ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ(ಎನ್ಸಿಬಿ) ಬಹಿರಂಗಗೊಳಿಸಿದೆ.





ಮೈಸೂರಿನಿಂದ ತಯಾರಾಗುತ್ತಿದ್ದ ಡ್ರಗ್ಸ್ ವ್ಯವಸ್ಥಿತ ಜಾಲಗಳ ಮೂಲಕ ಮಹಾರಾಷ್ಟ್ರ, ದೆಹಲಿ, ರಾಜಸ್ಥಾನ್ ಸೇರಿದಂತೆ ಹಲವು ರಾಜ್ಯಗಳಿಗೆ ಸರಬರಾಜಾಗುತ್ತಿತ್ತು. ಈ ಡ್ರಗ್ಸ್ ಫ್ಯಾಕ್ಟರಿಯನ್ನು ನಡೆಸುತ್ತಿದ್ದವರು ಹೊರಗಿನವರು ಆಗಿದ್ದರಿಂದ ಇಲ್ಲಿನವರಿಗೆ ಅಲ್ಲಿ ಏನು ನಡೆಯುತ್ತಿದೆ ಎಂಬುದೇ ಗೊತ್ತಿರಲಿಲ್ಲ. ಹೀಗಾಗಿಯೇ

**ಮೈಸೂರು**

**ಬಿ.ಎಂ. ಲವಕುಮಾರ್**

ದಂಧೆ ಯಾವುದೇ ಅಡೆ ತಡೆಯಿಲ್ಲದೆ ನಡೆಯುತ್ತಿತ್ತು. ಈ ಹಿಂದಿನ ಪ್ರಕರಣದಲ್ಲಿ ಮಹಾರಾಷ್ಟ್ರ ಪೊಲೀಸರಿಗೆ ಡ್ರಗ್ ಪೆಡ್ಲರ್ ಗಳು ಸಿಕ್ಕಿ ಬಿದ್ದಾಗ ಅವರನ್ನು ಹಿಡಿದು ರುಬ್ಬಿದಾಗ ಡ್ರಗ್ಸ್ ಮೈಸೂರಿನಲ್ಲಿ ತಯಾರಾಗುತ್ತಿರುವ ಬಗ್ಗೆ ಮಾಹಿತಿ ಹೊರ ಬಂದಿತ್ತು. ಹೀಗಾಗಿ ಅಲ್ಲಿನ ಪೊಲೀಸರು ದಾಳಿ ನಡೆಸಿದ್ದರು.

ಈ ಬಾರಿಯೂ ಕೂಡ ರಾಜಸ್ಥಾನ್ ಪೊಲೀಸರು ಮೈಸೂರಿನ ಡ್ರಗ್ಸ್ ಫ್ಯಾಕ್ಟರಿಯನ್ನು ಪತ್ತೆ ಹಚ್ಚಿದ್ದಾರೆ. ಇಷ್ಟಕ್ಕೂ ಮೈಸೂರಿನಲ್ಲಿ ಮತ್ತೊಮ್ಮೆ ಡ್ರಗ್ಸ್ ಫ್ಯಾಕ್ಟರಿ ಇರುವುದು ಪತ್ತೆಯಾಗಿದ್ದು ಹೇಗೆ ಎಂಬುದೇ ಕುತೂಹಲಕಾರಿ ವಿಚಾರವಾಗಿದ್ದು ಆ ಬಗೆಗಿನ ಮಾಹಿತಿಯನ್ನು ದೆಹಲಿ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ(ಎನ್ಸಿಬಿ) ತೆರೆದಿಟ್ಟಿದೆ. ಅದರಂತೆ ಹೇಳುವುದಾದರೆ,

ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ(ಎನ್ಸಿಬಿ) ಮೈಸೂರಿನಲ್ಲಿ ಪ್ರಮುಖ ಅಂತರರಾಜ್ಯ ಮಾದಕ ದ್ರವ್ಯ ಸಾಗಣೆ ಸಿಂಡಿಕೇಟ್ ಮತ್ತು ರಹಸ್ಯ ಔಷಧ ಉತ್ಪಾದನಾ ಪ್ರಯೋಗಾಲಯವನ್ನು ಭೇದಿಸುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಜನವರಿ 28ರಂದು ಗುಜರಾತ್‌ನ ಸೂರತ್ ಜಿಲ್ಲೆಯ ಪೈಸಾನಾದಲ್ಲಿ ಎನ್ಸಿಬಿ ಕರ್ನಾಟಕ ನೋಂದಣಿ ಸಂಖ್ಯೆಯನ್ನು ಹೊಂದಿರುವ ಟೊಯೋಟಾ ಫಾರ್ಚೂನರ್ ಎಸ್ಯುವಿಯನ್ನು ವಾಹನವನ್ನು ತಪಾಸಣೆ ಮಾಡಿದಾಗ ಅದರಲ್ಲಿ 35ಕೆ.ಜಿ. ಮೆಫೆಡ್ರೋನ್(ಎಂಡಿ) ಪತ್ತೆಯಾಗಿತ್ತು. ಇದಲ್ಲದೆ, ಪಲ್ಸಾನಾದ ದಾಸ್ತಾನ್ ರೆಸಿಡೆನ್ಸಿಯಲ್ಲಿರುವ ಮಾದಕ ವಸ್ತು ಜಾಲದ ಮಾಸ್ಟರ್ ಮೈಂಡ್ ಮಹೀಂದ್ರ ಕುಮಾರ್ ವಿಷ್ಣೋಯ್ ಅವರ ಮನೆಯಲ್ಲಿ ನಡೆಸಿದ ಶೋಧದಲ್ಲಿ 1.8 ಕೆಜಿ ಅಫೀಮು, 25.6 ಲಕ್ಷ ರೂ. ನಗದು ಮತ್ತು ವಿವಿಧ ರಾಸಾಯನಿಕಗಳು ಪತ್ತೆಯಾಗಿತ್ತು. ಹೀಗಾಗಿ ಇದರ ಹಿಂದೆ ಬಿದ್ದ ಕಾರ್ಯಾಚರಣೆ ತಂಡ ಜಾಲವನ್ನು ಬೇಧಿಸುವ ಕಾರ್ಯಕ್ಕೆ ಮುಂದಾಗಿತ್ತು. ಈ ವೇಳೆ ಮಹತ್ವದ ಮಾಹಿತಿ ಪತ್ತೆಯಾಗಿತ್ತಲ್ಲದೆ, ಮಾಸ್ಟರ್ ಮೈಂಡ್ ಮಹೀಂದ್ರ ಕುಮಾರ್ ವಿಷ್ಣೋಯ್‌ನ ಕಾರ್ಯಚಟುವಟಿಕೆಯ ರಹಸ್ಯವೂ ಬಯಲಾಗಿತ್ತು. ಅವನು ಸೇರಿದಂತೆ ಮೂವರನ್ನು ಬಂಧಿಸಿದ ತಂಡ ಈ ಜಾಲದ ಬಗ್ಗೆ ಮಾಹಿತಿ ಕಲೆ ಹಾಕಿತ್ತು.


ಕಮೀಷನರ್ ಸೀಮಾ ಲಾಟ್ಕರ್

ಆದರೆ ಮಾಸ್ಟರ್ ಮೈಂಡ್ ಆಗಿರುವ ಮಹೀಂದ್ರ ಕುಮಾರ್ ವಿಷ್ಣೋಯ್ ಇದಕ್ಕೂ ಮೊದಲು ಅಫೀಮು ಮತ್ತು ಸ್ಮ್ಯಾಕ್ ಮಾರಾಟದಲ್ಲಿ ಭಾಗಿಯಾಗಿದ್ದನು. ಎನ್‌ಡಿಪಿಎಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿದ್ದಾಗ ಇತರ ಕೈದಿಗಳೊಂದಿಗೆ ಮಾತನಾಡಿ ನಂತರ ಸಿಂಥೆಟಿಕ್ ಮಾದಕ ದ್ರವ್ಯಗಳನ್ನು ತಯಾರಿಸುವ ಕುರಿತು ಸ್ಕೆಚ್ ಹಾಕಿದ್ದನು. ಜೈಲಿನಲ್ಲಿದ್ದಾಗ ಸಿಂಥೆಟಿಕ್ ಮಾದಕ ದ್ರವ್ಯಗಳ ಪ್ರಕ್ರಿಯೆ, ಮಾರುಕಟ್ಟೆ ಬೇಡಿಕೆ ಮತ್ತು ಪೂರೈಕೆದಾರರು ಅರ್ಥಾತ್ ಪೆಡ್ಲರ್ ಗಳ ಸಖ್ಯ ಬೆಳೆದಿತ್ತು. ಹೀಗಾಗಿ ಡ್ರಗ್ಸ್ ತಯಾರಿಸುವುದು ಮತ್ತು ಅದನ್ನು ಡೀಲ್ ಮಾಡುವುದರ ಬಗ್ಗೆ ಈತ ಯೋಜನೆ ರೂಪಿಸಿದ್ದನು. ಅದರಂತೆ ಜೈಲಿನಿಂದ ಜಾಮೀನಿನ ಮೇಲೆ ಹೊರಬಂದ ನಂತರ ಮೈಸೂರಿನಲ್ಲಿ ರಹಸ್ಯ ಉತ್ಪಾದನಾ ಘಟಕವನ್ನು ಸ್ಥಾಪಿಸುವ ಸ್ಕೆಚ್ ಹಾಕಿದ್ದನು.


ಅದಕ್ಕೆ ಆಯ್ಕೆ ಮಾಡಿಕೊಂಡ ಜಾಗ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಘಟಕವನ್ನು... ಅಲ್ಲಿ ಕಾರ್ಯಚಟುವಟಿಕೆ ನಡೆಸುತ್ತಿದ್ದರೂ ಆ ನಂತರ ಡ್ರಗ್ಸ್ ಫ್ಯಾಕ್ಟರಿಯನ್ನು ಮೈಸೂರು ತಾಲೂಕಿನ ಯಾಂದಳ್ಳಿ ಗ್ರಾಮದ ಸಪ್ತ ಮಾತೃಕೆ ಲೇಔಟ್‌ನಲ್ಲಿ ತೆರೆದಿದ್ದನು. ಅಲ್ಲಿನ ಗಿರೀಶ್ ಬಾಬು ಎಂಬುವರಿಗೆ ಸೇರಿದ ಕಟ್ಟಡವನ್ನು ಬಾಡಿಗೆಗೆ ಪಡೆದಿದ್ದ ಮಹೀಂದ್ರ ಕುಮಾರ್ ವಿಷ್ಣೋಯ್ ಗ್ಯಾಂಗ್‌ನ ಗಣಪತ್ ಲಾಲ್ ಅಲ್ಲಿ ಅತ್ಯಾಧುನಿಕ ಉಪಕರಣಗಳ ಮೂಲಕ ಡ್ರಗ್ಸ್ ತಯಾರಿಸುತ್ತಿದ್ದನು. ಮೇಲ್ನೋಟಕ್ಕೆ ಫಿನಾಯಿಲ್ ಸೇರಿದಂತೆ ಇನ್ನಿತರ ಶುಚಿಗೊಳಿಸುವ ಉದ್ದೇಶಗಳಿಗಾಗಿ ರಾಸಾಯನಿಕಗಳನ್ನು ತಯಾರಿಸುವ ಸೋಗಿನಲ್ಲಿ ಫ್ಯಾಕ್ಟರಿ ನಡೆಯುತ್ತಿತ್ತಾದರೂ ಒಳಗೆ ತಯಾರಾಗುತ್ತಿದ್ದದ್ದು ಡ್ರಗ್ಸ್ ಆಗಿತ್ತು. ಕಟ್ಟಡದ ಮಾಲೀಕ ಸೇರಿದಂತೆ ಯಾರಿಗೂ ಈ ಬಗ್ಗೆ ಚಿಕ್ಕ ಅನುಮಾನವೂ ಬಂದಿರಲಿಲ್ಲ.

ಮಹೀಂದ್ರ ಕುಮಾರ್ ವಿಷ್ಣೋಯ್ ದೂರದಲ್ಲಿ ಕುಳಿತು ಎಲ್ಲವನ್ನು ನಿಯಂತ್ರಿಸುವ ಮಾಸ್ಟರ್ ಮೈಂಡ್ ಆಗಿದ್ದನು. ಆಗಾಗ್ಗೆ ಇಂತಹ ಪ್ರಕರಣದಲ್ಲಿ ತಗಲಾಕಿಕೊಂಡರೂ ಅದನ್ನು ಮತ್ತೆ, ಮತ್ತೆ ಮುಂದುವರೆಸುತ್ತಿದ್ದನು. ಈತನ ವಿರುದ್ಧ ರಾಜಸ್ಥಾನದಲ್ಲಿ ಮೂರು ಪ್ರಕರಣಗಳು ಮತ್ತು ಗುಜರಾತ್ನಲ್ಲಿ ಒಂದು ಪ್ರಕರಣ ದಾಖಲಾಗಿವೆ. ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು 2024 ರಲ್ಲಿ ಸ್ಥಾಪಿಸಿದರೂ ಇಲ್ಲಿಯವರೆಗೆ ಯಾವುದೇ ಅನುಮಾನ ಬಂದಿರಲಿಲ್ಲ. ಕಾರಣ ಮೇಲ್ನೋಟಕ್ಕೆ ಇದು ಕೆಮಿಕಲ್ ಫ್ಯಾಕ್ಟರಿಯಂತೆ ಗೋಚರಿಸುತ್ತಿತ್ತು. ಹೀಗಾಗಿ ಇಲ್ಲಿವರೆಗೆ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ 10ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳು (ಬೀದಿ ಮಾರುಕಟ್ಟೆಯಲ್ಲಿ), 25.6 ಲಕ್ಷ ರೂ. ನಗದು ಮತ್ತು ಟೊಯೋಟಾ ಫಾರ್ಚೂನರ್ ವಾಹನ ಮತ್ತು 500 ಕೆಜಿಗಿಂತ ಹೆಚ್ಚು ತೂಕದ ವಿವಿಧ ರಾಸಾಯನಿಕಗಳನ್ನು ವಶಪಡಿಸಿಕೊಳ್ಳಲಾಗಿದೆ. ರಹಸ್ಯ ಪ್ರಯೋಗಾಲಯವನ್ನು ಹೊಂದಿರುವ ಘಟಕವನ್ನು ವಿಧಿವಿಜ್ಞಾನ ತಂಡವು ಪರೀಕ್ಷೆಗಾಗಿ ಸೀಲ್ ಮಾಡಿದೆ. ಪ್ರಕರಣದಲ್ಲಿ ಇಲ್ಲಿಯವರೆಗೆ ಜಲೋರ್ ಜಿಲ್ಲೆಗೆ ಸೇರಿದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ರಾಜಸ್ಥಾನ ಮತ್ತು ಪ್ರಯೋಗಾಲಯದಲ್ಲಿ ಬಳಸಲಾದ ಪ್ರಯೋಗಾಲಯ ಉಪಕರಣಗಳು ಮತ್ತು ರಾಸಾಯನಿಕಗಳ ಪೂರೈಕೆ ಜಾಲವನ್ನು ಪತ್ತೆ ಹಚ್ಚಲು ತನಿಖೆ ಮುಂದುವರೆದಿದೆ.

ಇನ್ನೊಂದೆಡೆ ಮಾದಕ ವಸ್ತು ತಯಾರಿಕೆ ಶಂಕೆ

☞14



# ಚಿಕ್ಕಹಣಗಿಯಲ್ಲಿ ಮಾವನಿಂದಲೇ ಗರ್ಭಿಣಿ ಸೊಸೆಯ ಭೀಕರ ಕೊಲೆ!

**ಸಿರವಾರ ತಾಲೂಕಿನ ಚಿಕ್ಕಹಣಗಿ ಗ್ರಾಮದಲ್ಲಿ ನಡೆದ ಗರ್ಭಿಣಿ ಮಹಿಳೆಯ ಭೀಕರ ಹತ್ಯೆ ಘಟನೆ ಗ್ರಾಮಸ್ಥರನ್ನು ಬೆಚ್ಚಿಬೀಳುವಂತೆ ಮಾಡಿದೆ. ಕುಟುಂಬದ ಒಳಜಗಳದಿಂದ ಹುಟ್ಟಿದ ವೈಷಮ್ಯ ಕೊಲೆಗೇ ತಲುಪಿದ್ದು, ಮಾವನಿಂದಲೇ ಸೊಸೆಯ ಜೀವ ಹರಣವಾದ ಈ ಘಟನೆ ಸಮಾಜದಲ್ಲಿ ಆಳವಾದ ಆಘಾತ ಮೂಡಿಸಿದೆ. ಆರೋಪಿಯನ್ನು ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ.**

ರಾಯಚೂರು
✍ ವೀರನಗೌಡ


ಕೊಲೆಯಾದ ರೇಖಾ

ಸಿರವಾರ ತಾಲೂಕಿನ ಕವಿತಾಳ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕಹಣಗಿ ಗ್ರಾಮದಲ್ಲಿ ನಡೆದ ಭೀಕರ ಕೊಲೆ ಪ್ರಕರಣವು ಇಡೀ ಪ್ರದೇಶವನ್ನು ಬೆಚ್ಚಿಬೀಳುವಂತೆ ಮಾಡಿದೆ. ಕುಟುಂಬ ಕಲಹ, ಮಾನಸಿಕ ಕಿರುಕುಳ ಮತ್ತು ದೀರ್ಘಕಾಲದ ವೈಮನಸ್ಸು ಅಂತಿಮವಾಗಿ ಪ್ರಾಣಾಪಾಯಕರ ಹಿಂಸೆಗೆ ತಿರುಗಿದ ಈ ಘಟನೆ ಗ್ರಾಮೀಣ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಗೃಹ ಹಿಂಸೆಯ ಭೀಕರ ಮುಖವನ್ನು ಬಹಿರಂಗಪಡಿಸಿದೆ. ದಿನಾಂಕ 28.01.2026ರಂದು ನಡೆದ ಈ ಘಟನೆಯಲ್ಲಿ ನಾಲ್ಕು ತಿಂಗಳ ಗರ್ಭಿಣಿಯಾಗಿದ್ದ ಯುವತಿ ರೇಖಾ (24) ತನ್ನ ಮಾವನ ಕೈಯಲ್ಲಿ ಚಾಕುವಿನ ಇರಿತಕ್ಕೆ ಬಲಿಯಾಗಿ ಮೃತಪಟ್ಟಿದ್ದಾಳೆ. ಈ ಪ್ರಕರಣವು ಕೇವಲ ಒಂದು ಕುಟುಂಬದ ದುರಂತವಲ್ಲ, ಬದಲಾಗಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ಸಂಬಂಧಗಳಲ್ಲಿನ ಅಸಹಿಷ್ಣುತೆ ಹಾಗೂ ಕಾನೂನು ಜಾಗೃತಿ ಕೊರತೆಯ ಪರಿಣಾಮಗಳ ಕುರಿತು ಗಂಭೀರ ಚಿಂತನೆಗೆ ಕಾರಣವಾಗಿದೆ.

ಪಿರ್ಯಾದಿದಾರರ ದೂರಿನಂತೆ, ಅವರಿಗೆ ಮೂವರು ಮಕ್ಕಳು ಇದ್ದು, ಹಿರಿಯ ಮಗಳು ರೇಖಾ, ಮಗ ಅಜಯ (17) ಮತ್ತು ಕಿರಿಯ ಮಗಳು ಸರಸ್ವತಿ (14) ಆಗಿದ್ದಾರೆ. ರೇಖಾಳ ವಿವಾಹವನ್ನು ಮೂರು ವರ್ಷಗಳ ಹಿಂದೆ ಹಿರೇಹಣಗಿ ಗ್ರಾಮದ ನಾಗರಾಜ (27) ಎಂಬ ಯುವಕನೊಂದಿಗೆ ನೆರವೇರಿಸಲಾಗಿತ್ತು. ನಾಗರಾಜನು ಪಿರ್ಯಾದಿದಾರರ ತಂಗಿ ಬಸಮ್ಮಳ ಮಗನಾಗಿದ್ದು, ಸಂಬಂಧದ ಹತ್ತಿರದವರೇ ಆಗಿದ್ದರು. ಮದುವೆಯ ನಂತರದ ಪ್ರಾರಂಭಿಕ ಆರು ತಿಂಗಳು ರೇಖಾಳನ್ನು ಆಕೆಯ ಗಂಡ ಹಾಗೂ ಅತ್ತೆ ಮಾವಂದಿರು ಸಮರ್ಪಕವಾಗಿ ನೋಡಿಕೊಂಡಿದ್ದರು. ಆದರೆ ಕಾಲಕ್ರಮೇಣ ಹೊಲ ಮನೆ ಕೆಲಸದ ವಿಷಯವನ್ನು ನೆಪವಾಗಿಸಿಕೊಂಡು ರೇಖಾಳಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಲಾಗುತ್ತಿತ್ತು. ಈ ಕಿರುಕುಳ ದಿನೇ ದಿನೇ ತೀವ್ರಗೊಳ್ಳುತ್ತಾ ಹೋಗಿ, ರೇಖಾಳ ಬದುಕು ಅಸಹನೀಯವಾಗುವ ಮಟ್ಟಕ್ಕೆ ತಲುಪಿತ್ತು.


ಎಸ್ಪಿ ಅರುಣಾಂಶು ಗಿರಿ

ಈ ವಿಚಾರವನ್ನು ರೇಖಾ ತನ್ನ ಪೋಷಕರಿಗೆ ಹಲವು ಬಾರಿ ತಿಳಿಸಿದ್ದಾಳೆ. ಪಿರ್ಯಾದಿದಾರರು ಕುಟುಂಬದ ಗೌರವ ಹಾಗೂ ಸಂಬಂಧಗಳ ನೆಪದಲ್ಲಿ ವಿಷಯವನ್ನು ಶಾಂತಿಯುತವಾಗಿ ಬಗೆಹರಿಸಲು ಪ್ರಯತ್ನಿಸಿದ್ದು, ಇಬ್ಬರೂ ಕುಟುಂಬಗಳನ್ನು ಕೂಡಿ ಸಮಾಧಾನಪಡಿಸಿದ್ದರು. ಆದರೂ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗದೆ, ರೇಖಾ ಮತ್ತು ಆಕೆಯ ಗಂಡ ನಾಗರಾಜರ ನಡುವೆ ಆಗಾಗ ಕಲಹ ಉಂಟಾಗುತ್ತಲೇ ಇತ್ತು. ಕೊನೆಗೆ ಪರಿಸ್ಥಿತಿ ಹದಗೆಟ್ಟ ಹಿನ್ನೆಲೆಯಲ್ಲಿ, ರೇಖಾ ಮತ್ತು ನಾಗರಾಜರು ಹಿರೇಹಣಗಿ ಗ್ರಾಮದಲ್ಲೇ ಬೇರೆ ಮನೆಯನ್ನು ಮಾಡಿಕೊಂಡು ವಾಸಿಸಲು ನಿರ್ಧರಿಸಿದರು. ನಾಗರಾಜನು ತನ್ನ ತಂದೆ ಸಿದ್ದಪ್ಪ ಮತ್ತು ತಾಯಿ ಬಸಮ್ಮರಿಂದ ದೂರವಿದ್ದು, ಪತ್ನಿಯೊಂದಿಗೆ ಪ್ರತ್ಯೇಕ ಜೀವನ ಆರಂಭಿಸಿದ್ದನು.

ಆದರೆ ಈ ಪ್ರತ್ಯೇಕ ವಾಸವೂ ಸಮಸ್ಯೆಗೆ ಅಂತ್ಯವಲ್ಲದಾಯಿತು. ನಾಗರಾಜನ ತಂದೆ ಸಿದ್ದಪ್ಪ (ತಂದೆ ದುರುಗಪ್ಪ) ಆಗಾಗ ತನ್ನ ಮಗನ ಮನೆಗೆ ತೆರಳಿ, ರೇಖಾಳೊಂದಿಗೆ ಹೊಲ ಮನೆ ಕೆಲಸದ ವಿಚಾರವಾಗಿ ಜಗಳವಾಡುತ್ತಿದ್ದನು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಜಗಳಗಳು ಕೇವಲ ಮಾತಿನ ಮಟ್ಟಕ್ಕೆ ಸೀಮಿತವಾಗದೆ, ಅವಾಚ್ಯ ಶಬ್ದಗಳು, ಬೆದರಿಕೆಗಳು ಮತ್ತು ಮಾನಸಿಕ ಕಿರುಕುಳಕ್ಕೆ ತಿರುಗುತ್ತಿದ್ದವು ಎನ್ನಲಾಗಿದೆ. ಕುಟುಂಬದ ಹಿರಿಯನಾಗಿದ್ದ ಸಿದ್ದಪ್ಪನ ವರ್ತನೆ ರೇಖಾಳ ಮನಸ್ಸಿನಲ್ಲಿ ಭಯ ಮತ್ತು ಅಸುರಕ್ಷತೆಯ ಭಾವನೆ ಉಂಟುಮಾಡಿತ್ತು.

ಈ ನಡುವೆ ರೇಖಾ ನಾಲ್ಕು ತಿಂಗಳ ಗರ್ಭಿಣಿ ಎಂಬುದು ತಿಳಿದಾಗ, ಪಿರ್ಯಾದಿದಾರರು ಆಕೆಯ ಆರೋಗ್ಯ ಮತ್ತು ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ರೇಖಾಳನ್ನು ತಮ್ಮ ಮನೆಯಾದ ಚಿಕ್ಕಹಣಗಿ ಗ್ರಾಮಕ್ಕೆ ಕರೆದುಕೊಂಡು ಬಂದರು. ಪೋಷಕರ ಮನೆಯಲ್ಲಿ ಇದ್ದರೆ ಮಗಳು ಸುರಕ್ಷಿತವಾಗಿರುತ್ತಾಳೆ ಎಂಬ ನಂಬಿಕೆ ಅವರಿಗೆ ಇತ್ತು. ಆದರೆ ಈ ನಿರ್ಧಾರವೂ ದುರಂತವನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ದೂರಿನ ಪ್ರಕಾರ, ಸಿದ್ದಪ್ಪನು ಚಿಕ್ಕಹಣಗಿಯಲ್ಲಿರುವ ಪಿರ್ಯಾದಿದಾರರ ಮನೆಗೆ ಸಹ ಆಗಾಗ ಬಂದು, ರೇಖಾಳನ್ನು ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕುತ್ತಿದ್ದನು. ಈ ಎಲ್ಲ ಘಟನೆಗಳು ಕುಟುಂಬದೊಳಗಿನ ದ್ವೇಷ ಮತ್ತು ವೈಮನಸ್ಸು ಎಷ್ಟು ಆಳವಾಗಿತ್ತು ಎಂಬುದನ್ನು ತೋರಿಸುತ್ತವೆ.

ಘಟನೆಯ ದಿನವಾದ 28.01.2026 ರಂದು, ಪಿರ್ಯಾದಿದಾರರು ಮನೆಯ ಹೊರಗೆ ತೆರಳಿದ್ದ ಸಮಯದಲ್ಲಿ ರೇಖಾ ಒಬ್ಬಳೇ ಮನೆಯಲ್ಲಿ ಇದ್ದಳು. ಈ ಸಂದರ್ಭವನ್ನು ಗಮನಿಸಿದ ಸಿದ್ದಪ್ಪ, ಕೊಲೆ ಮಾಡುವ ಉದ್ದೇಶದಿಂದ ಪಿರ್ಯಾದಿದಾರರ ಮನೆಗೆ ಪ್ರವೇಶಿಸಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ. ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ರೇಖಾಳ ಮುಖಕ್ಕೆ ಮಾರಕವಾಗಿ ಇರಿದು, ಆಕೆಯನ್ನು ಗಂಭೀರವಾಗಿ ಗಾಯಗೊಳಿಸಿದ್ದಾನೆ. ನಂತರ ಸಿದ್ದಪ್ಪನು ಸ್ಥಳದಿಂದ ಪರಾರಿಯಾಗಿದ್ದಾನೆ ಎನ್ನಲಾಗಿದೆ. ಈ ಹಠಾತ್ ದಾಳಿಯಿಂದ ತೀವ್ರವಾಗಿ ಗಾಯಗೊಂಡ ರೇಖಾ, ಮನೆಯೊಳಗೆ ಉಳಿಯಲಾಗದೆ ಹೊರಗೆ ಬಂದಿದ್ದು, ಮನೆಯ ಹತ್ತಿರದಲ್ಲೇ ಇರುವ ಯಲ್ಲಮ್ಮ ಅವರ ಮನೆಯ ಮುಂದಿನ ಕಟ್ಟೆಯ ಬಳಿ ಕುಸಿದು ಬಿದ್ದಿದ್ದಾಳೆ.

ಸ್ಥಳೀಯರು ಮತ್ತು ಕುಟುಂಬದವರು ರೇಖಾಳನ್ನು ರಕ್ಷಿಸಲು ಯತ್ನಿಸಿದರೂ, ಗಾಯಗಳ ತೀವ್ರತೆಯಿಂದಾಗಿ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ನಾಲ್ಕು ತಿಂಗಳ ಗರ್ಭಿಣಿಯಾಗಿದ್ದ ಯುವತಿಯ ಈ ರೀತಿ ಅಮಾನುಷವಾಗಿ ಹತ್ಯೆಯಾಗಿರುವುದು ಗ್ರಾಮದಲ್ಲಿ ಶೋಕ ಮತ್ತು ಆಕ್ರೋಶವನ್ನುಂಟುಮಾಡಿದೆ. ಸುದ್ದಿ ತಿಳಿದ ತಕ್ಷಣ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ವಶಕ್ಕೆ ಪಡೆದು, ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಠಾಣೆಯಲ್ಲಿ ಠಾಣಾ ಗುನ್ನೆ ನಂ. 06/2026 ಅಡಿಯಲ್ಲಿ ಬಿ.ಎನ್.ಎಸ್. ಕಲಂ 85, 115(2), 351(2), 352, 103(1) ಸಹಿತ 3(5)ರಂತೆ ಪ್ರಕರಣ ದಾಖಲಿಸಲಾಗಿದೆ. ತನಿಖೆಯ ಭಾಗವಾಗಿ ಪೊಲೀಸರು ಆರೋಪಿಯಾದ ಸಿದ್ದಪ್ಪನನ್ನು ಬಂಧಿಸಿದ್ದು, ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣದ ಹಿನ್ನೆಲೆ, ಕುಟುಂಬದ ಒಳಗಿನ ಕಲಹ, ಹಿಂದಿನ ಕಿರುಕುಳದ ಆರೋಪಗಳು ಮತ್ತು ಸಾಕ್ಷ್ಯಾಧಾರಗಳ ಆಧಾರದಲ್ಲಿ ಪೊಲೀಸರು ಸವಿಸ್ತಾರ ತನಿಖೆ ಕೈಗೊಂಡಿದ್ದಾರೆ.


ಆರೋಪಿ ಸಿದ್ದಪ್ಪ

ಈ ದಾರುಣ ಘಟನೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಗೃಹಹಿಂಸೆ, ಕುಟುಂಬದೊಳಗಿನ ಅಸಹಿಷ್ಣುತೆ ಮತ್ತು ವಿವಾದಗಳನ್ನು ಸಮಯಕ್ಕೆ ಸರಿಯಾಗಿ ಕಾನೂನು ಮಾರ್ಗದಲ್ಲಿ ಪರಿಹರಿಸದಿದ್ದರೆ ಯಾವ ಮಟ್ಟಿಗೆ ಅಪಾಯಕಾರಿಯಾಗಿ ಪರಿಣಮಿಸಬಹುದು ಎಂಬುದಕ್ಕೆ ಜೀವಂತ ಉದಾಹರಣೆಯಾಗಿದೆ. ಮೃತ ರೇಖಾಳ ಕುಟುಂಬಕ್ಕೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಸ್ಥಳೀಯರಿಂದ ವ್ಯಕ್ತವಾಗಿದ್ದು, ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ☯

---

13 ☞

ಮೇರೆಗೆ ಮನೆಯೊಂದರ ಮೇಲೆ ಮೈಸೂರು ದಕ್ಷಿಣ ಪೊಲೀಸ್ ಠಾಣೆ ಪೊಲೀಸರು ದಾಳಿ ನಡೆಸಿದ್ದು, ಡ್ರಗ್ಸ್ ಬಳಸುವ ರಾಸಾಯನಿಕ ವಸ್ತುಗಳು ಪತ್ತೆಯಾಗಿವೆ. ಇನ್ಸ್‌ಪೆಕ್ಟರ್ ಎಂ.ಎಲ್. ಶೇಖರ್ ನೇತೃತ್ವದ ತಂಡ ದಾಳಿ ನಡೆಸಿದ್ದು. ಕಟ್ಟಡದ ಒಂದನೇ ಅಂತಸ್ತಿನ ಕೊಠಡಿಯ ವಾಡ್ರೂಬ್ನ ಸೆಲ್ಫ್‌ಗಳಲ್ಲಿ ನಾನಾ ಕಂಪನಿಯ 11 ಸ್ಮಾರ್ಟ್ ಎನ್ ಪತ್ತೆಯಾಗಿವೆ. ಕೆಳಭಾಗದಲ್ಲಿ ಕಪ್ಪು ಬಣ್ಣದ 360 ಗ್ರಾಂ ತೂಕದ ಪುಡಿ, 54 ಗ್ರಾಂ ತೂಕದ ಬಿಳಿ ಬಣ್ಣದ ಪುಡಿ, 957 ಗ್ರಾಂ ತೂಕದ ಬಿಳಿ ಬಣ್ಣದ ಪುಡಿ, 2933 ಗ್ರಾಂ ತೂಕದ ಗಸೆಗಸೆ ಮಾದರಿ ವಸ್ತು, ಕಪ್ಪು ಬಣ್ಣದ ಪೇಸ್ಟ್ ಮಾದರಿಯ ವಸ್ತು, ಬೋರಿಕ್ ಆಯಸಿಡ್ ಪತ್ತೆಯಾಗಿದೆ. ಇದರೊಂದಿಗೆ






13 ನೀಲಿ ಬಣ್ಣದ ಕ್ಯಾನ್‌ಗಳಲ್ಲಿ ಬಿಳಿ ಬಣ್ಣದ ಪೌಡರ್ ಸಿಕ್ಕಿದ್ದು, ಅವುಗಳನ್ನು ವಶಪಡಿಸಿಕೊಂಡು ಎಎಸ್‌ಎಲ್ ಪರೀಕ್ಷೆಗೆ ಕಳಿಸಿಕೊಟ್ಟಿದ್ದಾರೆ. ಮನೆ ಬಾಡಿಗೆ ಪಡೆದಿದ್ದ ಗಣಪತ್ ಲಾಲ್, ಅಲ್ಲಿ ವಾಸವಿದ್ದ ಭಜನ್ ಲಾಲ್ ಮತ್ತು ಆತನ ಪತ್ನಿ ವಿರುದ್ಧ ಎನ್ಡಿಪಿಎಸ್ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಒಟ್ಟಾರೆ ಈ ಪ್ರಕರಣ ಭಾರೀ ಸದ್ದು ಮಾಡುತ್ತಿದ್ದು, ರಾಜ್ಯದಲ್ಲಿಯೇ ಡ್ರಗ್ಸ್ ಫ್ಯಾಕ್ಟರಿ ನಡೆಯುತ್ತಿದ್ದರೂ ಏಕೆ ಗೊತ್ತಾಗಿಲ್ಲ. ಸರ್ಕಾರ ಏನು ಮಾಡುತ್ತಿದೆ ಎಂದು ಜನ ಕೇಳುತ್ತಿದ್ದಾರೆ. ಇಂತಹ ರಹಸ್ಯ ಜಾಲಗಳು ಇನ್ನೆಷ್ಟು ಇವೆಯೋ? ಸರ್ಕಾರ ಈ ನಿಟ್ಟಿನಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕಾಗಿದೆ. ☯

4 ☞

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿರುವಂತೆ, ಅವರು ನಿರ್ಗಮಿಸುವಾಗ 24,000 ಕೋಟಿ ರೂ. ಖಜಾನೆಯಲ್ಲಿ ಬಿಟ್ಟಿದ್ದಾರೆ. ಮೆಟ್ರೊದಲ್ಲಿ 2,000 ಕೋಟಿ ರೂ. ಹಣ ಇತ್ತು. ಆದರೆ ಕಾಂಗ್ರೆಸ್ ಬಂದ ನಂತರ ನಿರಂತರ ಭ್ರಷ್ಟಾಚಾರ ನಡೆದಿದೆ. ಮುಡಾದಲ್ಲಿ 3,000 ಕೋಟಿ ರೂ ಅಕ್ರಮ, ಅಬಕಾರಿ ಇಲಾಖೆಯಲ್ಲಿ 6,000 ಕೋಟಿ ರೂ. ಅಕ್ರಮ, ದಲಿತರ 43,000 ಕೋಟಿ ರೂ. ಅಕ್ರಮ ಬಳಕೆ, ಬೆಂಗಳೂರಿನ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯಲ್ಲಿ ಅಕ್ರಮ ನಡೆದಿದೆ. 30 ವರ್ಷಕ್ಕಾಗಿ ಮಾಡುವ ಕಾಂಕ್ರೀಟ್ ರಸ್ತೆ ಉದ್ಘಾಟನೆಗೆ ಮುನ್ನವೇ ಕಿತ್ತುಹೋಗಿದೆ ಎಂದರು. ಮಹಾತ್ಮ ಗಾಂಜಿಯವರನ್ನು ಬಳಸಿಕೊಂಡು ಕಾಂಗ್ರೆಸ್, ಪತ್ರಿಕೆಗಳಲ್ಲಿ ಜಾಹೀರಾತು ನೀಡಿದೆ. ಇದೇ ರೀತಿ ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ಭ್ರಷ್ಟಾಚಾರದ ಜಾಹೀರಾತು ಓಡಾಡುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಗುತ್ತಿಗೆದಾರ ಮುನೇಗೌಡ ಎಂಬುವರು ಆತ್ಮಹತ್ಯೆ ಪ್ರಯತ್ನ ಮಾಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೆ ಮುನ್ನ ತೆರಿಗೆ ಹಾಕಲ್ಲ ಎಂದು ಹೇಳಿ, ನಂತರ 56,000 ಕೋಟಿ ರೂ. ತೆರಿಗೆ ಹಾಕಿದ್ದಾರೆ. 40 ಪರ್ಸೆಂಟ್ ಕಮಿಶನ್‌ನಲ್ಲಿ ಉಳಿಸಿದ ಹಣದಿಂದ ಅಭಿವೃದ್ಧಿ ಮಾಡುತ್ತೇವೆ ಎಂದಿದ್ದಾರೆ. ಬಜೆಟ್‌ನಲ್ಲಿ 40% ಎಂದರೆ 1.60 ಲಕ್ಷ ಕೋಟಿ ರೂ. ಆಗುತ್ತದೆ. ಎರಡೂ ಸೇರಿದರೆ 2 ಲಕ್ಷ ಕೋಟಿ ರೂ.ಗೂ ಹೆಚ್ಚಾಗುತ್ತದೆ. ಈ ಹಣ ಎಲ್ಲಿದೆ? ಗುತ್ತಿಗೆದಾರರು 80 ಪರ್ಸೆಂಟ್ ಕಮಿಶನ್ ಬಗ್ಗೆ ಹೇಳಿರುವಾಗ, ಅದು ಸುಳ್ಳಾಗಿದ್ದರೆ ಕ್ರಮ ಕೈಗೊಳ್ಳಬೇಕಿತ್ತು. ಗುತ್ತಿಗೆದಾರರು ಗುತ್ತಿಗೆ ಪಡೆಯುವಾಗಲೇ 12% ಕಮಿಶನ್ ಹಾಗೂ ಬಿಲ್ ಮಂಜೂರಾತಿಗೆ 7% ನೀಡಬೇಕಾಗುತ್ತದೆ.

## ಅತಿ ಹೆಚ್ಚು ಸಾಲ

ಸಿಎಂ ಸಿದ್ದರಾಮಯ್ಯ ಅತಿ ಹೆಚ್ಚು ಅಂದರೆ 7.64 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. ಕೆಂಗಲ್ ಹನುಮಂತಯ್ಯನವರಿಂದ ಆರಂಭವಾಗಿ ಈವರೆಗಿನ ಮುಖ್ಯಮಂತ್ರಿಗಳಲ್ಲಿ ಸಿದ್ದರಾಮಯ್ಯ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯ 5,000 ಕೋಟಿ ರೂ. ಹಣ ನೀಡುತ್ತೇವೆಂದು ಹೇಳಿ ಇನ್ನೂ ನೀಡಿಲ್ಲ. ಆರ್ಥಿಕ ಇಲಾಖೆ ಇನ್ನೂ ಹಣ ನೀಡಿಲ್ಲವೆಂದರೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಏನು ಮಾಡುತ್ತಾರೆಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದರು. ಅನ್ನಭಾಗ್ಯದ 657 ಕೋಟಿ ರೂ. ಮೊತ್ತ ಜನರಿಗೆ ಸಿಕ್ಕಿಲ್ಲ. ಶಾಸಕರ ಪ್ರದೇಶಾಭಿವೃದ್ಧಿ ನೀಡದೆ ಶಾಸಕರು ಪರದಾಡುತ್ತಿದ್ದಾರೆ, ಅಂಗನವಾಡಿ ಸಹಾಯಕರ ಗೌರವಧನ ನೀಡದೆ ಅವರು ಪರದಾಡುತ್ತಿದ್ದಾರೆ, ನೆರೆ ಪರಿಹಾರ ನೀಡದೆ ರೈತರು ಪರದಾಡುತ್ತಿದ್ದಾರೆ. ಆದರೆ ಸಚಿವರು ಹಣ ಮಾಡುವುದರಲ್ಲಿ ಕಿತ್ತಾಟ ಮಾಡುತ್ತಿದ್ದಾರೆ. ಇದು ಇಲ್ಲಗಳ ಸರ್ಕಾರ. ಸರ್ಕಾರದ ಖಜಾನೆಯಲ್ಲಿ ಹೆಗ್ಗಣಗಳ ಕಾಟದಿಂದ ಯಾವ ಹಣವನ್ನೂ ನೀಡಲು ಆಗುತ್ತಿಲ್ಲ. ಸರ್ಕಾರದಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದ್ದು, ಧಾರವಾಡದಲ್ಲಿ 10 ಸಾವಿರ ಅಭ್ಯರ್ಥಿಗಳು ಹೋರಾಟ ಮಾಡುತ್ತಿದ್ದಾರೆ.

## ಕಲಾವಿದೆಗೆ ಅಪಮಾನ

ಕಲಾವಿದೆ ಬಿ.ಜಯಶ್ರೀ 5 ಗುಂಟೆ ಭೂಮಿ ದಾನ ಮಾಡಲು ಮೂರು ಬಾರಿ ಅರ್ಜಿ ನೀಡಿದ್ದರೂ, ಕಂದಾಯ ಇಲಾಖೆ ಸ್ಪಂದಿಸಿಲ್ಲ. ಕೊನೆಗೆ ಅವರು ಸರ್ವೆ ಕಚೇರಿಗೆ



ಹೋಗಿ ಕೇಳಿದಾಗ, ನಿಮ್ಮ ಕೆಲಸಕ್ಕಿಂತ ನಮ್ಮ ಮೇಲಧಿಕಾರಿಯ ಕೆಲಸ ಮುಖ್ಯ ಎನ್ನುತ್ತಾರೆ. ಅಧಿಕಾರಿ ಉಡಾಫೆಯಿಂದ ಮಾತಾಡುತ್ತಾರೆ ಎಂದು ಜಯಶ್ರೀ ಬೇಸರದಿಂದ ಹೇಳಿದ್ದಾರೆ. ದಾನ ಮಾಡುವ ಭೂಮಿಗೆ ಲಂಚ ಪಡೆಯಲು ಅವರನ್ನು ಅಲೆಸುತ್ತಿದ್ದಾರೆ. ಸರ್ಕಾರಕ್ಕೆ ಮರ್ಯಾದೆ ಇದ್ದರೆ ಆ ಅಧಿ ಕಾರಿಯನ್ನು ಕೂಡಲೇ ಅಮಾನತು ಮಾಡಬೇಕಿತ್ತು. ಮನೆ ಬಾಗಿಲಿಗೆ ಸರ್ಕಾರ ಎಂದು ಪ್ರಚಾರ ಮಾಡಿದರೂ ಕಲಾವಿದೆಯನ್ನು ಕಚೇರಿಗೆ ಕರೆಸಿದ್ದಾರೆ. ಇಂತಹ ಕಳ್ಳ ಅಧಿಕಾರಿಯ ವಿರುದ್ಧ ಸಿಎಂ ಸಿದ್ದರಾಮಯ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

## ಬೆಂಗಳೂರಲ್ಲಿ ಕಸ

ಬೆಂಗಳೂರನ್ನು 5 ಭಾಗ ಮಾಡಿದ ಬಳಿಕ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ಅಧಿಕಾರಿಗಳಿಗೆ ಆಗುತ್ತಿಲ್ಲ. ಇದರಿಂದಾಗಿ ಕಸ ಹಾಗೂ ರಸ್ತೆ ಗುಂಡಿ ಹೆಚ್ಚಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ 15 ದಿನಗಳಲ್ಲಿ ಗುಂಡಿ ಮುಚ್ಚುತ್ತೇವೆ, ಬ್ರ್ಯಾಂಡ್ ಬೆಂಗಳೂರು ಮಾಡುತ್ತೇವೆ ಎಂದರು. ನಮಗೆ ಕೆಂಪೇಗೌಡರ ಅಥವಾ ಎಸ್.ಎಂ.ಕೃಷ್ಣ ಅವರ ಬೆಂಗಳೂರನ್ನು ನೀಡಿದರೆ ಸಾಕಾಗಿದೆ. ಡಿಸಿಎಂ ಡಿ.ಕೆ. ಶಿವಕುಮಾರ್ ಕಾಣೆಯಾಗಿದ್ದಾರೆ.

'ಕಾಣದಂತೆ ಮಾಯವಾದನು ನಮ್ಮ ಶಿವ' ಎಂಬ ಹಾಡಿನಂತೆ ಅವರು ನಾಪತ್ತೆಯಾಗಿದ್ದಾರೆ. ಅಧಿಕಾರಕ್ಕಾಗಿ ಕಿತ್ತಾಟ ನಿಲ್ಲದೇ ಇದ್ದರೆ ಅಧಿ ಕಾರಿಗಳು ಕೆಲಸ ಮಾಡಲ್ಲ. ನಾವು ಹಾಲು ಸಕ್ಕರೆಯಂತಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ಇದು ಹಾಲಾಹಲವಾಗಿದೆ. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಲು ಪದೇ ಪದೆ ದೆಹಲಿಗೆ ಹೋಗುತ್ತಿದ್ದಾರೆ. ಪವರ್ ಪಾಲಿಟಿಕ್ಸ್ ನಿಂದಾಗಿ ಅಧಿಕಾರಿಗಳ ಮೇಲೆ ಹಿಡಿತವಿಲ್ಲ.

## ಕಾನೂನು ಸುವ್ಯವಸ್ಥೆ

ನಮ್ಮ ಪೊಲೀಸ್ ವ್ಯವಸ್ಥೆ ಮಾದರಿ ಎಂದು ಗೃಹ ಇಲಾಖೆಯಿಂದ ರಾಜ್ಯಪಾಲರ ಭಾಷಣದಲ್ಲಿ ಬರೆಸಲಾಗಿದೆ. ಇತ್ತೀಚೆಗೆ ಒಬ್ಬ ತ್ರಿಬಲ್ ಸ್ಟಾರ್ ಎಸ್‌ಪಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತದಿಂದ ಬಂಧಿಸಿದ್ದು, ಆತ ಕಿರುಚುತ್ತಿರುವ ವೀಡಿಯೋ ವೈರಲ್ ಆಗಿದೆ. ಇವರ ಮೂಲಕ ಪೊಲೀಸ್ ಪೆರೇಡ್ ಮೈದಾನ ಲಂಚದ ಕೇಂದ್ರವಾಗಿದೆ. ಜಯನಗರದಲ್ಲಿ ಬ್ಯಾಂಕ್ ಹಣ ಲೂಟಿಯಾದಾಗ ಅದರಲ್ಲಿ ಒಬ್ಬ ಪೊಲೀಸ್ ಭಾಗಿಯಾಗಿದ್ದ. ಡ್ರಗ್ಸ್ ಮಾಫಿಯಾ ಪತ್ತೆ ಮಾಡುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎಂದರು.

2023ಕ್ಕೆ ಹೋಲಿಸಿದರೆ 2024 ರಲ್ಲಿ, 739 ಅತ್ಯಾಚಾರ ಪ್ರಕರಣ ಕಂಡುಬಂದಿದ್ದು, ಶೇ.23% ಏರಿಕೆಯಾಗಿದೆ. ಪೋಕ್ಸೋ ಕೇಸ್‌ಗಳು 5% ರಷ್ಟು ಹೆಚ್ಚಿದೆ. 100 ರಷ್ಟು ವರದಕ್ಷಿಣೆ ಸಾವಾಗಿದೆ. ಸೈಬರ್ ಅಪರಾಧಗಳಲ್ಲಿ ಕರ್ನಾಟಕ ನಂ.1 ಆಗಿದ್ದು, 5,473 ಕೋಟಿ ರೂ. ವಂಚನೆಯಾಗಿದೆ. 1,131 ಕೊಲೆ ಪ್ರಕರಣ ನಡೆದಿದೆ. ಡ್ರಗ್ ಫ್ಯಾಕ್ಟರಿಗಳು ಪತ್ತೆಯಾಗುತ್ತಿದೆ. 2024 ರಲ್ಲಿ 5,200 ಡ್ರಗ್ಸ್ ಪ್ರಕರಣ ನಡೆದಿದ್ದು, 31.87 ಕೋಟಿ ರೂ. ಮೌಲ್ಯದ ಮಾದಕ ವಸ್ತು ವಶಕ್ಕೆ ಪಡೆಯಲಾಗಿದೆ. 2024 ರಲ್ಲಿ 3,961, 2025 ರಲ್ಲಿ 4,177 ಮಂದಿಯನ್ನು ಮಾದಕ ವಸ್ತುಗಳ ಕಳ್ಳಸಾಗಣೆಯಡಿ ಬಂಧಿಸಲಾಗಿದೆ. ಇದರಲ್ಲಿ 300400 ಪೊಲೀಸರು ಕೂಡ ಇದ್ದಾರೆ. ಇಷ್ಟಾದರೂ ಶಾಂತಿಯ ತೋಟ ಎನ್ನುತ್ತಾರೆ.

33 ತಿಂಗಳಲ್ಲಿ 9 ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 15 ಕ್ಕೂ ಅಧಿ ಕ ಅಧಿ ಕಾರಿಗಳ ಅಸಹಜ ಸಾವಾಗಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್, ಪಿಎಸ್‌ಐ ಪರಶುರಾಮ್ ಮೊದಲಾದವರಿಗೆ ನ್ಯಾಯ ಸಿಕ್ಕಿಲ್ಲ. ಒಬ್ಬ ಗ್ರಂಥಪಾಲಕಿ ವೇತನ ಇಲ್ಲದೆ ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಮಹಿಳಾ ಪೌರಾಯುಕ್ತೆಗೆ ಕೆಟ್ಟ ಮಾತುಗಳಲ್ಲಿ ನಿಂದಿಸಿ ಬೆಂಕಿ ಹಾಕುತ್ತೇನೆಂದು ಬೆದರಿಕೆ ಹಾಕಿದ್ದೇನೆ. ಕೇವಲ ಸಿಗರೇಟ್ ಸೇದುವ ಚಿತ್ರದ ಬ್ಯಾನರ್ ವಿಚಾರಕ್ಕೆ ನಿಂದಿಸಲಾಗಿದೆ. ಜೆಡಿಎಸ್ ಶಾಸಕಿ ಕರೆಮ್ಮ ನಾಯಕ್‌ಗೆ ಬೆದರಿಕೆ ಹಾಕಲಾಗಿದೆ.

## ಕೋಗಿಲು ಕ್ರಾಸ್ ಒತ್ತುವರಿ

ಕೋಗಿಲು ಕ್ರಾಸ್‌ನಲ್ಲಿ ಒತ್ತುವರಿ ತೆರವು ಮಾಡಿದ್ದಕ್ಕೆ ಕೇರಳ ಸಿಎಂ ಬುಲ್ಡೋಜರ್ ಸರ್ಕಾರವೆಂದು ಟೀಕೆ ಮಾಡಿದಾಗ, ಸಿಎಂ ಸಿದ್ದರಾಮಯ್ಯ ಉಲ್ಟಾ ಹೊಡೆದು ನಾಳೆಯೇ ಮನೆ ನೀಡುತ್ತೇನೆ ಎಂದು ಘೋಷಿಸಿದರು. ಪಾಕಿಸ್ತಾನದ ವಕ್ತಾರ ಕರ್ನಾಟಕದಲ್ಲಿ ಮುಸ್ಲಿಮರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿಕೆ ನೀಡಿದ್ದಾರೆ. ಅವರಿಗೆ ಇಲ್ಲಿಂದಲೇ ಯಾರೋ ಸಂದೇಶ ನೀಡಿದ್ದಾರೆ. ಕಂಟೋನ್‌ಮೆಂಟ್ ಬಳಿ ಇದ್ದ ಹುಡುಗಿ ಪರೀಕ್ಷೆ ಬರೆದು ವಾಪಸ್ ಬರುವಾಗ ಆಕೆಯ ಮನೆ ತೆರವು ಮಾಡಲಾಗಿತ್ತು. ಈ ಕನ್ನಡಿಗರಿಗೆ ಸರ್ಕಾರ ಸಹಾಯ ಮಾಡಿಲ್ಲ. ಕೇರಳದ ಒಬ್ಬ ಶಾಸಕರು ಇಲ್ಲಿಗೆ ಬಂದು ಸರ್ಕಾರವನ್ನು ಹಿಗ್ಗಾಮುಗ್ಗ ಬೈದು ಹೋಗಿದ್ದಾರೆ. ಬಾಂಗ್ಲಾ ನಿವಾಸಿಗಳ ವಿರುದ್ಧ ಪ್ರಶ್ನೆ ಮಾಡಿದ್ದಕ್ಕೆ ಕಾರ್ಯಕರ್ತ ಪುನೀತ್ ಕೆರೆಹಳ್ಳಿಯನ್ನು ಬಂಧಿಸಿದ್ದಾರೆ. ಆದರೆ ಆ ಶಾಸಕರ ವಿರುದ್ಧ ಕೇಸ್ ದಾಖಲಿಸಿಲ್ಲ. ರಾಜ್ಯದಲ್ಲಿ ಎಲ್ಲ ಕಡೆ ಬಾಂಗ್ಲಾ ವಲಸಿಗರಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. 3 ಸಾವಿರ ರೂ. ಕೊಟ್ಟರೆ ಅವರಿಗೆ ಗುರುತಿನ ಚೀಟಿ ದೊರೆಯುತ್ತದೆ. ಚಿಕ್ಕಮಗಳೂರು, ಕೊಡಗು ಮೊದಲಾದ ಭಾಗಗಳಲ್ಲಿ ಇವರೇ ಇದ್ದಾರೆ. ಕೋಗಿಲು ಕ್ರಾಸ್‌ನಲ್ಲಿ ಕೂಡ ಇವರೇ ಇದ್ದಾರೆ. 34 ಜನರು ಇಲ್ಲಿಯವರೇ ಎಂದು ಮೊದಲು ಹೇಳಿದ್ದರೂ, ನಂತರ ಅವರು ಕೂಡ ವಲಸಿಗರೇ ಎಂದು ತಿಳಿದುಬಂದಿದೆ. ಬಾಂಗ್ಲಾ ದೇಶದವರಿಗೆ ಮನೆ ನೀಡಲು ಸರ್ಕಾರಕ್ಕೆ ಯಾಕೆ ಇಷ್ಟು ಆತುರ? ವೋಟಿಗಾಗಿ ಹೀಗೆ ಮಾಡಿದರೆ ಮುಂದೆ ಅನಾಹುತವಾಗಲಿದೆ.

ಗೋವಿಂದರಾವ್ ಸಮಿತಿಯ ವರದಿಯಲ್ಲಿ, ಕೋಟ್ಯಂತರ ರೂಪಾಯಿ ಅನುದಾನವಿದ್ದರೂ ಅಭಿವೃದ್ಧಿಯಾಗಿಲ್ಲ ಎನ್ನಲಾಗಿದೆ. ನಂಜುಂಡಪ್ಪ ವರದಿಯಲ್ಲಿ 114 ತಾಲೂಕುಗಳು ಹಿಂದುಳಿದಿವೆ ಎಂದಿತ್ತು. ಸಿದ್ದರಾಮಯ್ಯ 16 ಬಜೆಟ್ ಮಂಡಿಸಿದ ನಂತರವೂ ಈ ತಾಲೂಕುಗಳ ಸಂಖ್ಯೆ 177 ಆಗಿದೆ. ಈವರೆಗೆ ಬಿಜೆಪಿ ಎಂಟೂವರೆ ವರ್ಷ ಆಡಳಿತ ನಡೆದಿದೆ. ದೀರ್ಘವಾಗಿ ಕಾಂಗ್ರೆಸ್ ಆಡಳಿತ ಮಾಡಿದ್ದರೂ ಅಭಿವೃದ್ಧಿಯಾಗಿಲ್ಲ... ಎಂಬಿತ್ಯಾದಿಯಾಗಿ ಆರೋಪಿಸಿದ್ದಾರೆ. ☯

# ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕಕ್ಕೆ ಇಬ್ಬರು ಪೊಲೀಸ್ ಅಧಿಕಾರಿಗಳು ಭಾಜನ

ಪೊಲೀಸ್ ಸೇವೆಯಲ್ಲಿ ನಿಷ್ಠೆ, ಕಾರ್ಯಕ್ಷಮತೆ ಹಾಗೂ ಸಾರ್ವಜನಿಕ ಸೇವೆಗೆ ಸಲ್ಲಿಸಿದ ಅಮೂಲ್ಯ ಕೊಡುಗೆಯನ್ನು ಗುರುತಿಸಿ, ಹಲಸೂರು ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಟಿ. ರಂಗಪ್ಪ ಹಾಗೂ ಮಡಿವಾಳ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಎ. ಮೊಹಮ್ಮದ್ ಅವರಿಗೆ ರಾಷ್ಟ್ರಪತಿಗಳು ಪ್ರದಾನ ಮಾಡುವ ಶ್ಲಾಘನೀಯ ಸೇವಾ ಪದಕ ಘೋಷಿಸಲಾಗಿದೆ.

ಭಾರತದ ಪೊಲೀಸ್ ಪಡೆಗೆ ಈ ಗೌರವ ಅತ್ಯಂತ ಪ್ರತಿಷ್ಠಿತವಾಗಿದ್ದು, ಅಪರಾಧ ನಿಯಂತ್ರಣ, ಕಾನೂನು ಸುವ್ಯವಸ್ಥೆ ಕಾಪಾಡುವಿಕೆ, ಸಾರ್ವಜನಿಕರೊಂದಿಗೆ ಉತ್ತಮ ಸಂವಹನ ಹಾಗೂ ಕರ್ತವ್ಯದ ಮೇಲಿನ ಅಪಾರ ಬದ್ಧತೆಗಾಗಿ ಆಯಾ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಟಿ. ರಂಗಪ್ಪ ಹಾಗೂ ಎಂ.ಎ. ಮೊಹಮ್ಮದ್ ಅವರ ಸೇವೆಯನ್ನು ಕೇಂದ್ರ ಸರ್ಕಾರ ವಿಶೇಷವಾಗಿ ಮೆಚ್ಚಿದೆ.

ಹಲಸೂರು ಉಪವಿಭಾಗದ ಎಸಿಪಿಯಾಗಿ ಕಾರ್ಯನಿರ್ವಹಿಸುತ್ತಿರುವ ಟಿ. ರಂಗಪ್ಪ ಅವರು ತಮ್ಮ ಸೇವಾ ಅವಧಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದಾರೆ. ಸಂವೇದನಶೀಲ ಪ್ರದೇಶಗಳಲ್ಲಿ ಶಾಂತಿ ಕಾಪಾಡುವಿಕೆ, ಅಪರಾಧ ಪ್ರಕರಣಗಳ ಶೀಘ್ರ ಪತ್ತೆ, ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸುವಲ್ಲಿ ಅವರ ಪಾತ್ರ ಗಮನಾರ್ಹವಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಶೈಲಿ ಹಾಗೂ ಶಿಸ್ತಿನ ಆಡಳಿತದಿಂದ ಅವರು ಇಲಾಖೆಯೊಳಗೆ ಉತ್ತಮ ಹೆಸರು ಗಳಿಸಿದ್ದಾರೆ.



ಮತ್ತೊಂದೆಡೆ, ಮಡಿವಾಳ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಂ.ಎ. ಮೊಹಮ್ಮದ್ ಅವರು ಅಪರಾಧ ನಿಯಂತ್ರಣದಲ್ಲಿ ತೋರಿದ ಕಾರ್ಯಕ್ಷಮತೆಗಾಗಿ ಗುರುತಿಸಿಕೊಂಡಿದ್ದಾರೆ. ಗಂಭೀರ ಪ್ರಕರಣಗಳ ತನಿಖೆಯಲ್ಲಿ ವೃತ್ತಿಪರತೆ, ಮಹಿಳೆಯರು ಮತ್ತು ದುರ್ಬಲ ವರ್ಗಗಳ ರಕ್ಷಣೆಗೆ ಒತ್ತು, ಸಮುದಾಯ ಪೊಲೀಸ್ ಚಟುವಟಿಕೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಇವರ ಸೇವೆಯ ಪ್ರಮುಖ ಅಂಶಗಳಾಗಿವೆ. ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಭದ್ರತೆ ಕಾಪಾಡುವಲ್ಲಿ ಅವರು ಕೈಗೊಂಡ ಕ್ರಮಗಳು ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿವೆ.

ಈ ಗೌರವ ಘೋಷಣೆಯಿಂದ ಬೆಂಗಳೂರು ನಗರ ಪೊಲೀಸ್ ಇಲಾಖೆಯಲ್ಲಿ ಸಂತಸ ವ್ಯಕ್ತವಾಗಿದ್ದು, ಸಹೋದ್ಯೋಗಿಗಳು ಹಾಗೂ ಹಿರಿಯ ಅಧಿಕಾರಿಗಳು ಪದಕಕ್ಕೆ ಭಾಜನರಾದ ಇಬ್ಬರೂ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಅವರ ಸಾಧನೆ ಯುವ ಪೊಲೀಸ್ ಸಿಬ್ಬಂದಿಗೆ ಪ್ರೇರಣೆಯಾಗಿದ್ದು, ಕರ್ತವ್ಯದ ಮೇಲಿನ ನಿಷ್ಠೆ ಮತ್ತು ಜನಸೇವೆಯ ಮೌಲ್ಯವನ್ನು ಮತ್ತೊಮ್ಮೆ ನೆನಪಿಸಿದೆ.

ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕವು ಪೊಲೀಸ್ ಸೇವೆಯಲ್ಲಿನ ಶ್ರೇಷ್ಠತೆಯನ್ನು ಗೌರವಿಸುವ ಸಂಕೇತವಾಗಿದ್ದು, ಸಮಾಜದ ಶಾಂತಿ, ಭದ್ರತೆ ಹಾಗೂ ನ್ಯಾಯದ ರಕ್ಷಣೆಗೆ ಶ್ರಮಿಸುವ ಅಧಿಕಾರಿಗಳ ಕಾರ್ಯವನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸುವ ಮಹತ್ವದ ಗೌರವವಾಗಿದೆ.

-ಹಿರಿಯೂರು ರಫೀಕ್

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 1.2.2026

# ಅಣ್ಣಾವ್ರು ದೇವತಾ ಮನುಷ್ಯ ಆದದ್ದು ಏಕೆಂದರೆ...



'ಈ ತರನಾ ಊಟ ಹಾಕೋದು... ಆದರೆ ನಾನು ಈ ಊಟ ಮಾಡಲ್ಲ, ನನಗೆ ಊಟ ಬೇಡ!' ಎಂದು ಪ್ರೊಡಕ್ಷನ್ ಮ್ಯಾನೇಜರ್ ಮೇಲೆ ರೇಗಾಡಿದರು ಡಾ. ರಾಜ್‌ಕುಮಾರ್! ಅಣ್ಣಾವ್ರ ಈ ಹಠ ನೋಡಿ ಅಲ್ಲಿದ್ದ ಎಲ್ರೂ ಬೆಚ್ಚಿಬಿದ್ರು! ಅಂದು ಅಲ್ಲಿ ನಡೆದಿದ್ದು ಕಂಡು ಇಡೀ ಚಿತ್ರರಂಗವೇ ಬೆಚ್ಚಿಬಿದ್ದಿತ್ತು!

ಅದು 70ರ ದಶಕ. ಬಿಸಿಲ ನಾಡಿನಲ್ಲಿ 'ಗಂಧದ ಗುಡಿ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ದಟ್ಟವಾದ ಕಾಡು, ಸುಡುವ ಬಿಸಿಲು, ನೂರಾರು ಜನ ಲೈಟ್ ಬಾಯ್ಸ್, ಸೆಟ್ ಹುಡುಗರು ಬೆವರು ಸುರಿಸಿ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ 1:30. ಊಟದ ಸಮಯ. ಹೊಟ್ಟೆ ತಾಳ ಹಾಕುತ್ತಿತ್ತು. 'ಬ್ರೇಕ್' ಎಂದು ನಿರ್ದೇಶಕರು ಹೇಳಿದ್ದೇ ತಡ, ಹಸಿದ ಕಾರ್ಮಿಕರೆಲ್ಲರೂ ಊಟದ ಸಾಲಿಗೆ ಓಡಿದರು. ಅತ್ತ ಕಡೆ, ಪ್ರೊಡಕ್ಷನ್ ಮ್ಯಾನೇಜರ್ ಒಬ್ಬರು ಅತೀ ಉತ್ಸಾಹದಿಂದ, ಒಂದು ದೊಡ್ಡ ಬೆಳ್ಳಿ ತಟ್ಟೆಯಂತಹ ಪಾತ್ರೆಯಲ್ಲಿ ಬಗೆಬಗೆಯ ಭಕ್ಷ್ಯಗಳನ್ನು, ತುಪ್ಪ ಸುರಿಯಲಾದ ಸ್ಪೆಷಲ್ ಬಿರಿಯಾನಿ, ಸ್ವೀಟ್ಸ್ ಎಲ್ಲವನ್ನೂ ಜೋಡಿಸಿಕೊಂಡು, ರಾಜಕುಮಾರ್ ಅವರು ವಿಶ್ರಾಂತಿ ಪಡೆಯುತ್ತಿದ್ದ ಟೆಂಟ್ ಕಡೆಗೆ ಓಡಿದರು. ಅಣ್ಣಾವ್ರಿಗೆ ರಾಜಾತಿಥ್ಯ ಕೊಡಬೇಕು ಎಂಬುದು ಆ ಮ್ಯಾನೇಜರ್ ಆಸೆ.

ರಾಜ್‌ಕುಮಾರ್ ಟೆಂಟ್ ಒಳಗೆ ಕುಳಿತಿದ್ದರು. ಮ್ಯಾನೇಜರ್ ನಗುತ್ತಾ, 'ಅಣ್ಣಾವ್ರೇ, ನಿಮಗೋಸ್ಕರ ಸ್ಪೆಷಲ್ ಊಟ. ಪಕ್ಕದ ಟೌನ್‌ನಿಂದ ನಿಮಗಂತಾನೇ ಮಾಡಿಸ್ಕೊಂಡು ಬಂದಿದ್ದೀನಿ' ಎಂದು ಟೇಬಲ್ ಮೇಲೆ ಇಟ್ಟರು. ಘಮಘಮಿಸುವ ಆ ಊಟ ನೋಡಿ ಯಾರಿಗಾದರೂ ಬಾಯಲ್ಲಿ ನೀರೂರುತ್ತಿತ್ತು. ರಾಜ್‌ಕುಮಾರ್ ಒಮ್ಮೆ ಆ ಊಟವನ್ನು ನೋಡಿದರು. ನಂತರ ಟೆಂಟ್ ಪರದೆಯನ್ನು ಸರಿಸಿ, ದೂರದಲ್ಲಿ ಬಿಸಿಲಿನಲ್ಲಿ ಸಾಲಾಗಿ ನಿಂತು ಅಲ್ಯೂಮಿನಿಯಂ ತಟ್ಟೆಯಲ್ಲಿ ನೀರು ಸಾಂಬಾರುಅನ್ನ ತಿನ್ನುತ್ತಿದ್ದ ಲೈಟ್ ಬಾಯ್ಸ್ ಕಡೆ ನೋಡಿದರು. ಕ್ಷಣಾರ್ಧದಲ್ಲಿ ಅಲ್ಲೊಂದು ಪ್ರಳಯವೇ ನಡೆದುಹೋಯ್ತು!

ಇದ್ದಕ್ಕಿದ್ದಂತೆ ರಾಜ್‌ಕುಮಾರ್ ಅವರ ಮುಖ ಕೆಂಪಾಯ್ತು. ಟೇಬಲ್ ಮೇಲಿದ್ದ ಆ ಸ್ಪೆಷಲ್ ಊಟದ ತಟ್ಟೆಯನ್ನು ಪಕ್ಕಕ್ಕೆ ತಳ್ಳಿ, ಗುಡುಗುವ ಧ್ವನಿಯಲ್ಲಿ ಕೂಗಿದರು. 'ಮ್ಯಾನೇಜರೇ... ಏನಿದು?'

ಮ್ಯಾನೇಜರ್ ಗಡಗಡ ನಡುಗುತ್ತಾ, 'ಸಾರ್.. ಅದು.. ನಿಮಗೋಸ್ಕರ ಸ್ಪೆಷಲ್ ಆಗಿ...' ಎಂದು ತೊದಲಿದರು.


ಆಗ ಅಣ್ಣಾವ್ರು ಆಡಿದ ಮಾತುಗಳು ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಎದೆಯಲ್ಲೂ ನಾಟುವಂತಿತ್ತು. 'ನಾನೇನು ಆಕಾಶದಿಂದ ಇಳಿದು ಬಂದಿದ್ದೀನಾ? ಅಥವಾ ನಾನೇನು ಮಹಾರಾಜನ? ಬೆಳಿಗ್ಗೆಯಿಂದ ಬಿಸಿಲಲ್ಲಿ ಬೆವರು ಸುರಿಸಿ ಮೈಮುರಿದು ದುಡಿತಿರೋದು ಆ ಹುಡುಗರು. ಅವರಿಗೆ ಬರೀ ರಸಂ ಅನ್ನನಾ? ಫ್ಯಾನ್ ಕೆಳಗೆ ಕೂರೋ ನಮಗೆ ತುಪ್ಪದೂಟನಾ? ನಮಗೇನು ಎರಡು ಹೊಟ್ಟೆ ಇದ್ಯಾ ಮ್ಯಾನೇಜರೇ? ನಾಚಿಕೆಯಾಗಲ್ವಾ ನಿಮಗೆ?'


ಸೆಟ್‌ನಲ್ಲಿದ್ದ ನೂರಾರು ಜನ ಉಸಿರು ಬಿಗಿಹಿಡಿದು ನೋಡುತ್ತಿದ್ದರು. ಶಾಂತಮೂರ್ತಿ ಇಂದು ರೌದ್ರಾವತಾರ ತಾಳಿದ್ದರು.

ರಾಜ್‌ಕುಮಾರ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. 'ಈಗಲೇ ಈ ಊಟವನ್ನು ಎತ್ತಾಕಿ. ಆ ಹುಡುಗರಿಗೆ ಏನು ಅಡುಗೆ ಮಾಡಿದ್ದೀರೋ, ಅದೇ ಅನ್ನಸಾಂಬಾರ್ ನನಗೂ ತನ್ನಿ. ನನ್ನ ಮನೆಯವರು (ಚಿತ್ರತಂಡದವರು) ಕಷ್ಟದ ಊಟ ಮಾಡ್ತಿದ್ರೆ, ನಾನಿಲ್ಲಿ ರಾಜಭೋಗ ಮಾಡೋಕೆ ಬಂದಿಲ್ಲ. ಇನ್ಮುಂದೆ ಈ ಸೆಟ್‌ನಲ್ಲಿ ಪ್ರತಿಯೊಬ್ಬರಿಗೂ ಒಂದೇ ಊಟ ಇರಬೇಕು. ಇಲ್ಲಾಂದ್ರೆ, ನಾನು ಊಟ ಮುಟ್ಟೋದಿಲ್ಲ!' ಎಂದು ಖಡಕ್ ಎಚ್ಚರಿಕೆ ಕೊಟ್ಟರು! ಮರುಮಾತಾಡದ ಮ್ಯಾನೇಜರ್, ಆ ಲೈಟ್ ಬಾಯ್ಸ್ ತಿನ್ನುತ್ತಿದ್ದ ಅದೇ ಸಾಮಾನ್ಯ ಊಟವನ್ನು ತಂದುಕೊಟ್ಟರು. ರಾಜ್‌ಕುಮಾರ್ ಅದನ್ನು ತೃಪ್ತಿಯಿಂದ ಪ್ರೀತಿಯಿಂದ ಉಂಡರು. ಅಂದು ಅಣ್ಣಾವ್ರು ಹಾಕಿಕೊಟ್ಟ ಆ 'ಸಮಾನತೆಯ ಪಂಕ್ತಿ', ಇಂದಿಗೂ ಅವರ ಬ್ಯಾನರ್‌ನಲ್ಲಿ ಚಾಚೂ ತಪ್ಪದೆ ಪಾಲನೆಯಾಗುತ್ತಿದೆ.

ಹೀರೋಗೊಂದು ನ್ಯಾಯ, ಲೈಟ್ ಬಾಯ್ ಗೊಂದು ನ್ಯಾಯ ಅನ್ನೋದು ಅಣ್ಣಾವ್ರ ಡಿಕ್ಷನರಿಯಲ್ಲೇ ಇರಲಿಲ್ಲ. ಅದಕ್ಕೆ ಹೇಳೋದು, ಇಂಥವರು ನಟರಲ್ಲ, 'ದೇವತಾ ಮನುಷ್ಯ' ಎಂದು! ☯







# ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್‌ನಲ್ಲಿ ರಾಜ್ ಚಿತ್ರಗಳ ಸುಗ್ಗಿ!

ಈ ಭಾರಿ 77ನೇ ಇಂಟರ್ ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಸಾಧು ಮಹಾರಾಜ್ ಮತ್ತು ಪ್ರಕಾಶ್ ರೈ ಸಾರಥ್ಯದಲ್ಲಿ ಲುಲು ಮಾಲ್‌ನಲ್ಲಿ ನಡೆಯುತ್ತಿದೆ. ಜನವರಿ 30ರಿಂದ ಫೆಬ್ರವರಿ 06 ರವರೆಗೆ ಸಿನಿಮಾ ಹಬ್ಬವಿದೆ. ಇಡೀ ಪ್ರಪಂಚದ ಸುಮಾರು 200 ಭಾಷೆಗಳ ಪ್ರಶಸ್ತಿ ಪುರಸ್ಕೃತ ಸಿನಿಮಾಗಳು ನೋಡಲು ಲಭ್ಯ. ಈ ಭಾರಿಯ ವಿಶೇಷ ಏನೆಂದರೆ, ಕನ್ನಡ ಚಿತ್ರಗಳು ಜಾಸ್ತಿಯಾಗಿಯೇ ಇದ್ದಾವೆ. ಅದರಲ್ಲೂ ಚಂದನವನದ ಎವರ್ ಗ್ರೀನ್ ಸೂಪರ್ ಸ್ಟಾರ್ ಡಾ. ರಾಜ್‌ಕುಮಾರ್ ಅಭಿನಯದ ಚಿತ್ರಗಳು ವೀಕ್ಷಕರ ಕಣ್ಮನ ಸೆಳೆಯುತ್ತಿರುವುದು.



ಭಕ್ತ ಕನಕದಾಸ, ಸಂದ್ಯಾರಾಗ, ಬಂಗಾರದ ಮನುಷ್ಯ, ಪ್ರೇಮದ ಕಾಣಿಕೆ, ಶಂಕರ್‌ಗುರು, ಜೀವನ ಚೈತ್ರ... ಮುಂತಾದ ಸಿನಿಮಾಗಳು ಹೌಸ್‌ಫುಲ್!! ಈ ಪೈಕಿ ಬಂಗಾರದ ಮನುಷ್ಯ ಮತ್ತು ಪ್ರೇಮದ ಕಾಣಿಕೆ ಟೂರಿಂಗ್ ಟಾಕೀಸ್ ಶೈಲಿಯಲ್ಲಿ ಲುಲು ಮಾಲ್ ಮುಂಭಾಗದ ಆವರಣದಲ್ಲಿ ಸಾರ್ವಜನಿಕವಾಗಿ ಪ್ರದರ್ಶನ ಕಂಡವು. ಉಳಿದಂತೆ, ಸಾಹಸ ಸಿಂಹ ವಿಷ್ಣುವರ್ಧನ್ ಅವರ ಬಂಧನ, ದಿ. ಶಂಕರ್ ನಾಗ್ ಅಭಿನಯದ ಆಕ್ಸಿಡೆಂಟ್, ಏಳುಮಲೆ, ಮುಂಗಾರು ಮಳೆ, ಒಂದಾನೊಂದು ಕಾಲದಲ್ಲಿ, ತಾಯಿ ಸಾಹೇಬ, ಕನಸೆಂಬೋ ಕುದುರೆಯನೇರಿ, ಹೇಮಾವತಿ, ಮೃಗತೃಷ್ಣ, ಎಕ್ಸ್ ಅಂಡ್ ವೈ, ಎರಡೊಂದ್ಲಾ ಎರಡು... ಮುಂತಾದ ಕನ್ನಡ ಸಿನಿಮಾಗಳು ಪ್ರದರ್ಶನ ಕಾಣುತ್ತಿವೆ. ☯




# ಗಿಲ್ಲಿ ಕೆಎಂಎಫ್ ಬ್ರ್ಯಾಂಡ್ ಅಂಬಾಸಿಡರ್?!

ರಾಜ್ಯಾದ್ಯಂತ ಅಪಾರ ಜನಪ್ರಿಯತೆ ಗಳಿಸಿರುವ ಗಿಲ್ಲಿಯನ್ನು, ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ತನ್ನ ಉತ್ಪನ್ನಗಳ ಮುಖವಾಗಿ ಆಯ್ಕೆ ಮಾಡಲು ಮುಂದಾಗಿರುವ ಬಗ್ಗೆ ಚರ್ಚೆ ಜೋರಾಗಿದೆ. ವಿಶೇಷವಾಗಿ ನಂದಿನಿ ಹಾಲು ಹಾಗೂ ತುಪ್ಪಕ್ಕೆ ಬ್ರ್ಯಾಂಡ್ ಅಂಬಾಸಿಡರ್ ಆಗಿ ಗಿಲ್ಲಿಯನ್ನು ನೇಮಕ ಮಾಡುವ ಕುರಿತು ಪ್ರಾಥಮಿಕ ಮಟ್ಟದ ಪೂರ್ವ ತಯಾರಿ ನಡೆಯುತ್ತಿದೆ ಎನ್ನಲಾಗಿದೆ. ಗಿಲ್ಲಿಗೆ ಸದ್ಯ ಇರುವ ಜನಮನ್ನಣೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿಯೂ ಹೊಂದಿರುವ ವ್ಯಾಪಕ ಅಭಿಮಾನಿ ಬಳಗವೇ ಈ ನಿರ್ಧಾರಕ್ಕೆ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಯುವಜನತೆ ಮಾತ್ರವಲ್ಲದೆ, ಕುಟುಂಬಮಟ್ಟದಲ್ಲಿಯೂ ಗಿಲ್ಲಿಯ ಹೆಸರು ಮನೆ ಮಾತಾಗಿರುವುದು ಕೆಎಂಎಫ್ ಗಮನ ಸೆಳೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.



ಮೂಲಗಳ ಪ್ರಕಾರ, ಗಿಲ್ಲಿಗೆ ಲಕ್ಷಾಂತರ ರೂಪಾಯಿ ಸಂಭಾವನೆ ನೀಡುವ ಬಗ್ಗೆ ಕೂಡ ಚರ್ಚೆ ನಡೆದಿದೆ ಎನ್ನಲಾಗುತ್ತಿದೆ. ನಂದಿನಿ ಬ್ರ್ಯಾಂಡ್‌ನ್ನು ಇನ್ನಷ್ಟು ಜನರ ಬಳಿಗೆ ತಲುಪಿಸುವ ಉದ್ದೇಶದಿಂದ, ವಿಶ್ವಾಸಾರ್ಹ ಮತ್ತು ಜನಸ್ನೇಹಿ ಮುಖವನ್ನು ಬಳಸಿಕೊಳ್ಳುವ ತಂತ್ರದ ಭಾಗವಾಗಿಯೇ ಈ ಯೋಚನೆ ಮೂಡಿದೆ ಎಂದು ಹೇಳಲಾಗುತ್ತಿದೆ. ಈವರೆಗೆ ಕೆಎಂಎಫ್ ಅಥವಾ ಗಿಲ್ಲಿ ತಂಡದಿಂದ ಯಾವುದೇ ಅಧಿಕೃತ ಘೋಷಣೆ ಹೊರಬಿದ್ದಿಲ್ಲ. ಆದರೆ ಈ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದಂತೆ, ಅಭಿಮಾನಿಗಳು ಕುತೂಹಲದಿಂದ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ. 'ನಂದಿನಿಗೆ ಗಿಲ್ಲಿ ಸೂಕ್ತ ಆಯ್ಕೆ' ಎಂಬ ಅಭಿಪ್ರಾಯಗಳು ಕೂಡ ಹೆಚ್ಚಾಗಿ ಕೇಳಿಬರುತ್ತಿವೆ.

ಮುಂದಿನ ದಿನಗಳಲ್ಲಿ ಈ ಕುರಿತು ಅಧಿಕೃತ ಪ್ರಕಟಣೆ ಹೊರಬಿದ್ದರೆ, ರಾಜ್ಯದ ಡೈರಿ ಕ್ಷೇತ್ರದಲ್ಲೇ ಇದು ಗಮನಾರ್ಹ ಬೆಳವಣಿಗೆಯಾಗಿ ಪರಿಣಮಿಸುವ ಸಾಧ್ಯತೆ ಇದೆ. ಈಗಾಗಲೇ ನಂದಿನಿ ಬ್ರ್ಯಾಂಡ್‌ಗೆ ಇರುವ ನಂಬಿಕೆಗೆ, ಗಿಲ್ಲಿಯ ಜನಪ್ರಿಯತೆ ಸೇರ್ಪಡೆಯಾದರೆ, ಅದು ಮತ್ತಷ್ಟು ಬಲಪಡೆಯುವುದರಲ್ಲಿ ಅನುಮಾನವೇ ಇಲ್ಲ. ☯

Vol. 41 No. 35 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 tps://www.instagram.com/police_news?igsh=MWJ6bHJwZDRmZDc1aQ==